**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰھُمَّ اَیِّدْ اِمَامَنَا بِرُوْحِ الْقُدُسِ

وَبَارِكْ لَنَا فِیْ عُمُرِہٖ وَاَمْرِہٖ

بِسْمِ اللّٰہِ الرَّحْمٰنِ الرَّحِیْمِ نَحْمَدُہٗ وَنُصَلِّیْ عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 14

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

08 ಏಪ್ರಿಲ್ 2021, 08 ಶಹಾದತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 25 ಶಅ್‌ಬಾನ್ 1442 ಹಿಜರಿ ಖಮರಿ.


**ಅಲ್ಲಾಹನ ಉಪದೇಶ**

وَتَعَاوَنُوْا عَلَى الْبِرِّ وَالتَّقْوٰى

وَلَا تَعَاوَنُوْا عَلَى الْاِثْمِ وَالْعُدْوَانِ

وَاتَّقُوا اللّٰهَ اِنَّ اللّٰهَ شَدِيْدُ الْعِقَابِ

(ಅಲ್‌ಮಾಇದ: 03)

ಅಂದರೆ: ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. (ಆದರೆ) ಪಾಪಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು. ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ.

**ಅಲ್ಲಾಹನು ನಮ್ಮ ತಪ್ಪುಗಳಿಗೆ ನಮ್ಮನ್ನು ತಕ್ಷಣ ಶಿಕ್ಷಿಸುವುದಿಲ್ಲ. ಬದಲು ತನ್ನ ಕ್ಷಮಾಗುಣದಿಂದಾಗಿ ನಮ್ಮನ್ನು ರಕ್ಷಿಸುತ್ತಾನೆ ಅದೇ ರೀತಿಯಲ್ಲಿ ನಾವು ಸಹ ಇನ್ನೊಬ್ಬರ ತಪ್ಪುಗಳನ್ನು ನೋಡಿದ ತಕ್ಷಣ ಅವರನ್ನು ಹೀಯಾಳಿಸಲು ಮುಂದಾಗಬಾರದು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಅಲ್ಲಾಹನು ಯಾವ ರೀತಿ ಕ್ಷಮಿಸುವವನಾಗಿದ್ದಾನೆ ಎಂದರೆ, ಅವನು ಮಾನವನ ಪಾಪಗಳನ್ನು ಮತ್ತು ತಪ್ಪುಗಳನ್ನು ನೋಡುತ್ತಾನೆ. ಆದರೆ ತನ್ನ ಕಾಪಾಡುವ ನೀತಿಯಿಂದಾಗಿ ನಮ್ಮ ತಪ್ಪುಗಳನ್ನು ಸುಧಾರಿಸಿಕೊಳ್ಳಲು ಅವಕಾಶವನ್ನು ನೀಡುತ್ತಾನೆ. ಆದರೆ ಮನುಷ್ಯನು ಇನ್ನೊಬ್ಬರ ತಪ್ಪನ್ನು ನೋಡಿದ ತಕ್ಷಣ ಬೊಬ್ಬೆ ಹಾಕಲು ಪ್ರಾರಂಭಿಸುತ್ತಾನೆ. ವಾಸ್ತವವೇನೆಂದರೆ ಮನುಷ್ಯನಿಗೆ ತಾಳ್ಮೆಯಿಲ್ಲ. ಅಲ್ಲಾಹನು ಸಹನಶೀಲನೂ ಮತ್ತು ದಯಾವಂತನು ಆಗಿದ್ದಾನೆ. ಅತಿ ಗರ್ವಿಯಾದ ಮನುಷ್ಯನು ತನ್ನ ಆತ್ಮದ ಮೇಲೆ ದೌರ್ಜನ್ಯವನ್ನು ಎಸಗುತ್ತಾನೆ. ಒಮ್ಮೊಮ್ಮೆ ಅಲ್ಲಾಹನ ಸಹನಶೀಲನೆಯ ಕುರಿತು ಅರಿವಿಲ್ಲದ ಕಾರಣ ಉದ್ಧಟತನ ಮೆರೆಯುತ್ತಾನೆ. ಆಗ ಅವನ ಪ್ರಕೋಪಕ್ಕೆ ಕಾರಣವಾಗಿ ಶಿಕ್ಷೆಗೆ ಒಳಗಾಗುತ್ತಾನೆ. ಹಿಂದೂ ಧರ್ಮೀಯರು ಹೇಳುತ್ತಾರೆ: ಪರಮೇಶ್ವರನು ಮಿತಿ ಮೀರುವವನಿಗೆ ಶಿಕ್ಷಿಸಲು ವೀರನಾಗಿದ್ದಾನೆ. ಅಂದರೆ ದೇವನು ಮಿತಿ ಮೀರುವವರನ್ನು ಇಷ್ಟಪಡುವುದಿಲ್ಲ. ಆದರೂ ಅವನು ಬಹಳ ದಯಾವಂತನು ಕಾರುಣ್ಯನಿಧಿಯು ಆಗಿದ್ದಾನೆ. ಮನುಷ್ಯನು ಅವನ ಮುಂದೆ ದು:ಖಿತನಾಗಿ ಬೇಡಿಕೊಂಡರೆ ಅವನ ಮೇಲೆ ಕರುಣೆ ತೋರುವನು. ಅಂದ ಹಾಗೆ ಅಲ್ಲಾಹನು ನಮ್ಮ ತಪ್ಪುಗಳಿಗೆ ತಕ್ಷಣ ಶಿಕ್ಷಿಸುವುದಿಲ್ಲ. ಬದಲು ತನ್ನ ಕ್ಷಮಾಗುಣದಿಂದಾಗಿ ನಮ್ಮನ್ನು ರಕ್ಷಿಸುತ್ತಾನೆ ಅದೇ ರೀತಿಯಲ್ಲಿ ನಾವು ಸಹ ಇನ್ನೊಬ್ಬರ ತಪ್ಪುಗಳನ್ನು ಅವಗಣಿಸಬೇಕಾಗಿದೆ. ಅವರನ್ನು ಹೀಯಾಳಿಸಲು ಮುಂದಾಗಬಾರದು.

### ತಪ್ಪುಗಳ ಪರಿಹಾರವು ಅಸ್ತಗ್ಫಾರ್ ಆಗಿದೆ

ಕೆಲ ಜನರಿಗೆ ಎಂತಹ ಸ್ಥಿತಿ ಉಂಟಾಗುತ್ತದೆ. ಎಂದರೆ ಉದಾಹರಣೆಗೆ ನೌಕರಿಯಲ್ಲಿ ಅಥವಾ ಯಾವುದೇ ಕಾರಣದಿಂದ ಅವರ ಅವರ ವಯಸ್ಸಿನ ಬಹು ಭಾಗ ಅಂಧಕಾರದಲ್ಲಿ ಕಳೆಯುವಂತಾಗುತ್ತದೆ. ಪ್ರಮಾಣಿಕವಾಗಿ ನಮಾಝ್ ನಿರ್ವಹಿಸಲು ಸಾಧ್ಯವಾಗುವುದಿಲ್ಲ. 'ಖಾಲಲ್ಲಾಹ್' ಮತ್ತು 'ಖಾಲರಸೂಲ್' ಅಂದರೆ ಅಲ್ಲಾಹನ ಮತ್ತು ಅವರ ಪ್ರವಾದಿಯ ಮಾತುಗಳನ್ನು ಆಲಿಸುವ ಅವಕಾಶವು ಸಹ ದೊರೆಯುವುದಿಲ್ಲ. ಅಲ್ಲಾಹನ ಗ್ರಂಥದ ಬಗ್ಗೆ ಚಿಂತಿಸುವ ಅವಕಾಶವು ದೊರೆಯುವುದಿಲ್ಲ. ಇಂತಹ ಸ್ಥಿತಿ ಮುಂದುವರೆದಾಗ ಅದೇ ಅವರ ರೂಢಿಯಾಗಿಬಿಡುತ್ತದೆ. ಇಂತಹ ಸಮಯದಲ್ಲಿ ಮನುಷ್ಯನು ಕ್ಷಮಾಪಣೆ ಹಾಗೂ ಪಶ್ಚಾತ್ತಾಪದಿಂದ ವರ್ತಿಸಲಿಲ್ಲವಾದರೆ ತಿಳಿದುಕೊಳ್ಳಿರಿ. ಅವನಷ್ಟು ದೌರ್ಭಾಗ್ಯವಂತ ಇನ್ನಾರೂ ಅಲ್ಲ. ಆಲಸ್ಯ ಮತ್ತು ತಪ್ಪುಗಳ ಅತ್ಯುತ್ತಮ ಪರಿಹಾರ ಅಂದರೆ ಅಸ್ತಗ್ಫಾರ್ ಆಗಿದೆ. ಗತ ತಪ್ಪುಗಳ ಮತ್ತು ಆಲಸ್ಯಗಳಿಂದಾಗಿ ಯಾವುದೇ ಆಪತ್ತುಗಳು ಎದುರಾದರೆ ರಾತ್ರಿಗಳಲ್ಲಿ ಎದ್ದು ಸಾಷ್ಟಾಂಗವೆರಗಿ ದುಆ ಮಾಡಿರಿ ಮತ್ತು ಅಲ್ಲಾಹನ ಆಸ್ಥಾನದಲ್ಲಿ ಕಳಕಳಿಯಿಂದ ಮನಃ ಪೂರ್ವಕವಾಗಿ ಪವಿತ್ರ ಬದಲಾವಣೆ ಹೊಂದಲು ವಾಗ್ದಾನ ಮಾಡಿರಿ. **(ಮಲ್ಫೂಝಾತ್ ಸಂಪುಟ–1, ಪುಟ–273–274, ಮುದ್ರಣ ಖಾದಿಯಾನ್ 2018)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಹೀಗೆ ಅವರು ಉಪದೇಶ ನೀಡಿದ್ದರು. ತರಬೇತಿ ಮಾಡಿದ್ದರು. ಅಲ್ಲಾಹನ ಅನುಗ್ರಹದಿಂದ ಅವರ ಮಗನಿಗೆ ಹಾಗೆಯೇ ನಡೆಯಲು ಸೌಭಾಗ್ಯವೂ ಸಿಗುತ್ತಿದೆ. ಮುಂದೆಯೂ ಸೌಭಾಗ್ಯ ಸಿಗಲಿ. ಖುತ್ಬಗಳ ವೇಳೆ ಎಲ್ಲ ಕೆಲಸಗಳನ್ನು ಬಿಟ್ಟು ಶ್ರದ್ಧೆಯಿಂದ ಖುತ್ಬವನ್ನು ಕೇಳಬೇಕೆಂದು ಮನೆಯವರಿಗೆ ಅವರು ನಿರ್ದೇಶ ನೀಡಿದ್ದರು. ಖುತ್ಬದಲ್ಲಿ ಏನಾದರೂ ಉಪದೇಶ, ನಿರ್ದೇಶ, ಸಾಂಪತ್ತಿಕ ತ್ಯಾಗ ಮಾಡುವ ಆಹ್ವಾನ ಇದ್ದರೆ, ಖುತ್ಬ ಮುಗಿದ ಕೂಡಲೇ ಅದರ ಪ್ರಕಾರ ನಡೆಯುತ್ತಿದ್ದರು. ಅವರೊಂದಿಗೆ ಮಕ್ಕಳೊಡನೆ ಸಹ ಹಾಗೆ ಮಾಡಲು ಹೇಳುತ್ತಿದ್ದರು.

ಸದರ್ ಅಂಜುಮನ್‌ನಲ್ಲಿ ಅವರ ಅಸ್ಸಿಟಂಟ್ ಕಾನೂನು ಸಲಹೆಗಾರರಾಗಿದ್ದ ಮಿರ್ಝಾ ಅದೀಲ್ ಅಹ್ಮದ್ ಸಾಹಿಬ್‌ರು ಹೇಳುತ್ತಾರೆ: ಅವರು ಖಿಲಾಫತ್ತಿನ ಪ್ರೇಮಿಯಾಗಿದ್ದರು ಎಂದು ನಾನು ಕಂಡಿದ್ದೇನೆ. ಅವರಿಗೆ ದುಆದ ಮೇಲೆ ಅಚಂಚಲವಾದ ದೃಢವಿಶ್ವಾಸವಿತ್ತು. ಏನಾದರೂ ಕಷ್ಟತೆ ಇದ್ದರೆ ಅಥವಾ ಕಷ್ಟಕರವಾದ ಕೆಲಸವಿರುತ್ತಿದ್ದರೆ, ಅವರು ಹೇಳುತ್ತಿದ್ದರು: "ನಫ್ಲ್ ನಮಾಝ್‌ಗಳಲ್ಲಿ ಬಹಳ ದುಆ ಮಾಡಿದ್ದೇನೆ, ಸದಖ ಸಹ ಮಾಡಿದ್ದೇನೆ. ಖಲೀಫತುಲ್ ಮಸೀಹ್‌ರಿಗೆ ಸಹ ಪತ್ರ ಬರೆಯುವ. ನೋಡಿರಿ. ಅಲ್ಲಾಹನು ಕೃಪೆದೋರುವನು." ಬಹಳ ಸ್ವಾಭಿಮಾನಿ ವ್ಯಕ್ತಿಯಾಗಿದ್ದರು. ಆದರೆ ಜಮಾಅತಿನ ಕೆಲಸಕ್ಕಾಗಿ ಆಫೀಸಿನ ಚಹಾ ಮಾಡುವವರೊಡನೆ ಕೂಡ ಅಂಗಲಾಚಬೇಕಾಗಿ ಬಂದರೆ, ನಾಚುತ್ತಿರಲಿಲ್ಲ. ಆಫೀಸರೊಡನೆ ಸಂಪರ್ಕವಿರಿಸಲು ಸಾಧ್ಯವಿರುವ ಎಲ್ಲ ರೀತಿಯನ್ನು ಉಪಯೋಗಿಸುತ್ತಿದ್ದರು.

'ಅಂಜುಮನಿನ ಒಂದು ತೀರ್ಪಿನ ಪ್ರಕಾರ ನಡೆದರೆಅದು ಜಮಾಅತಿನ ಮೇಲೆ ಕೆಟ್ಟ ಪ್ರಭಾವ ಬೀರುವ ಸಾಧ್ಯತೆಯಿದೆ' ಎಂದು ಅವರು ಅಂಜುಮನಿನ ಒಂದು ತೀರ್ಪಿನ ಬಗ್ಗೆ ಅಭಿಪ್ರಾಯಪಟ್ಟಿದ್ದರು. ಈ ತೀರ್ಮಾನ ಸರಿಯಲ್ಲವೆಂದು ತೋರುತ್ತದೆ ಎಂದು ಅವರು ಹೇಳಿದರು. ಆದರೆ ಅನಂತರ ಅವರು ಹೇಳಿದರು: ಖಲೀಫತುಲ್ ಮಸೀಹ್‌ರಿಗೆ ನಾವು ನಮ್ಮ ಅಭಿಪ್ರಾಯವನ್ನು ಬರೆದು ತಿಳಿಸುತ್ತೇವೆ. ನಮ್ಮ ಕೆಲಸ ಖಲೀಫತುಲ್ ಮಸೀಹ್‌ರಿಗೆ ನಮ್ಮ ಅಭಿಪ್ರಾಯವನ್ನು ತಲುಪಿಸುವುದಾಗಿದೆ.ಅವರು ಏನು ತೀರ್ಮಾನ ಹೇಳುತ್ತಾರೋ ಅದರಲ್ಲೇ ಅನುಗ್ರಹವಿದೆ.

ಡಾಕ್ಟರ್ ಸುಲ್ತಾನ್ ಮುಬಶ್ಶಿರ್ ಸಾಹಿಬ್‌ರು ಹೇಳುತ್ತಾರೆ: ಅಧಿಕಾರಿಗಳೊಂದಿಗೆ ಸಂಬಂಧ ಸ್ಥಾಪಿಸುತ್ತಿದ್ದರು. ಅದನ್ನು ಯಾವಾಗಲೂ ಜಮಾಅತಿನ ಹಿತಕ್ಕಾಗಿ ಉಪಯೋಗಿಸುತ್ತಿದ್ದರು. ಅತಿ ಕಠಿಣವಾದ ಸ್ಥಿತಿಗಳಲ್ಲೂ ಅವರ ಮುಖದಲ್ಲಿ ಮುಗುಳ್ನಗೆ ಇರುತ್ತಿತ್ತು. ಅವರ ಮುಖದಲ್ಲಿ ಎಂದಿಗೂ ಗಾಬರಿಯ ಲಕ್ಷಣಗಳು ಇರುತ್ತಿರಲಿಲ್ಲ. ಜಮಾಅತಿನ ಮೊಕದ್ದಮೆಗೆ ಸಂಬಂಧಿಸಿ ಇತರ ಸಾಧ್ಯತೆಗಳೊಂದಿಗೆ ಜೀವಹಾನಿಯ ಸಾಧ್ಯತೆ ಕೂಡ ಇರುತ್ತಿದ್ದ ಸ್ಥಳಗಳಿಗೆ ಹೋಗಬೇಕಾಗಿ ಬರುತ್ತಿತ್ತು. ಆದರೆ ಧೈರ್ಯಶಾಲಿಯಾದ ಅವರು ಎಂದಿಗೂ ಅದರಿಂದ ಹಿಂಜರಿಕೆ ತೋರಿಸುತ್ತಿರಲಿಲ್ಲ. ನಾನು ಹೇಳಿದಂತೆ ಅವರಿಗೆ ಸಾಂಪತ್ತಿಕ ಸೌಲಭ್ಯಗಳನ್ನು ಅಲ್ಲಾಹನು ನೀಡಿದ್ದನು. ಬಾಂಡ್ಸ್‌ನ ಮುಖಾಂತರ ಅವರಿಗೆ ಅಲ್ಲಾಹನು ನೆರವು ನೀಡುತ್ತಿದ್ದನು. ಅದರಿಂದ ಅವರಿಗೆ ಬಹಳ ಹಣ ಲಭಿಸುತ್ತಿತ್ತು. ಡಾಕ್ಟರ್ ಸಾಹಿಬ್‌ರು ಹೇಳುತ್ತಾರೆ: ಒಂದು ಸಲ ಬಹುಶಃ ಅವರಿಗೆ 50 ಲಕ್ಷಗಳ ಇನಾಮು ಲಭಿಸಿತ್ತು. ಅದರಲ್ಲಿ ಸುಮಾರು ಶೇಕಡ 60ರಷ್ಟು ಅವರು ವಿವಿಧ ಫಂಡ್‌ಗಳಿಗೆ ಮತ್ತು ಬಡವರ ಸಹಾಯಕ್ಕಾಗಿ ನೀಡಿದರು. ಇದು ಒಂದು ಸಲದ ಘಟನೆಯಲ್ಲ. ಯಾವಾಗಲೂ ಅವರು ಹೀಗೆಯೇ ಮಾಡುತ್ತಿದ್ದರು. ಅಲ್ಲಾಹನು ಅವರಿಗೆ ಬಹಳ ಸಂಪತ್ತು ನೀಡುತ್ತಿದ್ದನು. ಅದರಿಂದ ಹೆಚ್ಚಿನ ಹಣವನ್ನು ಅವರು ಚಂದಾಗಳಿಗಾಗಿ ಮತ್ತು ಬಡವರ ಸಹಾಯಕ್ಕಾಗಿ ನೀಡುತ್ತಿದ್ದರು. ಅವರಿಗೆ ಎರಡು ಹಿರಿದಾದ ಅಭಿಲಾಷೆಯಿತ್ತು. ಅದಕ್ಕಾಗಿ ದುಆ ಮಾಡಲು ಸಹ ಹೇಳುತ್ತಿದ್ದರು. ಒಂದು ಏನೆಂದರೆ, ಕೊನೆಯುಸಿರು ತನಕ ಜಮಾಅತಿನ ಸೇವೆ ಮಾಡುತ್ತಿರಬೇಕು. ಇನ್ನೊಂದು ಆರೋಗ್ಯದ ಸ್ಥಿತಿಯಲ್ಲಿ ಲೋಕಕ್ಕೆ ವಿದಾಯ ಹೇಳಬೇಕು. ಯಾರ ಮೇಲೂ ಭಾರವಾಗಬಾರದು. ಅಲ್ಲಾಹನು ಅವರ ಈ ಎರಡು ಅಭಿಲಾಷೆಯನ್ನೂ ಈಡೇರಿಸಿದನು. ಹಲವಾರು ಗುಣಗಳಿದ್ದುವು. ನಾನು ಸಹ ನೋಡಿದ್ದೇನೆ. ಬಹಳ ಸಹನೆ ಮತ್ತು ಧೈರ್ಯದಿಂದ ಕೆಲಸ ಮಾಡುತ್ತಿದ್ದರು. ಎಂದಿಗೂ ಗಾಬರಿಗೊಳ್ಳುತ್ತಿರಲಿಲ್ಲ. ಚಿಂತಿತರಾಗುತ್ತಿರಲಿಲ್ಲ. ಅಲ್ಲಾಹನ ಮೇಲೆ ಅಸಾಮಾನ್ಯವಾದ ಭರವಸೆಯಿತ್ತು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳನ್ನು ಅವರ ದುಆಗಳ ವಾರಸುದಾರರನ್ನಾಗಿ ಮಾಡಲಿ. ನಮಾಝಿನ ನಂತರ ಇವರೆಲ್ಲರ ಜನಾಝ ಗಾಇಬ್ ನಿರ್ವಹಿಸುವೆನು. **ಇನ್‌ಶಾ ಅಲ್ಲಾಹ್.**

************

# ಖುತ್‌ಬ ಜುಮುಅ

**ಹೇ ಉಸ್ಮಾನ್, ಅಲ್ಲಾಹನು ನಿನಗೆ ಒಂದು ನಿಲುವಂಗಿಯನ್ನು ತೊಡಿಸುವನು. ಜನರು ಆ ನಿಲುವಂಗಿಯನ್ನು ಕಳಚಲು ಆವಶ್ಯಪಟ್ಟರೆ, ಅವರ ಹೇಳಿಕೆ ಪ್ರಕಾರ ನೀನು ಎಂದಿಗೂ ಅದನ್ನು ಕಳಚಬೇಡ. (ತಿರ್ಮಿಧಿಯ)**

## ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಧುನ್ನೂರೈನ್ ಹಝ್ರತ್ ಉಸ್ಮಾನ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ

**ಹಝ್ರತ್ ಉಸ್ಮಾನ್(ರ) ಎಂತಹ ವ್ಯಕ್ತಿಯಾಗಿದ್ದರೆಂದರೆ, ಅವರ ಬಗ್ಗೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು: ಅವರು ಇಸ್ಲಾಮಿಗಾಗಿ ಎಷ್ಟು ಸೇವೆಗಳನ್ನು ಮಾಡಿದ್ದಾರೆ ಎಂದರೆ, ಈಗ ಅವರು ಏನೇ ಮಾಡಿದರೂ ಅಲ್ಲಾಹನು ಅವರನ್ನು ಪ್ರಶ್ನಿಸಲಿಕ್ಕಿಲ್ಲ. ಇದು ತಿರ್ಮಿಧಿಯ ವರದಿಯಾಗಿದೆ. ಅದರ ಅರ್ಥ, ಅವರು ಇಸ್ಲಾಮನ್ನೇ ಬಿಟ್ಟುಬಿಟ್ಟರೂ ಅಲ್ಲಾಹನು ಅವರನ್ನು ಹಿಡಿಯಲಿಕ್ಕಿಲ್ಲವೆಂದಲ್ಲ. ಬದಲಿಗೆ ಅವರಲ್ಲಿ ಎಷ್ಟು ಒಳಿತುಗಳಿದ್ದುವು ಎಂದರೆ, ಅವರು ಒಳಿತಿನಲ್ಲಿ ಎಷ್ಟು ಔನತ್ಯವನ್ನು ಪಡೆದಿದ್ದರು ಎಂದರೆ, ಅಲ್ಲಾಹನ ಆದೇಶದ ವಿರುದ್ಧವಾಗಿ ಅವರು ಏನನ್ನೂ ಮಾಡಲು ಸಾಧ್ಯವಿರಲಿಲ್ಲ.**

**ನಾಲ್ಕು ದಿವಂಗತರಾದ ಸನ್ಮಾನ್ಯ ಅಬ್ದುಲ್ ಖಾದಿರ್ ಸಾಹಿಬ್, ಅಕ್ಬರ್ ಅಲಿ ಸಾಹಿಬ್, ರಬ್ವದಲ್ಲಿ ಈಗ ತಹ್ರೀಕ್ ಜದೀದಿನಲ್ಲಿ ವಕೀಲುಲ್ ಮಾಲ್ ಸಾಲಿಸ್ ಆಗಿದ್ದ ಖ಼ಾಲಿದ್ ಮಹ್ಮೂದುಲ್ ಹಸನ್ ಭಟ್ಟಿ ಸಾಹಿಬ್ ಮತ್ತು ಸದರ್ ಅಂಜುಮನ್ ಅಹ್ಮದಿಯಾದ ಕಾನೂನು ಸಲಹೆಗಾರರಾದ ಸನ್ಮಾನ್ಯ ಮುಬಾರಕ್ ಅಹ್ಮದ್ ತಾಹಿರ್ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26–02–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّآ إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ . اَلرَّحْمٰنِ الرَّحِيْمِ . مٰلِكِ يَوْمِ الدِّيْنِ .

اِيَّاكَ نَعْبُدُ وَاِيَّاكَ نَسْتَعِيْنُ . اِهْدِنَا الصِّرَاطَ الْمُسْتَقِيْمَ .

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ .

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಕಾಲದ ಯುದ್ಧಗಳ ಮತ್ತು ವಿಜಯಗಳ ಪ್ರಸ್ತಾಪ ನಡೆಯುತ್ತಿತ್ತು. ಇಂದು ಸಹ ಅದನ್ನೇ ಮುಂದುವರಿಸುತ್ತೇನೆ. ಅಲಿ ಬಿನ್ ಮುಹಮ್ಮದ್ ಮದಾಯನಿ ಹೇಳುತ್ತಾರೆ: ಹಝ್ರತ್ ಉಸ್ಮಾನ್‌ರ ಕಾಲಘಟ್ಟದಲ್ಲಿ ಹಿಜರೀ 30ರಲ್ಲಿ ತಬರಿಸ್ತಾನದಲ್ಲಿ ಹಝ್ರತ್ ಸಈದ್ ಬಿನ್ ಆಸ್(ರ) ಯುದ್ಧ ಮಾಡಿಕೊಂಡು ಅಲ್ಲಿಯ ಕೋಟೆಯ ಮೇಲೆ ವಿಜಯ ಸಾಧಿಸಿದರು. (ತಾರೀಖ್ ಅತ್ತಿಬರಿ ಸಂಪುಟ–5, ಪುಟ–102–103, 30ಹಿಜರಿ ದಾರುಲ್ ಫಿಕರ್ 1998)

ಅದೇ ರೀತಿಯಲ್ಲಿ ಹಿಜರೀ 31ರಲ್ಲಿ ಸುವಾರಿ ಮೇಲೆ ವಿಜಯ ಸಾಧಿಸಿಲಾಯಿತು. ಚರಿತ್ರೆಯ ಹೆಚ್ಚಿನ ಗ್ರಂಥಗಳಲ್ಲಿ ಈ ಯುದ್ಧ ಎಲ್ಲಿ ನಡೆದಿತ್ತು ಎಂಬುದರ ಬಗ್ಗೆ ಪ್ರಸ್ತಾಪವಿಲ್ಲ. ಈ ಯುದ್ಧ ಅಲೆಕ್ಸಾಂಡ್ರಿಯದಲ್ಲಿ ನಡೆದಿತ್ತು ಎಂದು ಅಲ್ಲಾಮ ಇಬ್ನು ಖ಼ುಲ್‌ದೂನ್ ಬರೆದಿರುವರು. (ತಾರೀಖ್ ಇಬ್ನೆ ಖುಲ್ದೂನ್ ಭಗ–2, ಪುಟ–575, ದಾರುಲ್ ಫಿಕರ್ ಬೈರೂತ್ 2000) (ಅನ್ನುಜೂಮುಝ್ಝಾಹಿರ ಫೀ ಮುಲೂಕ್ ಮಿಸ್ರ್ ವಲ್‌ಖಾಹಿರ, ಸಂಪುಟ–1, ಪುಟ–80, ದಾರುಲ್ ಕುತುಬ್ ಅಲ್‌ಮಿಸ್ರಿಯ 1929)

ಒಂದು ಹೇಳಿಕೆಯ ಪ್ರಕಾರ ಹಿಜರೀ 31ರಲ್ಲಿ ಮುಸ್ಲಿಮರ ರೋಮನ್ನರೊಂದಿಗೆ ಒಂದು ಯುದ್ಧ ನಡೆದಿತ್ತು. ಅದನ್ನು ಸುವಾರಿ ಯುದ್ಧವೆಂದು ಹೇಳಲಾಗುತ್ತದೆ. ಅಬೂ ಮಹ್‌ಶರ್‌ನ ವರದಿ ಪ್ರಕಾರ ಸುವಾರಿ ಯುದ್ಧ ಹಿಜರಿ 34ರಲ್ಲಿ ನಡೆದಿತ್ತು. ಅಸಾಬ್ದದ ಯುದ್ಧ ಹಿಜರೀ 31ರಲ್ಲಿ ನಡೆದಿತ್ತು. ವಾಖಿದಿಯ ಪ್ರಕಾರ ಸುವಾರಿ ಯುದ್ಧ ಮತ್ತು ಅಸಾಬ್ದ ಯುದ್ಧ ಎರಡೂ ಹಿಜರೀ 31ರಲ್ಲಿ ನಡೆದಿದ್ದುವು.

(ತಾರೀಖ್ ಅತ್ತಿಬರಿ ಸಂಪುಟ–5, ಪುಟ–115, ಅಸ್ಸವಾರಿ ಯುದ್ಧ 31ನೆ ಹಿಜರಿ, ದಾರುಲ್ ಫಿಕರ್ 1998)

ಫ್ರಂಚ್‌ನವರನ್ನು ಮತ್ತು ಬರ್ಬರನ್ನು ಹಝ್ರತ್ ಅಬ್ದುಲ್ಲಾಹ್ ಬಿನ್ ಅಬೀ ಸಅದ್ ಬಿನ್ ಅಬೀ ಸರಹ್ ಆಫ್ರಿಕದಲ್ಲಿ ಮತ್ತು ಸ್ಪೇನ್‌ನಲ್ಲಿ ಪರಾಜಯಗೊಳಿಸಿದಾಗ, ರೋಮನ್ನರು ಭಯಗೊಂಡರು. ಎಲ್ಲರೂ ಸೇರಿ ಖಸ್ತಂತೈನ್ ಬಿನ್ ಹರ್‌ಖಲ್‌ನ ಬಳಿಗೆ ಹೋಗಿ ಒಟ್ಟುಸೇರಿದರು. ಇಸ್ಲಾಮಿನ ಆರಂಭದಿಂದ ಇದು ವರೆಗೆ ನೋಡಿರದಷ್ಟು ಶಕ್ತವಾದ ಸೈನ್ಯದೊಂದಿಗೆ ಮುಸ್ಲಿಮರ ವಿರುದ್ಧ ಯುದ್ಧಮಾಡಲು ಅವರು ಹೊರಟರು. ಈ ಸೈನ್ಯ ಐನ್ನೂರು ಹಡಗುಗಳನ್ನು ಹೊಂದಿತ್ತು. ಅಮೀರ್ ಮುಆವಿಯ ಹಝ್ರತ್ ಅಬ್ದುಲ್ಲಾಹ್ ಬಿನ್ ಸಅದ್ ಬಿನ್ ಅಬೀ ಸರಹ್‌ರನ್ನು ನಾವಿಕ ಸೈನ್ಯದ ಅಮೀರರನ್ನಾಗಿ ನಿಶ್ಚಯಿಸಿದರು. ಉಭಯ ಸೈನ್ಯಗಳು ಮುಖಾಮುಖಿಯಾದಾಗ, ಶಕ್ತವಾದ ಯುದ್ಧ ನಡೆಯಿತು. ಕೊನೆಗೆ ಅಲ್ಲಾಹನ ಸಹಾಯದಿಂದ ಮುಸ್ಲಿಮರಿಗೆ ವಿಜಯ ಪ್ರಾಪ್ತವಾಯಿತು. ಕಸ್ತಂತೈನ್ ಮತ್ತು ಅವನ ಉಳಿದ ಸೈನ್ಯ ಅಲ್ಲಿಂದ ಓಡಿ ಪರಾರಿಯಾಯಿತು. (ತಾರೀಖ್ ಅತ್ತಿಬರಿ ಸಂಪುಟ–5, ಪುಟ–116, ದಾರುಲ್ ಫಿಕರ್ 1998) (ಅಲ್‌ಬಿದಾಯ ವನ್ನಹಾಯ ಲಿಇಬ್ನೆ ಕಸೀರ್ ಭಾಗ–7, ಪುಟ–152–153, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2001)

ಆರ್ಮೀನದ ವಿಜಯ ಹಿಜರಿ 31ರಲ್ಲಿ ಆಯಿತು. ವಾಖಿದಿಯ ಹೇಳಿಕೆ ಪ್ರಕಾರ ಹಿಜರೀ 31ರಲ್ಲಿ ಹಬೀಬ್ ಬಿನ್ ಮಸ್ಲಮ ವಹರಿಯ ಕೈಯಲ್ಲಿ ಆರ್ಮೀನದ ಮೇಲೆ ವಿಜಯ ಸಾಧಿಸಲಾಗಿತ್ತು. (ತಾರಿಖ್ ಅತ್ತಿಬರಿ, ಸಂಪುಟ–5, ಪುಟ–118, ದಾರುಲ್ ಫಿಕರ್ 1998)

ಖ಼ುರಾಸಾನ್ ವಿಜಯ ಹಿಜರೀ 31ರಲ್ಲಿ ಉಂಟಾಯಿತು. ಹಝ್ರತ್ ಅಬ್ದುಲ್ಲಾಹ್ ಬಿನ್ ಆಮಿರ್ ಖ಼ುರಾಸಾನ್ ಕಡೆಗೆ ರವಾನೆಯಾದರು ಮತ್ತು ಅವರು ಅಬ್ರಹ, ತೂಸ್ ಪಟ್ಟಣ, ಅಬೀ ವರ್ದ್ ಮತ್ತು ನಸಾಹ್ ಮೇಲೆ ವಿಜಯ ಸಾಧಿಸುತ್ತಾ ಸರ್‌ಖ಼ಸ್ ತಲುಪಿದರು. ಮರೂ ನಿವಾಸಿಗಳು ಸಹ ಅದೇ ವರ್ಷ ಸಂಧಾನ ಮಾಡಿದ್ದರು. (ತಾರೀಖ್ ಅತ್ತಿಬರಿ ಸಂಪುಟ–5, ಪುಟ–123, ದಾರುಲ್ ಫಿಕರ್ 1998)

ಮರೂ ತುರ್ಕಮಾನಿಸ್ತಾನದಲ್ಲಿದೆ. ಉಳಿದ ಪ್ರದೇಶ ಇರಾನನದ್ದಾಗಿದೆ. ಹಿಜರೀ 32ರಲ್ಲಿ ರೋಮ್ ನಗರದ ಕಡೆಗೆ ಮುಂದುವರಿಕೆ ನಡೆಯಿತು. ಹಿಜರೀ 32ರಲ್ಲಿ ಅಮೀರ್ ಮುಆವಿಯಾ ರೋಮ್ ನಗರದ ವಿರುದ್ಧ ಯುದ್ಧ ನಡೆಸುತ್ತಾ ಇಸ್ತಂಬೂಲಿನ ಪ್ರವೇಶದ್ವಾರದ ತನಕ ತಲುಪಿದರು. (ಅಲ್‌ಬಿದಾಯ ವನ್ನಹಾಯ ಲಿಇಬ್ನೆ ಕಸೀರ್ ಭಾಗ–7, ಪುಟ–155, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2001)

ಮರೂರೋಝ್, ತಾಲೀಖಾನ್, ಫಾರ್‌ಯಾಬ್, ಜೂಝ್ಜಾಜಾನ್ ಮತ್ತು ತಖ಼ಾರಿಸ್ತಾನದ ಮೇಲೆ ಹಿಜರೀ 32ರಲ್ಲಿ ವಿಜಯ ಸಾಧಿಸಲಾಯಿತು. ಮರೂರೋಝ್, ತಾಲಿಖಾನ್, ಈಗಿನ ಅಫ್ಘಾನಿಸ್ತಾನದ ಬಲಖ್ ಮತ್ತು ಮರೂರೋಝ್‌ನ ಮಧ್ಯದ ಪ್ರದೇಶವಾದ ಫಾರ್ಯಾಬ್‌ನ ಮೇಲೆ ಹಝ್ರತ್ ಅಬ್ದುಲ್ಲಾಹ್ ಬಿನ್ ಆಮಿರ್ ವಿಜಯ ಸಾಧಿಸಿದರು. ಫಾರ್ಯಾಬ್ ಮತ್ತು ಜೂಝ್ಜಾಜಾನ್ ಎರಡೂ ಅಫ್ಘಾನಿಸ್ತಾನದ ಪ್ರದೇಶಗಳಾಗಿವೆ. ತಖಾರಿಸ್ತಾನ ಸಹ ಅಫ್ಘಾನಿಸ್ತಾನದ ಪ್ರದೇಶವಾಗಿದೆ. ಇವೆಲ್ಲದರ ಮೇಲೆ ವಿಜಯ ಸಾಧಿಸಲಾಯಿತು. (ತಾರೀಖ್ ಅತ್ತಿಬರಿ ಸಂಪುಟ–2, ಪುಟ–630, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987) (ಸೈರುಸ್ಸಹಾಬ ಸಂಪುಟ–1, ಪುಟ–168, ದಾರುಲ್ ಇಶಾಅತ್ ಕರಾಚಿ 2004)

ಅಬುಲ್‌ಅಶ್‌ಬ್ ಸಅದಿ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಮರೂರೋಝ್, ತಾಲೀಖಾನ್, ಫಾರ್‌ಯಾಬ್ ಮತ್ತು ಜೂಝ್ಜಾಜಾನ್‌ರ ನಿವಾಸಿಗಳೊಂದಿಗೆ ಅಹ್‌ನಬ್ ಬಿನ್ ಖೈಸ್ ರಾತ್ರಿಯ ಅಂಧಕಾರ ಕವಿಯುವ ತನಕ ಯುದ್ಧ ನಡೆಸಿದರು. ಹೀಗೆ ಅಲ್ಲಾಹನು ಶತ್ರುಗಳನ್ನು ಪರಾಜಯಗೊಳಿಸಿ ನಾಶಪಡಿಸಿದನು. (ತಾರೀಖ್ ಅತ್ತಿಬರಿ ಸಂಪುಟ–5, ಪುಟ–130, ದಾರುಲ್ ಫಿಕರ್ 1998)

ಅಖ್‌ರಹ್ ಬಿನ್ ಹಾಬಸ್‌ರನ್ನು ಅಹ್ನಬ್ ಬಿನ್ ಖೈಸ್ ಕುದುರೆ ಸವಾರಿಗಳ ಒಂದು ಸೈನ್ಯದೊಂದಿಗೆ ಜೂಝ್ಜಾಜಾನ್‌ಗೆ ಕಳುಹಿಸಿದರು. ಅಹ್ನಬ್ ಸೋಲಿಸಿದ ಸೈನ್ಯದ ಉಳಿದ ಸೈನ್ಯದ ಬಳಿಗೆ ಅಖ್‌ರಹ್‌ರನ್ನು ಕಳುಹಿಸಲಾಗಿತ್ತು. ಹೀಗೆ ಅಖ್‌ರಹ್ ಬಿನ ಹಾಬಸ್ ಅವರೊಡನೆ ಶಕ್ತವಾದ ಯುದ್ಧ ನಡೆಸಿದರು. ಇದರಿಂದ ಅವರ ಅನೇಕ ಕುದುರೆ ಸವಾರರು ಶಹೀದ್‌ರಾದರು. ಆದಾಗ್ಯೂ ಅಲ್ಲಾಹನು ಮುಸ್ಲಿಮರಿಗೆ ವಿಜಯ ನೀಡಿದನು. (ತರೀಖ್ ಅತ್ತಿಬರಿ ಸಂಪುಟ–5, ಪುಟ–130–131, ದಾರುಲ್ ಫಿಕರ್ 1998)

ಹಿಜರೀ 32ರಲ್ಲಿ ಬಲಖ್‌ನ ಮೇಲೆ ವಿಜಯ ಸಾಧಿಸಲಾಯಿತು. ಮರೂರೋಝ್‌ನಿಂದ ಬಲಖ್‌ನ ಕಡೆಗೆ ಅಹ್‌ನಬ್ ಬಿನ್ ಖೈಸ್ ಹೋದರು. ಅಲ್ಲಿಗೆ ಹೋಗಿ ಬಲಖ್‌ನ ನಿವಾಸಿಗಳನ್ನು ಸುತ್ತುವರೆದರು. ಪುರಾತನ ಬಲಖ್ ಖ಼ುರಾಸಾನಿನ ಒಂದು ಮುಖ್ಯವಾದ ಪಟ್ಟಣವಾಗಿತ್ತು. ಇದು ಈಗಿನ ಅಫ್ಘಾನಸ್ತಾನದ ಅತ್ಯಂತ ಪುರಾತನ ಪಟ್ಟಣವಾಗಿದೆ. ಈಗ ಆ ಪುರಾತನ ಪಟ್ಟಣ ಒಂದು ಕಂದರದ ರೂಪದಲ್ಲಿ ಇದೆ. ಬಲಖ್ ನದಿಯ ಬಲಗಡೆ 12 ಕಿ.ಮಿ. ದೂರದಲ್ಲಿದೆ. ಅಲ್ಲಿಯ ಜನರು 4 ಲಕ್ಷ

ಮೊಬಲಗನ್ನು ಪಾವತಿಸುವ ಮೂಲಕ ಸಂಧಾನಕ್ಕೆ ವಿನಂತಿ ಮಾಡಿದರು. ಅಹ್‌ನಬ್ ಬಿನ್ ಖೈಸ್ ಅದನ್ನು ಸ್ವೀಕರಿಸಿದರು. (ತಾರೀಖ್ ಅತ್ತಿಬರಿ ಸಂಪುಟ–5, ಪುಟ–131, ದಾರುಲ್ ಫಿಕರ್ 1998) (ಮುಜಮುಲ್ ಬಲದಾನ್ ಸಂಪುಟ–1, ಪುಟ–568, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹರಾತ್‌ನ ಕಾರ್ಯಸಾಧನೆ ಹಿಜರೀ 32ರಲ್ಲಿ ನಡೆದಿತ್ತು. ಖ಼ಲೀದ್ ಬಿನ್ ಅಬ್ದುಲ್ಲಾಹ್ ಬಿನ್ ಹನ್‌ಫಿಯನ್ನು ಹಝ್ರ಼ತ್ ಉಸ್ಮಾನ್(ರ) ಹರಾತ್ ಮತ್ತು ಬಾಝ್ಗೈಸ್‌ನ ಕಡೆಗೆ ರವಾನೆ ಮಾಡಿದರು. ಅವರು ಅವೆರಡರ ಮೇಲೆ ವಿಜಯ ಸಾಧಿಸಿದರು. ಆದರೆ ಅಲ್ಲಿಯ ನಿವಾಸಿಗಳು ಬಂಡಾಯವೆದ್ದರು ಮತ್ತು ಖಾರುನ್ ಬಾದಶಾಹನ ಜೊತೆಗೆ ಸೇರಿದರು. (ತಾರೀಖ್ ಅತ್ತಿಬರಿ ಸಂಪುಟ–5, ಪುಟ–131, ದಾರುಲ್ ಫಿಕರ್ 1998)

ಹಿಜರೀ 32ರಲ್ಲಿ ಹಝ್ರ಼ತ್ ಅಬ್ದುಲ್ಲಾಹ್ ಬಿನ್ ಆಮಿರ್ ಖ಼ುರಾಸಾನಿನ ಮೇಲೆ ಖೈಸ್ ಬಿನ್ ಹಸೀಮ್‌ರನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದರು ಮತ್ತು ಸ್ವತಃ ಅಲ್ಲಿಂದ ಹೊರಟು ಹೋದರು. (ತಾರೀಖ್ ಅತ್ತಿಬರಿ ಸಂಪುಟ–5, ಪುಟ–132, ದಆರುಲ್ ಫಿಕರ್ 1998)

ಖಾರುನ್ ಮುಸ್ಲಿಮರ ವಿರುದ್ಧ ಒಂದು ದೊಡ್ಡ ಸೈನ್ಯವನ್ನು ತಯಾರಿಮಾಡಿ ಇರಿಸಿದ್ದರು. ಖೈಸ್ ಬಿನ್ ಹಸೀಂ ತನ್ನ ನೇತೃತ್ವವನ್ನು ಅಬ್ದುಲ್ಲಾಹ್ ಬಿನ್ ಹಾಝಿಮ್‌ರಿಗೆ ಒಪ್ಪಿಸಿ ಹಝ್ರ಼ತ್ ಅಬ್ದುಲ್ಲಾಹ್ ಬಿನ್ ಅಮ್ರ್‌ರ ಬಳಿಗೆ ಸಹಾಯ ಮತ್ತು ಕುಮ್ಮಕ್ಕಿಗಾಗಿ ಹೋದರು. (ತಾರೀಖ್ ಅತ್ತಿಬರಿ ಸಂಪುಟ–5, ಪುಟ–132–133, ದಾರುಲ್ ಫಿಕರ್ 1998)

ಅಬ್ದುಲ್ಲಾಹ್ ಬಿನ್ ಹಾಝಿಂ ನಾಲ್ಕು ಸಾವಿರದ ಸೈನ್ಯವನ್ನು ತೆಗೆದುಕೊಂಡು ಖಾರುನಿನ ವಿರುದ್ಧ ಯುದ್ಧ ಮಾಡಲು ಹೊರಟರು. ಅಬ್ದುಲ್ಲಾಹ್ ಬಿನ್ ಖ಼ಾಝಿಂ 600 ಸೈನಿಕರನ್ನು ಮುಖ್ಯ ಸೈನ್ಯದ ಮುಂದೆ ಕಳುಹಿಸಿದರು ಮತ್ತು ಅವರು ಅದರ ಹಿಂದೆ ರವಾನೆಯಾದರು. ಆ ಸೈನ್ಯ ಅರ್ಧ ರಾತ್ರಿಯ ಸಮಯದಲ್ಲಿ ಖಾರುನಿನ ಸೈನ್ಯದ ತನಕ ತಲುಪಿತು ಮತ್ತು ಅವರ ಮೇಲೆ ಹಲ್ಲೆ ನಡೆಸಿತು. ಈ ಅಚಾನಕ್ಕಾದ ಆಕ್ರಮಣದಿಂದ ಶತ್ರುಗಳು ಭಯಗೊಂಡರು. ಮುಸ್ಲಿಮರು ಉಳಿದ ಸೈನ್ಯ ತಲುಪಿದಾಗ ಶತ್ರುಗಳಿಗೆ ತೀವ್ರ ಪರಾಜಯ ಉಂಟಾಯಿತು. ಖಾರುನ್ ಕೊಲ್ಲಲ್ಪಟ್ಟನು. ಮುಸ್ಲಿಮರು ಸೈನ್ಯವನ್ನು ಬೆನ್ನಟ್ಟುತ್ತಾ ಹಲವಾರು ಜನರನ್ನು ಕೊಂದರು ಮತ್ತು ಬಂಧಿಸಿದರು.
(ತಾರೀಖ್ ಅತ್ತಿಬರಿ ಸಂಪುಟ–5, ಪುಟ–132, ದಾರುಲ್ ಫಿಕರ್ 1998)

ಹಝ್ರ಼ತ್ ಉಸ್ಮಾನ್‌ರ(ರ) ಕಾಲದಲ್ಲಿ ಭಾರತ–ಪಾಕಿಸ್ತಾನದ ಉಪಭೂಖಂಡದಲ್ಲಿ ಇಸ್ಲಾಮ್ ಧರ್ಮ ತಲುಪಿತ್ತು. ಇಮಾಂ ಯೂಸುಫ್, ಕಿತಾಬುಲ್ ಖ಼ರಾಜ್‌ನಲ್ಲಿ ಇಮಾಂ ಝೊಹರಿಯನ್ನು ಉಲ್ಲೇಖಿಸುತ್ತಾ ಬರೆಯುತ್ತಾರೆ: ಹಝ್ರ಼ತ್ ಉಮರ್‌ರ(ರ) ಕಾಲದಲ್ಲಿ ಈಜಿಪ್ಟ್ ಮತ್ತು ಸಿರಿಯದ ಮೇಲೆ ವಿಜಯ ಸಾಧಿಸಲಾಗಿತ್ತು. ಆಫ್ರಿಕ, ಖ಼ುರಾಸಾನ್ ಮತ್ತು ಸಿಂಧ್‌ನ ಸ್ವಲ್ಪ ಪ್ರದೇಶದ ಮೇಲೆ ಹಝ್ರ಼ತ್ ಉಸ್ಮಾನ್‌ರ(ರ) ಕಾಲದಲ್ಲಿ ವಿಜಯ ಸಾಧಿಸಲಾಯಿತು. (ಕಿತಾಬ್ ಅಲ್‌ಖಿರಾಜ್ , ಇಮಾಮ್ ಅಭೂ ಯೂಸುಫ್ ಪುಟ–218, ಅಲ್‌ಮಕ್‌ತಬ ಅತ್ತೌಫೀಖಿಯ 2013)

ಉಪಭೂಖಂಡದಲ್ಲಿ ಇಸ್ಲಾಮಿನ ಪ್ರವೇಶದ ಬಗ್ಗೆ ಒಂದು ವರದಿ ಹೀಗೆ ಲಭಿಸುತ್ತದೆ. ಹಝ್ರ಼ತ್ ಉಸ್ಮಾನ್‌ರ(ರ) ಕಾಲದಲ್ಲಿ ಹಝ್ರ಼ತ್ ಅಬ್ದುಲ್ಲಾಹ್ ಬಿನ್ ಮುಅಮ್ಮರ್‌ರಿಗೆ ಸೈನ್ಯದ ಒಂದು ತುಕಡಿಯನ್ನು ಕೊಟ್ಟು ಮಕ್‌ರಾನ್ ಮತ್ತು ಸಿಂಧ್‌ನ ಕಡೆಗೆ ಕಳುಹಿಸಲಾಯಿತು. ಮಕ್‌ರಾನಿನ ಮೇಲಿನ ವಿಜಯ ಸಾಧನೆಯಲ್ಲಿ ಅವರು ಬಹಳವಾಗಿ ಶೌರ್ಯದ ಕೌಶಲವನ್ನು ತೋರಿಸಿದರು. ಅನಂತರ ವಿಜಯ ಸಾಧಿಸಲಾದ ಸುತ್ತುಮುತ್ತಲಿನ ಆ ಪ್ರದೇಶಗಳ ನೇತೃತ್ವವನ್ನು ಅವರಿಗೆ ಒಪ್ಪಿಸಲಾಯಿತು.
(ಬರ್ರೆ ಸಗೀರ್ ಮೆ ಇಸ್ಲಾಮ್ ಕೆ ಅವ್ವಲೀನ್ ನಖೂಶ್, ಮುಹಮ್ಮದ್ ಇಸ್ಹಾಖ್ ಭಟ್ಟಿ ಪುಟ–63 ನವೆಂಬರ್ 2009)

ಈಗಿನ ಅಫ್ಘಾನಿಸ್ತಾನದ ರಾಜಧಾನಿಯಾದ ಕಾಬೂಲ್‌ನಲ್ಲಿ ಇಸ್ಲಾಮಿನ ಸೈನ್ಯದ ಒಂದು ತುಕಡಿಯ ನೇತೃತ್ವವನ್ನು ವಹಿಸುತ್ತಾ ಹಝ್ರ಼ತ್ ಮುಜಾಶಿಅ ಇಸ್ಲಾಮಿನ ಶತ್ರುಗಳ ವಿರುದ್ಧ ಧರ್ಮಯುದ್ಧ ಮಾಡಿದರು. ಚರಿತ್ರೆಗಾರರ ಪ್ರಕಾರ ಆ ಕಾಲದಲ್ಲಿ ಕಾಬೂಲ್ ಭಾರತದ ಭಾಗವಾಗಿತ್ತು. ಹಝ್ರ಼ತ್ ಉಸ್ಮಾನ್‌ರ(ರ) ಖ಼ಿಲಾಫತ್ ಕಾಲದಲ್ಲಿ, ಹಝ್ರ಼ತ್ ಮುಜಾಶಿಅ ಪಾಕಿಸ್ತಾನದ ರಾಜ್ಯವಾದ ಬಲೋಚಿಸ್ತಾನದಲ್ಲಿ ಇಸ್ಲಾಮಿನ ಎದುರಾಳಿಗಳ ವಿರುದ್ಧ ಯುದ್ಧ ನಡೆಸಿದರು. ಅದಕ್ಕೆ ಸೇರಿಕೊಂಡಿರುವ ಪ್ರದೇಶವಾದ ಸಜಿಸ್ತಾನದಲ್ಲಿ ಧ್ವಜಾರೋಹಣ ನಡೆಸಿದರು. ಅನಂತರ ಮುಸ್ಲಿಮರು ಉಪಭೂಖಂಡದ ಈ ಪ್ರದೇಶಗಳಲ್ಲಿ ನೆಲೆಸಿದರು ಮತ್ತು ಅವುಗಳನ್ನು ತಮ್ಮ ಸ್ವದೇಶವನ್ನಾಗಿ ಮಾಡಿದರು. (ಬರ್ರೆ ಸಗೀರ್ ಮೆ ಇಸ್ಲಾಮ್ ಕೆ ಅವ್ವಲೀನ್ ನಖೂಶ್, ಮುಹಮ್ಮದ್ ಇಸ್ಹಾಖ್ ಭಟ್ಟಿ ಪುಟ–65 ನವೆಂಬರ್ 2009)

ಹಝ್ರ಼ತ್ ಉಸ್ಮಾನ್‌ರ(ರ) ಖ಼ಿಲಾಫತ್ ಕಾಲದಲ್ಲಿ ನಡೆದ ಫಿತ್ನದ ಕುರಿತು ಹಝ್ರ಼ತ್ ಪೈಗಂಬರರ(ಸ) ಭವಿಷ್ಯವಾಣಿಗಳು ಸಹ ಇವೆ. ಹಝ್ರ಼ತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರ಼ತ್ ಆಇಶ(ರ) ವರದಿ ಮಾಡುತ್ತಾರೆ: ಹೇ ಉಸ್ಮಾನ್, ಅಲ್ಲಾಹನು ನಿನಗೆ ಒಂದು ನಿಲುವಂಗಿಯನ್ನು ತೊಡಿಸುವನು. ಜನರು ಆ ನಿಲುವಂಗಿಯನ್ನು ಕಳಚಲು ಆವಶ್ಯಪಟ್ಟರೆ, ಅವರ ಹೇಳಿಕೆ ಪ್ರಕಾರ ನೀನು ಎಂದಿಗೂ ಅದನ್ನು ಕಳಚಬೇಡ. ಇದು ತಿರ್ಮಿಧ಼ಿಯ ವರದಿಯಾಗಿದೆ. (ಸುನನ್ ಅತ್ತಿರ್‌ಮಿಝಿ, ಅಬ್ವಾಬುಲ್ ಮನಾಖಿಬ್ , ಹದೀಸ್–3705)

ಸುನನ್ ಇಬ್ನು ಮಾಜದಲ್ಲಿ ಈ ವರದಿ ಹೀಗಿದೆ: ಹಝ್ರ಼ತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರ಼ತ್ ಆಇಶ(ರ) ವರದಿ ಮಾಡುತ್ತಾರೆ: ಹೇ ಉಸ್ಮಾನ್, ಅಲ್ಲಾಹನು ನಿನಗೆ ಎಂದಾದರೂ ಈ ಕರ್ತವ್ಯವನ್ನು ಒಪ್ಪಿಸಿದರೆ, ಅಲ್ಲಾಹನು ನಿನಗೆ ತೊಡಿಸಿದ ನಿಲುವಂಗಿಯನ್ನು ಕಳಚಲು ಕಪಟವಿಶ್ವಾಸಿಗಳು ಬಯಸುವರು. ಆದರೆ ನೀನು ಅದನ್ನು ಕಳಚಬಾರದು. ಹಝ್ರ಼ತ್ ಪೈಗಂಬರ್(ಸ) ಹೀಗೆ ಮೂರು ಬಾರಿ ಹೇಳಿದರು. ವರದಿಗಾರರಾದ ನುಮಾನ್ ಹಝ್ರ಼ತ್ ಆಇಶರೊಡನೆ(ರ) ಕೇಳಿದರು: ನೀವು ಈ ಸಂಗತಿಯನ್ನು ಇಲ್ಲಿಯ ವರೆಗೆ ಜನರೊಡನೆ ಹೇಳದಿರಲು ಕಾರಣವೇನು? ಹಝ್ರ಼ತ್ ಆಇಶ(ರ) ಹೇಳಿದರು: ನಾನು ಈ ಸಂಗತಿಯನ್ನು ಮರೆತುಬಿಡುವಂತೆ ಮಾಡಲಾಗಿತ್ತು. (ಸುನನ್‌ಇಬ್ನು ಮಾಜ ಇಫ್‌ತೆತಾಹುಲ್ ಕಿತಾಬ್, ಹದೀಸ್–111)

ಹಝ್ರ಼ತ್ ಕಅ್‌ಬ್ ಬಿನ್ ಅಜ್‌ರಹ್ ವರದಿ ಮಾಡುತ್ತಾರೆ: ಹಝ್ರ಼ತ್ ಪೈಗಂಬರ್(ಸ) ಸಮೀಪದಲ್ಲೇ ಬರಲಿರುವ ಒಂದು ಫಿತ್ನದ ಬಗ್ಗೆ ಪ್ರಸ್ತಾಪಿಸಿದರು. ಅಷ್ಟರಲ್ಲಿ ತಲೆ ಮರೆಸಿಕೊಂಡಿದ್ದ ಒಬ್ಬ ವ್ಯಕ್ತಿ ಅಲ್ಲಿಂದ ದಾಟಿಹೋದರು. ಹಝ್ರ಼ತ್ ಪೈಗಂಬರ್(ಸ) ಹೇಳಿದರು: ಆ ವ್ಯಕ್ತಿ ಆ ದಿನ ಸನ್ಮಾರ್ಗದಲ್ಲಿ ಆಗಿರುವರು. ವರದಿಗಾರ ಹೇಳುತ್ತಾರೆ: ನಾನು ರಭಸದಿಂದ ಜಿಗಿದುಕೊಂಡು ಆ ವ್ಯಕ್ತಿಯನ್ನು ಎರಡೂ ಕೈಗಳಿಂದ ಹಿಡಿದೆ. ಅವರು ಹಝ್ರ಼ತ್ ಉಸ್ಮಾನ್(ರ) ಆಗಿದ್ದರು. ಅನಂತರ ನಾನು ಹಝ್ರ಼ತ್ ಪೈಗಂಬರರ(ಸ) ಕಡೆಗೆ ನೋಡುತ್ತಾ ಅವರು ಇವರೇ? ಎಂದು ಕೇಳಿದೆ. ಹೌದೆಂದು ಹಝ್ರ಼ತ್ ಪೈಗಂಬರ್(ಸ) ಹೇಳಿದರು. ಹಝ್ರ಼ತ್ ಆಯಿಶ(ರ) ಹೇಳುತ್ತಾರೆ: ಹಝ್ರ಼ತ್ ಪೈಗಂಬರ್(ಸ) ರೋಗಾವಸ್ಥೆಯಲ್ಲಿದ್ದಾಗ ಹೇಳಿದರು – ನನ್ನ ಸಮೀಪ ಕೆಲವು ಸಹಾಬಿಯರು ಇರಬೇಕೆಂದು ನಾನು ಬಯಸುತ್ತೇನೆ. ನಾವು ಕೇಳಿದೆವು: ಯಾ ರಸೂಲಲ್ಲಾಹ್, ನಾವು ನಮ್ಮ ಸನ್ನಿಧಿಗೆ ಹಝ್ರ಼ತ್ ಅಬೂಬಕರ್‌ರನ್ನು ಕರೆಯಲೇ? ಹಝ್ರ಼ತ್ ಪೈಗಂಬರ್(ಸ) ಮೌನವಾಗಿದ್ದರು. ಅನಂತರ ನಾವು ಕೇಳಿದೆವು: ನಿಮ್ಮ ಬಳಿಗೆ ಹಝ್ರ಼ತ್ ಉಮರ್‌ರನ್ನು ಕರೆಯಲೇ? ಆಗಲೂ ಹಝ್ರ಼ತ್ ಪೈಗಂಬರ್(ಸ) ಸುಮ್ಮನಿದ್ದರು. ನಿಮ್ಮ ಬಳಿಗೆ ಹಝ್ರ಼ತ್ ಉಸ್ಮಾನ್‌ರನ್ನು ಕರೆಯಲೇ? ಎಂದು ನಾವು ಕೇಳಿದೆವು. ಸರಿಯೆಂದು ಹಝ್ರ಼ತ್ ಪೈಗಂಬರ್(ಸ) ಹೇಳಿದರು. ಹಝ್ರ಼ತ್ ಉಸ್ಮಾನ್(ರ) ಬಂದು ಹಝ್ರ಼ತ್ ಪೈಗಂಬರ್‌ರನ್ನು(ಸ) ಏಕಾಂತದಲ್ಲಿ ಭೇಟಿಯಾದರು. ಹಝ್ರ಼ತ್ ಪೈಗಂಬರ್(ಸ) ಅವರೊಡನೆ ಮಾತನಾಡಲು ಶುರುಮಾಡಿದರು. ಹಝ್ರ಼ತ್ ಉಸ್ಮಾನ್‌ರ(ರ) ಮುಖದ ಬಣ್ಣ ಬದಲಾಗುತ್ತಿತ್ತು. ಖೈಸ್ ಹೇಳುತ್ತಾರೆ: ಹಝ್ರ಼ತ್ ಉಸ್ಮಾನ್(ರ) ಸ್ವತಂತ್ರಗೊಳಿಸಿದ ಗುಲಾಮರಾದ ಅಬೂಸಹ್‌ಲ ನನ್ನೊಡನೆ ಹೇಳಿದರು: ಹಝ್ರ಼ತ್ ಉಸ್ಮಾನ್ ಬಿನ್ ಅಫ್ಫಾನ್(ರ) ಯೌಮುದ್ದಾರ್‌ನ ವೇಳೆ ಹೇಳಿದರು: ಹಝ್ರ಼ತ್ ಪೈಗಂಬರ್(ಸ) ನನ್ನೊಡನೆ ಒಂದು ತಾಕೀತು ಮಾಡಿದ್ದರು. ನಾನು ಅದರ ಕಡೆಗೆ ಹೋಗುತ್ತಿರುವೆನು. **ಅನ ಸಾಬಿರುನ್ ಅಲೈಹಿ**. ನಾನು ಅದರ ಮೇಲೆ ಸುದೃಢವಾಗಿ ನೆಲೆನಿಂತಿರುವೆನು.

ಹಝ್ರ಼ತ್ ಉಸ್ಮಾನ್‌ರನ್ನು(ರ) ಅವರ ಮನೆಯಲ್ಲೇ ಕಪಟವಿಶ್ವಾಸಿಗಳು ಸುತ್ತುವರೆದ ನಂತರ ಅವರನ್ನು ನಿರ್ದಯವಾಗಿ ಶಹೀದ್ ಮಾಡಿದ್ದ ದಿನವನ್ನು ಯೌಮುದ್ದಾರ್ ಎಂದು ಹೇಳಲಾಗುತ್ತದೆ. (ಸುನನ್ ಇಬ್ನೆ ಮಾಜ ಇಫ್‌ತಿತಾಹುಲ್ ಕಿತಾಬ್, ಹದೀಸ್–113)

ಹಝ್ರ಼ತ್ ಉಸ್ಮಾನ್‌ರ(ರ) ಖ಼ಿಲಾಫತ್ ಕಾಲದಲ್ಲಿ ತಲೆಯೆತ್ತಿದ ಭಿನ್ನತೆಯ ಮತ್ತು ಅದರ ಕಾರಣಗಳ ಬಗ್ಗೆ ಹಝ್ರ಼ತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಮಹಾನುಭಾವರಾದ ಹಝ್ರ಼ತ್ ಉಸ್ಮಾನ್(ರ) ಮತ್ತು ಹಝ್ರ಼ತ್ ಅಲಿ(ರ) ಇಬ್ಬರೂ ಇಸ್ಲಾಮಿನ ತ್ಯಾಗಿಗಳಲ್ಲಿ ಮೊದಲಿಗರಾಗಿದ್ದರು. ಅವರ ಸಂಗಡಿಗರು ಸಹ ಇಸ್ಲಾಮಿನ ಅತ್ಯುತ್ತಮ ಫಲಗಳಾಗಿರುವರು. ಅವರ ಪ್ರಾಮಾಣಿಕತೆ ಮತ್ತು ದೇವಭಕ್ತಿಯ ಬಗ್ಗೆ ಆರೋಪ ಹೊರಿಸುವುದು ಯಥಾರ್ಥದಲ್ಲಿ ಇಸ್ಲಾಮಿನ ಮೇಲೆ ನ್ಯೂನತೆ ಹೊರಿಸುವುದಕ್ಕೆ ಸಮವಾಗಿದೆ. ಮುಸ್ಲಿಮರಲ್ಲಿ ಯಾರೇ ಆಗಲಿ, ಶುದ್ಧ ಮನಸ್ಸಿನೊಂದಿಗೆ ಈ ಸತ್ಯತೆಯ ಬಗ್ಗೆ ಯೋಚಿಸುವುದಾದರೆ, ಆ ಮಹಾನುಭಾವರು ಸತ್ಯದಲ್ಲಿ ಎಲ್ಲ ರೀತಿಯ ಪಕ್ಷಪಾತದಿಂದ ಬಹಳ ದೂರವಿದ್ದರು ಎಂದು ಕಂಡುಕೊಳ್ಳುವರು.ಇದು ಸಾಕ್ಷ್ಯಾಧಾರವಿಲ್ಲದ ಸಂಗತಿಯಲ್ಲ. ಚರಿತ್ರೆಯ ಪುಟಗಳನ್ನು ಕಣ್ಣು ತೆರೆದು ನೋಡುವವರಿಗೆ ಅದರ ಸತ್ಯಾವಸ್ಥೆಯ ಬಗ್ಗೆ ಗೊತ್ತಾಗುವುದು. ನನ್ನ ಅನ್ವೇಷಣೆ ಪ್ರಕಾರ, ಈ ಮಹಾನುಭಾವರ ಮತ್ತು ಅವರ ಸಂಗಡಿಗರ ಕುರಿತು ಹೇಳಲಾಗುವ ಎಲ್ಲ ಸಂಗತಿಗಳು ಇಸ್ಲಾಮಿನ ಶತ್ರುಗಳ ಕೆಲಸಗಳಾಗಿವೆ. ಸಹಾಬರ ನಂತರ ಮುಸ್ಲಿಮರೆಂದು ಹೇಳಲ್ಪಡುವ ಜನರು ಸಹ ತಮ್ಮ ಸ್ವಾರ್ಥಕ್ಕಾಗಿ ಈ ಮಹಾನುಭಾವರಲ್ಲಿ ಒಬ್ಬರ ಅಥವಾ ಇನ್ನೊಬ್ಬರ ಮೇಲೆ ಆರೋಪ ಹೊರಿಸಿದ್ದರು. (ಇಸ್ಲಾಮ್ ಮೆ ಇಖ್ತಿಲಾಫಾತ್ ಕಾ ಆಗಾಝ್, ಅನ್ವಾರುಲ್ ಉಲೂಮ್ ಸಂಪುಟ–4, ಪುಟ–249)

ಆದಾಗ್ಯೂ ಸತ್ಯ ಸದಾ ಎಲ್ಲದರ ಮೇಲೆ ಇತ್ತು. ಸತ್ಯ ಎಂದಿಗೂ ರಹಸ್ಯ ಪರದೆಯ ಕೆಳಗೆ ತಲುಪಿರಲಿಲ್ಲ. ಪಿತೂರಿ ಎಲ್ಲಿಂದ ಉದ್ಭವಿಸಿತ್ತು ಎಂಬುದಾಗಿದೆ ಪ್ರಶ್ನೆ. ಅದಕ್ಕೆ ಕಾರಣೀಭೂತರು ಕೆಲವರು ಹಝ್ರ಼ತ್ ಅಲಿಯೆಂದೂ ಕೆಲವರು ಹಝ್ರ಼ತ್ ಉಸ್ಮಾನ್‌ರೆಂದೂ ಹೇಳುತ್ತಾರೆ. ಹಝ್ರ಼ತ್ ಉಸ್ಮಾನ್(ರ) ಕೆಲವು ನವೀನಾಚಾರಗಳನ್ನು ಶುರುಮಾಡಿದ್ದರ ಕಾರಣದಿಂದ ಮುಸ್ಲಿಮರು ಕುಪಿತರಾಗಿದ್ದರು ಎಂದು ಕೆಲವರು ಹೇಳುತ್ತಾರೆ. ಹಝ್ರ಼ತ್ ಅಲಿ(ರ) ಸ್ವತಃ ಖ಼ಲೀಫರಾಗಲು ರಹಸ್ಯವಾದ ಪ್ರಯತ್ನವನ್ನು ಶುರುಮಾಡಿದ್ದರು ಮತ್ತು ಹಝ್ರ಼ತ್ ಉಸ್ಮಾನ್‌ರ(ರ) ಎದುರಿಗೆ ವಿರೋಧವನ್ನು ಸೃಷ್ಟಿಸಿ ಅವರನ್ನು ಕೊಲೆ ಮಾಡಿಸಿದ್ದರು ಎಂದೂ ಕೆಲವರು ಹೇಳುತ್ತಾರೆ. ಆದರೆ ಈ ಎರಡೂ ಸಂಗತಿಗಳು ತಪ್ಪಾಗಿವೆ. ಹಝ್ರ಼ತ್ ಉಸ್ಮಾನ್(ರ) ಯಾವುದೇ ಹೊಸ ಆಚಾರಗಳನ್ನು ಶುರುಮಾಡಿರಲಿಲ್ಲ. ಅದೇ ರೀತಿ ಹಝ್ರ಼ತ್ ಅಲಿ(ರ) ಸ್ವತಃ ಖ಼ಲೀಫರಾಗಲು ಹಝ್ರ಼ತ್ ಉಸ್ಮಾನ್‌ರನ್ನು(ರ) ಬೇರೆಯವರ ಮೂಲಕ ವಧಿಸಿಯೂ ಇರಲಿಲ್ಲ ಮತ್ತು ಕೊಲ್ಲುವ ಯೋಜನೆಯಲ್ಲಿ ಭಾಗಿಯೂ ಆಗಿರಲಿಲ್ಲ. ಈ ಫಿತ್ನದ ಕಾರಣಗಳು ಬೇರೆಯೇ ಆಗಿದ್ದುವು. ಹಝ್ರ಼ತ್ ಉಸ್ಮಾನ್(ರ) ಮತ್ತು ಹಝ್ರ಼ತ್ ಅಲಿ(ರ) ಈ ರೀತಿಯ ಆರೋಪಗಳಿಂದ ಸಂಪೂರ್ಣವಾಗಿ ಮುಕ್ತರಾಗಿದ್ದರು. ಅವರು ಅತ್ಯಂತ ಪರಿಶುದ್ಧ ವ್ಯಕ್ತಿಗಳಾಗಿದ್ದರು. ಹಝ್ರ಼ತ್ ಉಸ್ಮಾನ್(ರ) ಎಂತಹ ವ್ಯಕ್ತಿಯಾಗಿದ್ದರೆಂದರೆ, ಅವರ ಬಗ್ಗೆ ಹಝ್ರ಼ತ್ ಪೈಗಂಬರ್(ಸ) ಹೀಗೆ ಹೇಳಿದ್ದರು: ಅವರು ಇಸ್ಲಾಮಿಗಾಗಿ ಎಷ್ಟು ಸೇವೆಗಳನ್ನು ಮಾಡಿದ್ದಾರೆ ಎಂದರೆ, ಈಗ ಅವರು ಏನೇ ಮಾಡಿದರೂ ಅಲ್ಲಾಹನು ಅವರನ್ನು ಪ್ರಶ್ನಿಸಲಿಕ್ಕಿಲ್ಲ. ಇದು ತಿರ್ಮಿಧ಼ಿಯ

ವರದಿಯಾಗಿದೆ. ಅದರ ಅರ್ಥ, ಅವರು ಇಸ್ಲಾಮನ್ನೇ ಬಿಟ್ಟುಬಿಟ್ಟರೂ ಅಲ್ಲಾಹನು ಅವರನ್ನು ಹಿಡಿಯಲಿಕ್ಕಿಲ್ಲವೆಂದಲ್ಲ. ಬದಲಿಗೆ ಅವರಲ್ಲಿ ಎಷ್ಟು ಒಳಿತುಗಳಿದ್ದುವು ಎಂದರೆ, ಅವರು ಒಳಿತಿನಲ್ಲಿ ಎಷ್ಟು ಔನತ್ಯವನ್ನು ಪಡೆದಿದ್ದರು ಎಂದರೆ, ಅಲ್ಲಾಹನ ಆದೇಶದ ವಿರುದ್ಧವಾಗಿ ಅವರು ಏನನ್ನೂ ಮಾಡಲು ಸಾಧ್ಯವಿರಲಿಲ್ಲ. ಹಝ್ರತ್ ಉಸ್ಮಾನ್(ರ) ಶರೀಅತಿನ ವಿರುದ್ಧ ಕೆಲಸ ಮಾಡುವ ವ್ಯಕ್ತಿಯಾಗಿರಲಿಲ್ಲ. ಹಝ್ರತ್ ಅಲಿ(ರ) ಸಹ ಖಿಲಾಫತಿಗಾಗಿ ರಹಸ್ಯ ಯೋಜನೆಗಳನ್ನು ಮಾಡುವ ವ್ಯಕ್ತಿ ಆಗಿರಲಿಲ್ಲ.
(ಇಸ್ಲಾಮ್ ಮೆ ಇಖ್ತಿಲಾಫಾತ್ ಕಾ ಆಗಾಝ್, ಅನ್ವಾರುಲ್ ಉಲೂಮ್ ಸಂಪುಟ–4, ಪುಟ–253–254)

ಹಝ್ರತ್ ಉಸ್ಮಾನ್‌ರ(ರ) ಖಿಲಾಫತಿನ ಆರಂಭಿಕ ಆರು ವರ್ಷಗಳಲ್ಲಿ ಯಾವುದೇ ಪಿತೂರಿಯನ್ನು ನಮಗೆ ಕಾಣಲು ಸಿಗುವುದಿಲ್ಲ. ಬದಲಿಗೆ ಸಾಮಾನ್ಯವಾಗಿ ಜನರು ಅವರಿಂದ ಸಂತುಷ್ಟರಾಗಿದ್ದರು ಎಂದು ಗೊತ್ತಾಗುತ್ತದೆ. ಆ ಕಾಲದಲ್ಲಿ ಜನರು ಹಝ್ರತ್ ಉಮರ್‌ಗಿಂತ(ರ) ಹೆಚ್ಚಾಗಿ ಹಝ್ರತ್ ಉಸ್ಮಾನ್‌ರಿಂದ(ರ) ಸಂತುಷ್ಟರಾಗಿದ್ದರು ಎಂದು ಚರಿತ್ರೆಯಿಂದ ತಿಳಿದುಬರುತ್ತದೆ. ಅವರು ಹಝ್ರತ್ ಉಮರ್‌ಗಿಂತ ಹೆಚ್ಚು ಪ್ರಿಯರಾಗಿದ್ದರು. ಜನರ ಹೃದಯದಲ್ಲಿ ಅವರ ಮೇಲೆ ಗೌರವಾದರ ಸಹ ಇತ್ತು. ಆ ಕಾಲದ ಕವಿಗಳು ಕವಿತೆಗಳ ಮೂಲಕ ಈ ಸಂಗತಿಗೆ ಹೀಗೆ ಸಾಕ್ಷ್ಯವಹಿಸುತ್ತಾರೆ: "ಹೇ ಆಜ್ಞಾಲಂಘಕರೇ, ಉಸ್ಮಾನ್‌ರ ಆಡಳಿತದಲ್ಲಿ ಜನರ ಸಂಪತ್ತನ್ನು ಲೂಟಿಮಾಡಿ ತಿನ್ನಬೇಡಿರಿ. ಏಕೆಂದರೆ ಇಬ್ನು ಅಫ್ಫಾನ್‌ರ ಬಗ್ಗೆ ನಮಗೆ ಸರಿಯಾಗಿ ಗೊತ್ತಿದೆ. ಅವರು ದರೋಡೆಗಾರರನ್ನು ಪವಿತ್ರ ಖುರ್‌ಆನನ ಆದೇಶ ಪ್ರಕಾರ ವಧಿಸುತ್ತಿದ್ದರು. ಸದಾ ಪವಿತ್ರ ಖುರ್‌ಆನಿನ ಆದೇಶಗಳನ್ನು ಅವರು ಸಂರಕ್ಷಿಸುತ್ತಿದ್ದರು. ಜನರ ಅಂಗಾಂಗಗಳ ಮೇಲೆ ಅದರ ಆದೇಶಗಳನ್ನು ಜಾರಿಗೊಳಿಸುತ್ತಿದ್ದರು." ಆದರೆ ಆರು ವರ್ಷಗಳ ನಂತರ, ಏಳನೇ ವರ್ಷದಲ್ಲಿ ನಾವು ಒಂದು ಕುತಂತ್ರವನ್ನು ಕಾಣುತ್ತೇವೆ. ಆ ಷಡ್ಯಂತ್ರ ಹಝ್ರತ್ ಉಸ್ಮಾನ್‌ರ(ರ) ವಿರುದ್ಧವಾಗಿರಲಿಲ್ಲ. ಬದಲಾಗಿಅದು ಸಹಾಬರ ಅಥವಾ ಕೆಲವು ಅಧಿಕಾರಿಗಳ ವಿರುದ್ಧವಾಗಿತ್ತು. ಈ ಬಗ್ಗೆ ತಬರಿ ಹೇಳುತ್ತಾರೆ: ಜನರ ಹಕ್ಕುಗಳ ಬಗ್ಗೆ ಹಝ್ರತ್ ಉಸ್ಮಾನ್(ರ) ಪೂರ್ಣವಾಗಿ ಕಾಳಜಿವಹಿಸುತ್ತಿದ್ದರು. ಆದರೆ ಇಸ್ಲಾಮಿನ ಮೊದಲಿಗರಲ್ಲದ ಮತ್ತು ಹಳೆಯವರಲ್ಲದ ಜನರಿಗೆ ಮೊದಲಿಗರ ಮತ್ತು ಹಳೆಯ ಮುಸ್ಲಿಮರಿಗೆ ಸಿಗುವಂತಹ ರೀತಿಯಲ್ಲಿಸಭೆಗಳಲ್ಲಿ ಗೌರವ ಸಿಗುತ್ತಿರಲಿಲ್ಲ, ಅಧಿಕಾರದಲ್ಲಿ ಅವರಿಗೆ ಸಮವಾದ ಪಾಲು ಸಿಗುತ್ತಿರಲಿಲ್ಲ ಮತ್ತು ಸಂಪತ್ತಿನಲ್ಲಿ ಸಮವಾದ ಹಕ್ಕುಗಳು ಸಿಗುತ್ತಿರಲಿಲ್ಲ. ಆಗ ಕೆಲವು ಕಾಲದ ನಂತರ ಕೆಲವು ಜನರು ಸಂಪತ್ತಿನ ವಿಶದ ವಿವರಗಳು ಅರಿಯಬೇಕೆಂದು ಒತ್ತಾಯ ಪಡಿಸಿದರು ಮತ್ತು ಸಮಾನ ರೀತಿಯಲ್ಲದ ಹಂಚಿಕೆಯನ್ನು ದೌರ್ಜನ್ಯವೆಂದು ಹೇಳಲು ಶುರುಮಾಡಿದರು. ಆದರೆ ಈ ಜನರು ಸಾಮಾನ್ಯ ಮುಸ್ಲಿಮರಿಗೆ ಹೆದರುತ್ತಲೂ ಇದ್ದರು. ಜನರು ವಿರೋಧಿಸುವರು ಎಂಬ ಭಯದಿಂದ ಅವರು ತಮ್ಮ ಅನಿಸಿಕೆಗಳನ್ನು ಜನರ ಮುಂದೆ ಪ್ರಕಟಿಸುತ್ತಿರಲಿಲ್ಲ. ಬದಲಿಗೆ ಅವರು ರಹಸ್ಯವಾಗಿ ಸಹಾಬರ ವಿರುದ್ಧ ಜನರೆಡೆಯಲ್ಲಿ ಆವೇಶ ಉಂಟಾಗುವಂತೆ ಮಾಡುತ್ತಿದ್ದರು. ಅರಿವಿಲ್ಲದ ಯಾವನಾದರೂ ಮುಸ್ಲಿಮನನ್ನು ಅಥವಾ ಗ್ರಾಮವಾಸಿಯಾದ ಸ್ವತಂತ್ರಗೊಂಡ ಗುಲಾಮನನ್ನು ಭೇಟಿಯಾದರೆ, ಅವನ ಮುಂದೆ ದೂರುಗಳ ಪುಸ್ತಕವನ್ನು ತೆರೆದು ಕುಳಿತುಕೊಳ್ಳುತ್ತಿದ್ದರು. ಅರಿವಿಲ್ಲದ ಕಾರಣದಿಂದ ಅಥವಾ ಸ್ವಂತ ಸ್ವಾರ್ಥ ಲಾಭಕ್ಕಾಗಿ ಕೆಲವರು ಅವರೊಡನೆ ಸೇರುತ್ತಿದ್ದರು. ನಿಧಾನವಾಗಿ ಇವರ ಸಂಖ್ಯೆ ಹೆಚ್ಚಾಗುತ್ತಿತ್ತು ಮತ್ತು ಅವರು ಹಿರಿದಾದ ಒಂದು ಗುಂಪಾದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯಾವುದಾದರೂ ಫಿತ್ನ ಉಂಟಾಗುವಾಗಲೆಲ್ಲ, ಅದಕ್ಕಿರುವ ಕಾರಣಗಳು ಅಸಾಧಾರಣವಾದ ರೀತಿಯಲ್ಲಿ ಒಟ್ಟುಗೂಡುತ್ತವೆ. ಒಂದು ಕಡೆ ಕೆಲವು ಅಸೂಯೆಗಾರರಲ್ಲಿ ಸಹಾಬರ ವಿರುದ್ಧ ಆವೇಶ ಉಂಟಾಗಲು ಶುರುವಾಯಿತು. ಇನ್ನೊಂದು ಕಡೆ ಧರ್ಮ ಬದಲಾಯಿಸುವ ಪ್ರತಿಯೊಬ್ಬರ ಹೃದಯದಲ್ಲಿ ಆರಂಭದಲ್ಲಿ ಇರುವಂತಹ ಆವೇಶ ಕುಂಠಿತಗೊಳ್ಳುವ ರೀತಿಯಲ್ಲಿ, ಮುಸ್ಲಿಮರ ಹೃದಯದಿಂದ ಇಸ್ಲಾಮಿನ ಆವೇಶ ಕಡಿಮೆ ಆಗುತ್ತಿತ್ತು. ಅವರಿಗೆ ಹಝ್ರತ್ ಪೈಗಂಬರರ(ಸ) ಸಹವಾಸವೂ ಸಿಕ್ಕಿರಲಿಲ್ಲ, ಅವರ ಸಹವಾಸ ಸಿಕ್ಕಿದ ಜನರ ಬಳಿ ಕೂಡ ಹೆಚ್ಚು ಕಾಲ ಇರುವ ಸಂದರ್ಭವೂ ಸಿಕ್ಕಿರಲಿಲ್ಲ. ಬದಲಿಗೆ ಇಸ್ಲಾಂ ಧರ್ಮ ಸ್ವೀಕರಿಸಿದ ಕೂಡಲೇ ನಾವು ಎಲ್ಲವನ್ನು ಕಲಿತಿದ್ದೇವೆ ಎಂದು ಅವರು ಭಾವಿಸಿದರು. ಇಸ್ಲಾಮಿನ ಆವೇಶ ಕಡಿಮೆಯಾಗುತ್ತಲೇ ಅವರ ಹೃದಯದಲ್ಲಿ ಇಸ್ಲಾಮಿನ ಸ್ವಾಧೀನ ಕಡಿಮೆಯಾಯಿತು. ಅವರು ಇಸ್ಲಾಂ ಸ್ವೀಕರಿಸುವುದಕ್ಕೆ ಮುಂಚೆ ಯಾವ ಪಾಪಗಳಲ್ಲಿ ಮುಳುಗಿದ್ದರೋ ಅವುಗಳನ್ನು ಮಾಡುವುದರಲ್ಲಿ ಸಂತೋಷಪಡಲು ಶುರುಮಾಡಿದರು. ಅವರ ಅಪರಾಧಕ್ಕೆ ಶಿಕ್ಷೆ ಸಿಗುವಾಗ, ಸುಧಾರಣೆಗೊಳ್ಳುವ ಬದಲಿಗೆ ಶಿಕ್ಷೆ ಕೊಡುವವರನ್ನು ನಾಶಪಡಿಸಲು ಮುಂದಾದರು. ಕೊನೆಗೆ ಇಸ್ಲಾಮಿನ ಒಗ್ಗಟ್ಟಿನಲ್ಲಿ ಬಹಳ ದೊಡ್ಡದಾದ ಬಿರುಕು ಉಂಟಾಗಲು ಇದು ಕಾರಣವಾಯಿತು. ಈ ಜನರ ಕೇಂದ್ರ ಕೂಫದಲ್ಲಾಗಿತ್ತು. ಆದರೆ ಅತ್ಯಂತ ಆಶ್ಚರ್ಯಕರವಾದ ಸಂಗತಿಯೇನೆಂದರೆ, ಮದೀನದಲ್ಲಿ ಒಂದು ಘಟನೆ ನಡೆಯಿತ್ತು. ಅದರಿಂದ ಗೊತ್ತಾಗುವುದೇನೆಂದರೆ, ಇಂದಿನ ಕಾಲದ ಅತ್ಯಂತ ಅಂಧಕಾರದ ಮೂಲೆಯಲ್ಲಿ ನೆಲೆಸಿರುವ ಮೂಢ ಜನರಿಗೆ ತಿಳಿದಿಲ್ಲದ ರೀತಿಯಲ್ಲಿ ಆ ಸಮಯದಲ್ಲಿ ಕೆಲವು ಜನರಿಗೆ ಇಸ್ಲಾಮಿನ ಬಗ್ಗೆ ಏನೂ ಗೊತ್ತಿರಲಿಲ್ಲ.

ಇಮ್ರಾನ್ ಬಿನ್ ಅಬಾನ್ ಎಂಬ ವ್ಯಕ್ತಿ ಒಬ್ಬಳು ಸ್ತ್ರೀಯೊಂದಿಗೆ ಅವಳ ಇದ್ದಃ ಕಾಲದಲ್ಲೇ ನಿಕಾಹ್ ಮಾಡಿದ್ದನು. ಹಝ್ರತ್ ಉಸ್ಮಾನ್‌ರಿಗೆ(ರ) ಇದರ ಅರಿವಾದಾಗ, ಅವರು ಅವನ ಮೇಲೆ ಕೋಪಗೊಂಡರು. ಆ ಸ್ತ್ರೀಯನ್ನು ಅವನಿಂದ ಬೇರ್ಪಡಿಸಿದರು. ಮಾತ್ರವಲ್ಲ ಅವನನ್ನು ಮದೀನದಿಂದ ಗಡಿಪಾರು ಮಾಡಿ ಬಸ್ರಾಗೆ ಕಳುಹಿಸಿದರು. ಕೆಲವು ಜನರು ಇಸ್ಲಾಮನ್ನು ಸ್ವೀಕರಿಸಿದ ಮಾತ್ರಕ್ಕೆ ತಮ್ಮನ್ನು ತಾವೇ ಇಸ್ಲಾಮಿನ ಪಂಡಿತರೆಂದು ಭಾವಿಸುತ್ತಿದ್ದರು ಎಂದು ಈ ಘಟನೆಯಿಂದ ಗೊತ್ತಾಗುತ್ತದೆ ಅಥವಾ ಹಲವು ಧರ್ಮ ವಿರುದ್ಧ ಯೋಚನೆಗಳ ಕಾರಣದಿಂದ ಶರೀಅತಿನ ಪ್ರಕಾರ ನಡೆಯುವುದು ವ್ಯರ್ಥವಾದ ಕೃತ್ಯವೆಂದು ಭಾವಿಸುತ್ತಿದ್ದರು. (ಇಸ್ಲಾವ್ ಮೆ ಇಖ್ತಿಲಾಫಾತ್ ಕಾ ಆಗಾಝ್, ಅನ್ವಾರುಲ್ ಉಲೂಮ್ ಸಂಪುಟ–4, ಪುಟ–262–263)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈ ಎಲ್ಲ ಪಿತೂರಿಗಳು, ರಹಸ್ಯವಾದ ಯೋಜನೆಯ ಕಾರಣದಿಂದಾಗಿತ್ತು. ಇದರ ಯಥಾರ್ಥ ಕಾರಣೀಭೂತರು ಯಹೂದಿಯರಾಗಿದ್ದರು. ಅವರೊಂದಿಗೆ ಧರ್ಮಭ್ರಷ್ಟರಾಗಿದ್ದ ಮತ್ತು ಭೌತಿಕ ಲಾಲಸೆಯಲ್ಲಿ ಮುಳುಗಿದ್ದ ಕೆಲವು ಮುಸ್ಲಿಮರು ಸಹ ಸೇರಿದ್ದರು. ಪಟ್ಟಣದ ಅಧಿಕಾರಿಗಳ ಯಾವುದೇ ತಪ್ಪೂ ಇರಲಿಲ್ಲ ಮತ್ತು ಅವರು ಫಿತ್ನದ ಕಾರಣೀಭೂತರೂ ಆಗಿರಲಿಲ್ಲ. ಆ ಅಧಿಕಾರಿಗಳನ್ನು ಹಝ್ರತ್ ಉಸ್ಮಾನ್(ರ) ಕೆಲಸಕ್ಕಾಗಿ ನಿಶ್ಚಯಿಸಿದ್ದರು. ಹಝ್ರತ್ ಉಸ್ಮಾನ್(ರ) ತನ್ನ ಇಳಿವಯಸ್ಸಿನಲ್ಲಿ ಮತ್ತು ಅನಾರೋಗ್ಯದ ಸ್ಥಿತಿಯಲ್ಲಿ ಕೂಡ ಇಸ್ಲಾಮಿನ ಒಗ್ಗಟಿನ ಹಗ್ಗವನ್ನು ತನ್ನ ಕೈಗಳಿಂದ ಬಿಗಿಯಾಗಿ ಹಿಡಿದು ಕುಳಿತುಕೊಂಡಿದ್ದರು ಮತ್ತು ಮುಸ್ಲಿಮ್ ಸಮುದಾಯ ಭಾರವನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡು ಇಸ್ಲಾಮಿನ ಶರೀಅತ್ತನ್ನು ನೆಲೆನಿಲ್ಲಿಸುವ ಚಿಂತೆಯಲ್ಲಿದ್ದರು. ವಿದ್ರೋಹಿಗಳನ್ನು ಮತ್ತು ದೌರ್ಜನ್ಯಗಾರರನ್ನು ಅವರ ಇಷ್ಟ ಪ್ರಕಾರ ಬಲಹೀನರ ಮೇಲೆ ದೌರ್ಜನ್ಯ ಮಾಡಲು ಹಝ್ರತ್ ಉಸ್ಮಾನ್(ರ) ಬಿಡುತ್ತಿರಲಿಲ್ಲ. ಈ ಸಂಗತಿಯನ್ನು ಒಂದು ಘಟನೆ ಸತ್ಯಪಡಿಸುತ್ತದೆ. ಅದೇನೆಂದರೆ, ಕೂಫದಲ್ಲಿ ಈ ಗಲಭೆಗಾರರು ಒಂದು ಸಭೆ ನಡೆಸಿದರು. 'ಹಝ್ರತ್ ಉಸ್ಮಾನ್‌ರ(ರ) ಆಡಳಿತವಿರುವ ತನಕ ಯಾರಿಗೂ ತಲೆಯೆತ್ತಲು ಸಾಧ್ಯವಲ್ಲ' ಎಂದು ಆ ಸಭೆಯಲ್ಲಿದ್ದ ಎಲ್ಲರೂ ಒಮ್ಮತಾಭಿಪ್ರಾಯದಿಂದ ಹೇಳಿದರು. ಹಝ್ರತ್ ಉಸ್ಮಾನ್(ರ) ಇರುವುದರಿಂದ ಕುಕೃತ್ಯಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ. ತಮ್ಮ ಉದ್ದೇಶಗಳನ್ನು ಈಡೇರಿಸಲು ಹಝ್ರತ್ ಉಸ್ಮಾನ್‌ರನ್ನು(ರ) ಮಧ್ಯದಿಂದ ತೊಡೆದುಹಾಕುವುದು ಆವಶ್ಯಕವಾಗಿತ್ತು. (ಇಸ್ಲಾಮ್ ಮೆ ಇಖ್ತಿಲಾಫಾತ್ ಕಾ ಆಗಾಝ್, ಅನ್ವಾರುಲ್ ಉಲೂಮ್ ಸಂಪುಟ–4, ಪುಟ–283–284)

ಹಝ್ರತ್ ಉಸ್ಮಾನ್(ರ) ಈ ಗಲಭೆಗಾರರನ್ನು ಸಹ ಕರೆದರು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರನ್ನು ಸಹ ಒಟ್ಟುಸೇರಿಸಿದರು. ಗಲಭೆಗಾರರು ಎಂತಹ ಪಿತೂರಿಯನ್ನು ಹರಡಲು ಪ್ರಯತ್ನಿಸುತ್ತಿದ್ದಾರೆ ಎಂದು ಅವರ ಅವಸ್ಥೆಯ ಬಗ್ಗೆ ಅವರೊಡನೆಯೇ ಹೇಳಿದರು. ಆಗ ಗಲಭೆಕೋರರನ್ನು ಕೊಲ್ಲಬೇಕೆಂದು ಎಲ್ಲ ಸಹಾಬರು ಫತ್ವಾ ನೀಡಿದರು. ಏಕೆಂದರೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು: "ಒಬ್ಬ ಇಮಾಂ ಇರುವಾಗ ಯಾವನಾದರೂ ತನ್ನನ್ನು ಅನುಸರಿಸಲು ಅಥವಾ ಬೇರೆ ಯಾರನ್ನಾದರೂ ಅನುಸರಿಸಲು ಜನರನ್ನು ಕರೆದರೆ ಅವನ ಮೇಲೆ ಅಲ್ಲಾಹನ ಶಾಪವಿದೆ ಮತ್ತು ಅವನು ಯಾರೇ ಆದರೂ ಅವನನ್ನು ಕೊಲ್ಲಬೇಕು." ಸಹಾಬರು ಹಝ್ರತ್ ಉಮರರ(ರ) ಹೇಳಿಕೆಯನ್ನು ಸಹ ಅವರಿಗೆ ನೆನಪಿಸಿಕೊಟ್ಟರು. ಅದು ಮುಸ್ಲಿಮಿನ ವರದಿಯಾಗಿದೆ. ಅದೇನೆಂದರೆ, 'ನಾನಿಲ್ಲದೆ ನೀವು ಯಾರನ್ನಾದರೂ ಕೊಲ್ಲುವುದನ್ನು ಅನುಮತನೀಯವೆಂದು ನಾನು ಭಾವಿಸುವುದಿಲ್ಲ.' ಎಂದರೆ ಆಡಳಿತದ ಅನುಮತಿ ಇಲ್ಲದೆ ಯಾವುದೇ ವ್ಯಕ್ತಿಯನ್ನು ಕೊಲ್ಲುವ ಅನುಮತಿಯಿಲ್ಲ. ಸಹಾಬರ ತೀರ್ಪನ್ನು ಕೇಳಿಕೊಂಡು ಹಝ್ರತ್ ಉಸ್ಮಾನ್(ರ) ಹೇಳಿದರು: ಇಲ್ಲ, ನಾವು ಅವರನ್ನು ಕ್ಷಮಿಸುತ್ತೇವೆ, ಅವರ ಬೇಡಿಕೆಗಳನ್ನು ಅಂಗೀಕರಿಸುವೆವು, ನಮ್ಮೆಲ್ಲ ಪ್ರಯತ್ನಗಳ ಮೂಲಕ ಅವರನ್ನು ಮನವರಿಕೆ ಮಾಡಿಸುವೆವು ಮತ್ತು ಅವರು ಶರೀಅತ್ತಿನ ಯಾವುದಾದರೂ ಮಿತಿಯನ್ನು ಮುರಿಯುವ ತನಕ ಅಥವಾಸತ್ಯನಿಷೇಧಿಗಳಾಗುವ ತನಕ ಅವರನ್ನು ವಿರೋಧಿಸುವುದಿಲ್ಲ.

ಅನಂತರ ಹೇಳಿದರು: ಈ ಗಲಭೆಕೋರರು ಕೆಲವು ಮಾತುಗಳನ್ನು ಹೇಳಿದ್ದಾರೆ, ಅವುಗಳು ನಿಮಗೂ ಗೊತ್ತಿದೆ. ಆದರೆ 'ನಾವು ಉಸ್ಮಾನ್‌ರೊಡನೆ ಕೆಲವು ಸಂಗತಿಗಳ ಕುರಿತು ವಾದಿಸಿದೆವು ಮತ್ತು ಉಸ್ಮಾನ್ ಪರಾಜಯಗೊಂಡರು ಎಂದು ಮರಳಿಹೋಗಿ ಹೇಳುವಂತಾಗಲು ಅವರು ಈ ಸಂಗತಿಗಳ ಬಗ್ಗೆ ನನ್ನೊಡನೆ ವಾದಿಸಲು ಬಯಸುತ್ತಿದ್ದಾರೆ. ಹಝ್ರತ್ ಉಸ್ಮಾನ್(ರ) ಸಹಾಬರೊಡನೆ ಹೇಳಿದರು: ಹಝ್ರತ್ ಪೈಗಂಬರ್(ಸ) ಯಾತ್ರೆಯ ವೇಳೆ ನಮಾಝ್ ಕಸ್ರ್ ಮಾಡುತ್ತಿದ್ದರೆಂದೂ ಆದರೆ ನಾನು ಯಾತ್ರೆಯಲ್ಲಿ ಪೂರ್ತಿ ನಮಾಝನ್ನು ನಿರ್ವಹಿಸಿದ್ದೆ ಎಂದೂ ಈ ಜನರು ಹೇಳುತ್ತಾರೆ. ಆದರೆ ನಾನು ಮಿನಾದಲ್ಲಿ ಮಾತ್ರವೇ ನಮಾಝನ್ನು ಪೂರ್ತಿಯಾಗಿ ನಿರ್ವಹಿಸಿದ್ದೆ. ಅದಕ್ಕೆ ಎರಡು ಕಾರಣಗಳಿವೆ. ಒಂದು, ಅಲ್ಲಿ ನನಗೆ ಸೊತ್ತಿದೆ ಮತ್ತು ನಾನು ಅಲ್ಲಿ ವಿವಾಹವನ್ನು ಮಾಡಿದ್ದೆ. ಎರಡು, ಆ ದಿನಗಳಲ್ಲಿ ಹಜ್ಜ್‌ಗಾಗಿ ನಾಲ್ಕೂ ಕಡೆಯಿಂದ ಜನರು ಬಂದಿದ್ದರು ಎಂದು ನನಗೆ ಗೊತ್ತಿತ್ತು. ಖಲೀಫರು ಎರಡು ರಕಅತ್ ನಮಾಝ್ ನಿರ್ವಹಿಸುತ್ತಾರೆ, ಆದ್ದರಿಂದ ನಮಾಝ್ ಎರಡು ರಕಅತ್‌ಗಳೇ ಆಗಿರಬಹುದು ಎಂದು ಅರಿವಿಲ್ಲದವರು ಹೇಳಬಹುದಾಗಿತ್ತು. ಆದ್ದರಿಂದ ನಾಲ್ಕು ರಕಅತ್ ಪೂರ್ತಿಯಾಗಿ ನಿರ್ವಹಿಸಿದ್ದೆ. ಇದು ಸರಿಯಲ್ಲವೇ? ಹೌದೆಂದು ಸಹಾಬಿಯರು ಹೇಳಿದರು. ಅನಂತರ ಹಝ್ರತ್ ಉಸ್ಮಾನ್(ರ) ಹೇಳಿದರು: ಅವರು ನನ್ನ ಮೇಲೆ ಹೊರಿಸುವ ಎರಡನೇ ಆಪಾದನೆ ಏನೆಂದರೆ, ನಾನು ಯಾರಿಗೂ ಸೇರದ ಭೂಮಿಯನ್ನು ಸರ್ಕಾರದ ಭೂಮಿಯನ್ನಾಗಿ ಮಾಡುವ ನವೀನಾಚಾರವನ್ನು ಶುರುಮಾಡಿದ್ದೇನೆ ಎಂದಾಗಿದೆ. ಆದರೆ ಈ ಆರೋಪ ತಪ್ಪಾಗಿದೆ. ಈ ರೀತಿ ನನಗಿಂತ ಮುಂಚೆಯೇ ಶುರುಮಾಡಲಾಗಿತ್ತು. ಹಝ್ರತ್ ಉಮರ್(ರ) ಇದನ್ನು ಶುರುಮಾಡಿದ್ದರು. ಸದಖದ ಒಂಟೆಗಳು ವರ್ಧಿಸಿದಾಗ, ನಾನು ಆ ರೀತಿಯನ್ನು ಇನ್ನೂ ಹೆಚ್ಚಿಸಿದೆ ಅಷ್ಟೆ. ಅದಕ್ಕೆ ಉಪಯೋಗಿಸುವ ಭೂಮಿ ಯಾರ ಸಂಪತ್ತೂ ಅಲ್ಲ. ಅದು ಸರ್ಕಾರಿ ಭೂಮಿಯಾದ ಕಾರಣದಿಂದ ಅದರಿಂದ ನನಗೆ ಯಾವುದೇ ಲಾಭವೂ ಇಲ್ಲ. ನನ್ನ ಬಳಿ ಎರಡು ಒಂಟೆಗಳು ಮಾತ್ರ ಇವೆ. ನಾನು ಖಲೀಫನಾದ ಆರಂಭದಲ್ಲಿ ಅರೇಬಿಯರಲ್ಲೇ ನಾನು ಅತ್ಯಂತ ಶ್ರೀಮಂತನಾಗಿದ್ದೆ. ಈಗ ನನ್ನ ಬಳಿ ಕೇವಲ ಎರಡು ಒಂಟೆಗಳು ಇವೆ. ಅವುಗಳನ್ನು ಹಜ್ಜ್‌ಗಾಗಿ ಇರಿಸಿದ್ದೇನೆ. ಇದು ಸರಿಯಲ್ಲವೇ? ಹೌದು, ಇದು ಸರಿಯೆಂದು ಸಹಾಬರು ಹೇಳಿದರು. ಅನಂತರ ಹಝ್ರತ್ ಉಸ್ಮಾನ್(ರ) ಹೇಳಿದರು: ನಾನು ಯುವಕರನ್ನು ಅಧಿಕಾರಿಗಳನ್ನಾಗಿ ಮಾಡುತ್ತೇನೆ ಎಂದು ಇವರು ಹೇಳುತ್ತಾರೆ: ಆದರೆ ನಾನು ಸಾತ್ವಿಕರಾದ, ಸದ್ಗುಣಗಳನ್ನು

ಹೊಂದಿರುವ ವ್ಯಕ್ತಿಗಳನ್ನು ಮಾತ್ರ ಅಧಿಕಾರಿಗಳನ್ನಾಗಿ ಮಾಡುತ್ತೇನೆ. ಹಝ್ರತ್ ಪೈಗಂಬರ್(ಸ) ಉಸಾಮ ಬಿನ್ ಝೈದ್‌ರನ್ನು ಸೇನಾಧಿಪತಿಯನ್ನಾಗಿ ನಿಶ್ಚಯಿಸಿದ್ದಾಗ, ಈಗ ನನ್ನ ಮೇಲೆ ಹೊರಿಸುವುದಕ್ಕಿಂತ ಹೆಚ್ಚು ಆಕ್ಷೇಪಗಳನ್ನು ಅವರ ಮೇಲೆ ಹೊರಿಸಲಾಗಿತ್ತು. ಇದು ಸರಿಯಲ್ಲವೇ? ಸರಿಯೆಂದು ಸಹಾಬರು ಉತ್ತರಿಸಿದರು. ಹಝ್ರತ್ ಉಸ್ಮಾನ್(ರ) ಹೇಳಿದರು: ಈ ಗಲಭೆಕೋರರು ಜನರ ಮುಂದೆ ನ್ಯೂನತೆಗಳನ್ನು ಹೇಳುತ್ತಿರುತ್ತಾರೆ. ಆದರೆ ಯಥಾರ್ಥ ಸಂಗತಿಯನ್ನು ಹೇಳುವುದಿಲ್ಲ. ಒಟ್ಟಿನಲ್ಲಿ, ಹಝ್ರತ್ ಉಸ್ಮಾನ್(ರ) ಎಲ್ಲ ಆಕ್ಷೇಪಗಳನ್ನು ಒಂದೊಂದಾಗಿ ಹೇಳುತ್ತಾ ಎಲ್ಲದಕ್ಕೂ ಉತ್ತರಗಳನ್ನು ನೀಡಿದರು.

ಗಲಭೆಗಾರರನ್ನು ವಧಿಸಬೇಕು ಎಂದು ಸಹಾಬರು ನಿರಂತರವಾಗಿ ಒತ್ತಾಯಪಡಿಸುತ್ತಿದ್ದರು. ಆದರೆ ಹಝ್ರತ್ ಉಸ್ಮಾನ್(ರ) ಅವರ ಮಾತನ್ನು ಅಂಗೀಕರಿಸಲಿಲ್ಲ. ಗಲಭೆಗಾರರನ್ನು ಅವರು ಬಿಟ್ಟುಬಿಟ್ಟರು. ತಬರಿ ಹೇಳುತ್ತಾರೆ: ಗಲಭೆಕೋರರನ್ನು ಕೊಲ್ಲಬೇಕು ಎಂದಲ್ಲದೆ, ಬೇರೆ ಯಾವುದೇ ಸಂಗತಿಯನ್ನು ಇತರ ಮುಸ್ಲಿಮರು ಒಪ್ಪುತ್ತಿರಲಿಲ್ಲ. ಆದರೆ ಹಝ್ರತ್ ಉಸ್ಮಾನ್(ರ) ಗಲಭೆಕೋರರನ್ನು ಶಿಕ್ಷಿಸಲು ತಯಾರಾಗಿರಲಿಲ್ಲ. ಗಲಭೆಕೋರರು ಯಾವೆಲ್ಲ ವಿಧದ ಮೋಸ ಮತ್ತು ವಂಚನೆ ಮಾಡುತ್ತಿದ್ದರು ಎಂದು ಈ ಘಟನೆಯಿಂದ ಗೊತ್ತಾಗುತ್ತದೆ. ಇಂದಿನ ಕಾಲದಲ್ಲಿ ಇರುವಂತಹ ಯಾತ್ರಾ ಸೌಕರ್ಯ ಮತ್ತು ಸಂಪರ್ಕ ಮಾಧ್ಯಮಗಳು ಇಲ್ಲದ ಕಾಲದಲ್ಲಿ, ಅರಿವಿಲ್ಲದ ಜನರನ್ನು ದಾರಿಗೆಡಿಸುವುದು ಬಹಳ ಸುಲಭವಾಗಿತ್ತು. ಸತ್ಯದಲ್ಲಿ, ಈ ಜನರ ಬಳಿ ಪಿತೂರಿ ಮಾಡಲು ತಕ್ಕುದಾದ ಯಾವುದೇ ಕಾರಣವಿರಲಿಲ್ಲ. ಸತ್ಯ ಅವರೊಂದಿಗೆ ಇರಲಿಲ್ಲ. ಅವರು ಸತ್ಯದ ಕಡೆಯೂ ಇರಲಿಲ್ಲ. ಅವರು ನಡೆಸಿದ ಎಲ್ಲ ಕುಕೃತ್ಯಗಳು ಮಿಥ್ಯ ಮತ್ತು ಸುಳ್ಳಿನ ಆಧಾರದಲ್ಲಾಗಿದ್ದುವು. ಹಝ್ರತ್ ಉಸ್ಮಾನ್‌ರ(ರ) ಕರುಣೆಯಿಂದ ಮಾತ್ರ ಅವರು ಸುರಕ್ಷಿತರಾಗಿದ್ದರು. ಇಲ್ಲದಿದ್ದರೆ ಮುಸ್ಲಿಮರು ಅವರನ್ನು ತುಂಡರಿಸಿ ಬಿಡುತ್ತಿದ್ದರು. ಜೀವತ್ಯಾಗದ ಮೂಲಕ ಗಳಿಸಲಾಗಿದ್ದ ಶಾಂತಿ ಸಮಾಧಾನವು ಕೆಲವು ಕಿಡಿಗೇಡಿಗಳ ಕುಕೃತ್ಯಗಳ ಕಾರಣದಿಂದ ಇಲ್ಲವಾಗುವುದನ್ನು ಹಳೆಯ ಮುಸ್ಲಿಮರಾಗಿದ್ದ ಸಹಾಬಿಯರಿಂದ ಸಹಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಗಲಭೆಕೋರರನ್ನು ಬೇಗನೇ ಶಿಕ್ಷಿಸದಿದ್ದರೆ ಇಸ್ಲಾಮಿನ ಆಡಳಿತ ಬೀಳುವುದು ಎಂದು ಸಹಾಬರಿಗೆ ತೋರುತ್ತಿತ್ತು. ಆದರೆ ಹಝ್ರತ್ ಉಸ್ಮಾನ್(ರ) ಕರುಣೆಯ ಒಂದು ಪೂರ್ಣ ಸ್ವರೂಪವಾಗಿದ್ದರು. ಹೇಗಾದರೂ ಅವರಿಗೆ ಸನ್ಮಾರ್ಗ ಸಿಗಲಿ ಮತ್ತು ಸತ್ಯನಿಷೇಧದೊಂದಿಗೆ ಅವರಿಗೆ ಮರಣ ಬಾರದಿರಲಿ ಎಂದು ಅವರು ಬಯಸಿದ್ದರು. ಆದ್ದರಿಂದ ಅವರಿಗೆ ಕಾಲಾವಕಾಶ ಕೊಡುತ್ತಿದ್ದರು. ಗಲಭೆಕೋರರ ಸ್ಪಷ್ಟವಾದ ವಿದ್ರೋಹದ ಬಗ್ಗೆ ಅವರು ವಿದ್ರೋಹದ ಉದ್ದೇಶವನ್ನು ಮಾತ್ರ ಹೊಂದಿದ್ದಾರೆ ಎಂದು ಹೇಳಿಕೊಂಡು ಅವರನ್ನು ಶಿಕ್ಷಿಸುವುದರಿಂದ ಹಿಂದೆ ಸರಿಯುತ್ತಿದ್ದರು. ಈ ಸಂಗತಿಯಿಂದ ತಿಳಿದುಬರುವುದೇನೆಂದರೆ, ಸಹಾಬರು ಈ ಗಲಭೆಕೋರರನ್ನು ಇಷ್ಟಪಡುತ್ತಿರಲಿಲ್ಲ. ಗಲಭೆಕೋರರು ಸ್ವತಃ ಹೇಳುವಂತೆ, ಮದೀನದ ಕೇವಲ ಮೂವರು ಮಾತ್ರ ಅವರೊಂದಿಗೆ ಇದ್ದರು. ಸಹಾಬರು ಅವರೊಂದಿಗೆ ಇದ್ದಿದ್ದರೆ, ಗಲಭೆಕೋರರು ಅವರ ಹೆಸರು ಹೇಳುತ್ತಿದ್ದರು. ಇನ್ನೊಂದು ಕಡೆ, ಸಹಾಬರು ತಮ್ಮ ವರ್ತನೆಯಿಂದ ಗಲಭೆಕೋರರನ್ನು ಇಷ್ಟಪಡುತ್ತಿರಲಿಲ್ಲ ಎಂದು ಸಾಬೀತುಪಡಿಸಿದ್ದರು. ಗಲಭೆಕೋರರ ಕೃತ್ಯಗಳನ್ನು ಶರೀಅತ್ತಿನ ವಿರುದ್ಧವೆಂದು ತಿಳಿದಿದ್ದರು. ಗಲಭೆಕೋರರನ್ನು ಕೊಲ್ಲಬೇಕೆಂದು ಒತ್ತಾಯಪಡಿಸುತ್ತಿದ್ದರು. ಸಹಾಬರು ಅಥವಾ ಮದೀನದ ನಿವಾಸಿಗಳು ಗಲಭೆಕೋರರೊಂದಿಗೆ ಇದ್ದಿದ್ದರೆ ಅವರಿಗೆ ಹೆಚ್ಚಿನ ನೆಪಗಳನ್ನು ಅಥವಾ ಯೋಜನೆಗಳನ್ನು ಮಾಡುವ ಆವಶ್ಯಕತೆಯೇ ಇದ್ದಿರಲಿಲ್ಲ. ಮದೀನದವರಲ್ಲಿ ಹೆಚ್ಚಿನವರು ಅವರೊಡನೆ ಇದ್ದಿದ್ದರೆ ಆರಂಭದಲೇ ಹಝ್ರತ್ ಉಸ್ಮಾನ್‌ರನ್ನು ಕೊಲ್ಲಬಹುದಾಗಿತ್ತು ಮತ್ತು ಅವರ ಬದಲಿಗೆ ಬೇರೆ ಯಾರನ್ನಾದರೂ ಖಲೀಫರನ್ನಾಗಿ ಮಾಡಬಹುದಾಗಿತ್ತು. ಆದರೆ ಆರಂಭದ ಆ ಸಮಯದಲ್ಲಿ ಅವರು ಹಝ್ರತ್ ಉಸ್ಮಾನ್‌ರನ್ನು ಕೊಲ್ಲುವುದರಲ್ಲಿ ಸಫಲರಾಗುವುದಕ್ಕೆ ಬದಲಿಗೆ ಸ್ವತಃ ಸಹಾಬರ ಖಡ್ಗದ ಕೆಳಗೆ ಅವರ ಜೀವ ಅಪಾಯವನ್ನು ಎದುರಿಸುತ್ತಿತ್ತು. ಕೇವಲ ಹಝ್ರತ್ ಉಸ್ಮಾನ್‌ರ(ರ) ಕರುಣೆ ಮತ್ತು ದಯೆಯ ಕಾರಣದಿಂದ ಅವರಿಗೆ ಸುರಕ್ಷಿತರಾಗಿ ಮರಳಿ ಹೋಗಲು ಸಾಧ್ಯವಾಯಿತು. ಈ ಗಲಭೆಕೋರರ ಹಗೆ ಮತ್ತು ದೇವಭಯ ಇಲ್ಲದಿರುವಿಕೆಯನ್ನು ನೋಡಿಕೊಂಡು ಅಚ್ಚರಿಯಾಗುತ್ತದೆ. ಈ ಘಟನೆಯಿಂದ ಅವರು ಯಾವುದೇ ಪ್ರಯೋಜನವನ್ನು ಪಡೆಯಲಿಲ್ಲ. ಅವರ ಪ್ರತಿಯೊಂದು ಆರೋಪಗಳಿಗೆ ಬಹಳ ಉತ್ತಮ ರೀತಿಯಲ್ಲಿ ಜವಾಬು ನೀಡಲಾಗಿತ್ತು. ಎಲ್ಲ ಆಕ್ಷೇಪಗಳನ್ನು ತಪ್ಪು ಮತ್ತು ಆಧಾರರಹಿತ ಎಂದು ಸಾಬೀತುಪಡಿಸಲಾಯಿತು. ಹಝ್ರತ್ ಉಸ್ಮಾನ್‌ರ(ರ) ದಯೆ ಮತ್ತು ಕೃಪೆಯನ್ನು ಅವರು ನೋಡಿದ್ದರು. ಹಝ್ರತ್ ಉಸ್ಮಾನ್‌ರಂತಹ(ರ) ವ್ಯಕ್ತಿ ಆ ಕಾಲದಲ್ಲಿ ಭೂಮಿಯ ಮೇಲೆ ಇರಲಿಲ್ಲವೆಂದು ಪ್ರತಿಯೊಬ್ಬರ ಮನಸ್ಸು ಸಾಕ್ಷಿ ಹೇಳುತ್ತಿತ್ತು. ಆದರೂ ಗಲಭೆಕೋರರು ತಮ್ಮ ಪಾಪಗಳಿಂದ ಪಶ್ಚಾತ್ತಾಪ ಮಾಡುವುದರ ಬದಲಿಗೆ ಕ್ರೋಧ ಮತ್ತು ಕೋಪಾತಿರೇಕದ ಬೆಂಕಿಯಲ್ಲಿ ಇನ್ನೂ ಹೆಚ್ಚಾಗಿ ಉರಿಯುತ್ತಿದ್ದರು. ಸ್ವತಃ ನಿರುತ್ತರರಾಗುವುದನ್ನು ಮತ್ತು ಹಝ್ರತ್ ಉಸ್ಮಾನ್‌ರ ಕ್ಷಮೆ ಹಾಗೂ ಉತ್ತಮ ವರ್ತನೆಯನ್ನು ತಮ್ಮ ನಿಂದನೆಯೆಂದು ಭಾವಿಸುತ್ತಾ ಗಲಭೆಕೋರರು ತಮ್ಮ ಮುಂದಿನ ತಂತ್ರಗಳನ್ನು ಪೂರ್ತಿ ಮಾಡುವ ಯೋಜನೆಯ ಬಗ್ಗೆ ಯೋಚಿಸುತ್ತಾ ಅಲ್ಲಿಂದ ಹೊರಟು ಹೋದರು.

(ಇಸ್ಲಾಮ್ ಮೆ ಇಖ್ತಿಲಾಫಾತ್ ಕಾ ಆಗಾಝ್, ಅನ್ವಾರುಲ್ ಉಲೂಮ್ ಸಂಪುಟ–4, ಪುಟ–293–296)

ಹಝ್ರತ್ ಉಸ್ಮಾನ್‌ರ(ರ) ಬಗ್ಗೆಗಿನ ಪ್ರಸ್ತಾಪ ಮುಂದುವರೆಯುವುದು. ಇನ್ಶಾ ಅಲ್ಲಾಹ್.

ಈಗ ನಾನು ಕಳೆದ ಕೆಲ ದಿನಗಳ ಹಿಂದೆ ನಿಧನರಾದ ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಇವರಲ್ಲಿ ಮೊತ್ತ ಮೊದಲ ಪ್ರಸ್ತಾಪ ಫೆಬ್ರವರಿ 11ರಂದು ಶಹೀದ್‌ರಾದ ಸನ್ಮಾನ್ಯ ಅಬ್ದುಲ್ ಖಾದಿರ್ ಸಾಹಿಬ್‌ರದ್ದಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**.

ಲಭಿಸಿದ ಮಾಹಿತಿ ಪ್ರಕಾರ, ಅಬ್ದುಲ್ ಖಾದಿರ್ ಸಾಹಿಬ್‌ರು ಬಾಝೀದ್‌ಖೈಲ್ ಪಿಶಾವರ್‌ನಲ್ಲಿರುವ ತನ್ನ ಚಿಕ್ಕಪ್ಪರಾದ ಡಾಕ್ಟರ್ ಮಂಝೂರ್ ಅಹ್ಮದ್ ಸಾಹಿಬ್‌ರ ಕ್ಲಿನಿಕ್‌ನಲ್ಲಿ ಕೆಲಸ ಮಾಡುತ್ತಿದ್ದರು. ಕ್ಲಿನಿಕ್‌ನಲ್ಲಿ ಒಟ್ಟುಗೂಡಿದ್ದ ಇತರ ಸಹೋದರರೊಡನೆ ಝುಹರ್ ನಮಾಝ್ ನಿರ್ವಹಿಸಲು ಅವರು ಬಂದಿದ್ದರು. ರೋಗಿಗಳು ಬರುವ ಸೈಡ್‌ನಿಂದ ಬೆಲ್ ರಿಂಗ್ ಆಯಿತು. ಅಬ್ದುಲ್ ಖಾದಿರ್ ಸಾಹಿಬ್‌ರು ಹೋಗಿ ಬಾಗಿಲು ತೆರೆದರು. ಆಗ ರೋಗಿಯಂತೆ ಬಂದ ಹುಡುಗರು ಅವರ ಮೇಲೆ ಫೈರಿಂಗ್ ಮಾಡಿದರು. ಇದರಿಂದ ಅವರು ತೀವ್ರವಾಗಿ ಗಾಯಗೊಂಡರು. ಎದೆಯಲ್ಲಿ ಎರಡು ಗುಂಡುಗಳು ತಗುಲಿದುವು. ಬೇಗನೇ ಆಸ್ಪತ್ರೆಗೆ ಕೊಂಡು ಹೋಗಲಾಯಿತು. ಗಾಯದ ನೋವು ಸಹಿಸಲಾಗದೆ ಅಬ್ದುಲ್ ಖಾದಿರ್ ಸಾಹಿಬ್‌ರು ಅಲ್ಲೇ ಶಹೀದ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**. ಶಹೀದ್‌ರ ವಯಸ್ಸು 65 ಆಗಿತ್ತು. ಹೇಗಿದ್ದರೂ ಪೊಲೀಸರು ಕೊಲೆಗಾರರನ್ನು ಬಂಧಿಸಿದರು. ಜನರು ಹಿಡಿದುಕೊಂಡು ಕೊಲೆಗಾರರನ್ನು ಪೊಲೀಸರಿಗೆ ಒಪ್ಪಿಸಿದರು. ಶಹೀದ್‌ರ ಕುಟುಂಬವು ಇತರ ಅಹ್ಮದೀ ಕುಟುಂಬದವರ ಹಾಗೆಯೇ ದೀರ್ಘಕಾಲದಿಂದ ವಿರೋಧವನ್ನು ಎದುರಿಸುತ್ತಿತ್ತು. 2009ರ ಜನವರಿ 19ರಂದು ಭಯೋತ್ಪಾದಕರು ಇದೇ ಕ್ಲಿನಿಕ್‌ನ ಮೇಲೆ ಹಲ್ಲೆ ನಡೆಸಿದ್ದರು. ಅದರ ಕಾರಣದಿಂದ ಸನ್ಮಾನ್ಯ ಅಬ್ದುಲ್ ಖಾದಿರರ ಕಾಲಿಗೆ ಗುಂಡು ತಗುಲಿತ್ತು. ಆದ್ದರಿಂದ ಅವರು ಪಿಶಾವರ್‌ನಿಂದ ವಲಸೆ ಹೋಗಲು ನಿರ್ಬಂಧಿತರಾಗಿದ್ದರು. ಬಹಳ ಕಾಲದ ನಂತರ ಪಿಶಾವರ್‌ಗೆ ವಾಪಸ್ಸು ಹೋಗಿ ನೆಲೆಸಲು ಸಾಧ್ಯವಾಗಿತ್ತು. ಈಗಿನ ವಿರೋಧದ ಅಲೆಯ ಕಾರಣದಿಂದ ಸುಮಾರು 2 ತಿಂಗಳ ಹಿಂದೆ ಪುನಃ ಜಮಾಅತಿನ ನಿರ್ದೇಶನ ಪ್ರಕಾರ ರಬ್ವಗೆ ಹಿಜ್ರತ್ ಮಾಡಲು ನಿರ್ಬಂಧಿತರಾಗಿದ್ದರು. ಈಗ ಇವರ ಕುಟುಂಬ ರಬ್ವದಲ್ಲಿ ನೆಲೆಸಿದೆ. ಆದರೂ ಶಹೀದ್‌ರು ಸ್ವತಃ ನೌಕರಿಗೆ ಸಂಬಂಧಪಟ್ಟು ಬಾಝೀದ್‌ಖೈಲ್‌ನಲ್ಲಿ ಇರುವ ಕ್ಲಿನಿಕ್‌ಗೆ ಹೋಗಿದ್ದರು. ಅಲ್ಲೇ ನೆಲೆಸಿದ್ದರು.

ಶಹೀದ್‌ರ ಕುಟುಂಬದಲ್ಲಿ ಅಹ್ಮದಿಯ್ಯತ್ತಿನ ಪ್ರವೇಶ ಅವರ ತಾತರಾದ ಸನ್ಮಾನ್ಯ ನಿಝಾಮುದ್ದೀನ್ ಅಹ್ಮದ್‌ರ ಮುಖಾಂತರ ಆಗಿತ್ತು. ಅವರು ಮೊದಲನೇ ಖಿಲಾಫತ್ತಿನ ಕಾಲದಲ್ಲಿ ಬೈಅತ್ ಮಾಡಿಕೊಂಡು ಅಹ್ಮದಿಯ್ಯತ್‌ನಲ್ಲಿ ಸೇರುವ ಸೌಭಾಗ್ಯವನ್ನು ಪಡೆದಿದ್ದರು. ಶಹೀದ್‌ರ ತಾತರಿಗೆ ಇಬ್ಬರು ಹಿರಿಯ ಸಹೋದರರಿದ್ದರು. ಡಾಕ್ಟರ್ ಫತಹುದ್ದೀನ್ ಸಾಹಿಬ್ ಸಿವಿಲ್ ಸರ್ಜನ್ ಪಿಶಾವರ್ ಮತ್ತು ಇಂಜಿನಿಯರ್ ಅಬ್ದುಲ್ಲತೀಫ್ ಸಾಹಿಬ್. ಡಾಕ್ಟರ್ ಫತಹುದ್ದೀನ್ ಸಾಹಿಬ್‌ರು ಕಲಿಕೆಯ ಕಾಲದಲ್ಲಿ 1902ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ವಾದದ ಸುದ್ದಿಯನ್ನು ಕೇಳಿಕೊಂಡು ಖಾದಿಯಾನಿಗೆ ಹೋಗಿ ಹುಝೂರನ್ನು ಭೇಟಿಯಾಗಿದ್ದರು. ಹುಝೂರ್(ಅ) ಅವರ ಮೇಲೆ ತನ್ನ ಕೈಯನ್ನು ಸಹ ಇರಿಸಿದ್ದರು ಮತು ಬಹಳ ಒಳ್ಳೆಯ ಹುಡುಗ ಎಂದು ಅವರ ಬಗ್ಗೆ ಹೇಳಿದ್ದರು. ಆದಾಗ್ಯೂ ಇವರಿಗೆ ಅವರ ಕೈಯಲ್ಲಿ ಬೈಅತ್ ಮಾಡಲು ಸಾಧ್ಯವಾಗಿರಲಿಲ್ಲ. ಅನಂತರ ಅವರು ಸ್ಕಾಲರ್‌ಶಿಪ್ ಸಿಕ್ಕಿದ ನಂತರಯು.ಕೆ.ಗೆ ಹೋದರು. ಅಲ್ಲಿ ಉನ್ನತ ಶಿಕ್ಷಣವನ್ನು ಪಡೆದು ಡಾಕ್ಟರ್ ಆದರು. ಅನಂತರ 1908ರಲ್ಲಿ ಹಝ್ರತ್ ಮಸೀಹ್ ಮೌಊದ್‌ರ(ಅ) ನಿಧನದ ವಾರ್ತೆಯನ್ನು ಕೇಳಿಕೊಂಡು ಖಾದಿಯಾನಗೆ ಹೋಗಿ ಮೊದಲನೇ ಖಲೀಫತುಲ್ ಮಸೀಹರ ಕಾಲದಲ್ಲಿ ಬೈಅತ್ ಮಾಡಿದರು. ಶಹೀದ್‌ರ ತಾತರ ಎರಡನೇ ಸಹೋದರರಾದ ಇಂಜಿನಿಯರ್ ಅಬ್ದುಲ್ಲತೀಫ್ ಸಾಹಿಬ್‌ರು ಸಹ ಮೊದಲನೇ ಖಿಲಾಫತ್ತಿನ ಕಾಲದಲ್ಲಿ ತನ್ನ ಸಹೋದರನೊಂದಿಗೆಯೇ ಬೈಅತ್ ಮಾಡಿದ್ದರು. ಈ ಇಬ್ಬರು ಸಹೋದರರ ಪ್ರೇರಣೆ ಪ್ರಕಾರ ಕುಟುಂಬದ ಇತರ ವ್ಯಕ್ತಿಗಳು ಬೈಅತ್ ಮಾಡಿಕೊಂಡು ಅಹ್ಮದಿಯ್ಯತ್ ಪ್ರವೇಶಿಸಿದರು. ಅವರಲ್ಲಿ ಶಹೀದ್‌ರ ತಾತ ಸಹ ಸೇರಿದ್ದರು.

ಶಹೀದ್‌ರು ಅಸಂಖ್ಯ ಗುಣವೈಶಿಷ್ಟ್ಯಗಳನ್ನು ಹೊಂದಿದ್ದರು. ಖಿಲಾಫತ್ತಿನೊಂದಿಗೆ ಅಪರಿಮಿತವಾದ ಪ್ರೇಮವಿತ್ತು. ಜಮಾಅತ್ತಿನ ಹುದ್ದೇದಾರರೊಂದಿಗೆ ಅತ್ಯಂತ ಗೌರವಾದರದ ಸಂಬಂಧವಿತ್ತು. ತಬ್ಲೀಗ್ ಮಾಡುವ ಆಸಕ್ತಿಯನ್ನು ಬಹಳವಾಗಿ ಹೊಂದಿದ್ದರು. ಇದರ ಕಾರಣದಿಂದ ವಿರೋಧವನ್ನು ಎದುರಿಸಬೇಕಾಗಿ ಬರುತ್ತಿತ್ತು. ಈ ವಿರೋಧದ ಕಾರಣದಿಂದ ಕಳೆದ ಎರಡು ವರ್ಷಗಳಲ್ಲಿ ಏಳು ಬಾರಿ ಮನೆ ಬದಲಿಸಬೇಕಾಗಿ ಬಂದಿತ್ತು. ಆದರೆ ಅಲ್ಲಾಹನ ಅನುಗ್ರಹದಿಂದ ಅವರು ಅಹ್ಮದಿಯ್ಯತ್ತಿನಲ್ಲಿ ಸ್ಥಿರಚಿತ್ತರಾಗಿ ನಿಂತಿದ್ದರು. ತಹಜ್ಜುದ್ ಮತ್ತು ಇತರ ನಮಾಝ್‌ಗಳಲ್ಲದೆ ಪವಿತ್ರ ಖುರ್‌ಆನ್ ಪಾರಾಯಣವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಅತ್ಯಂತ ಕರುಣಾಳು ಮತ್ತು ಸ್ನೇಹಮಯಿ ಆಗಿದ್ದರು. ಜೀವನಪೂರ್ತಿ ಯಾರೊಡನೆಯೂ ಜಗಳವಾಡಿರಲಿಲ್ಲ. ಅವರ ಪತ್ನಿ ಹೇಳುತ್ತಾರೆ: ಜೀವಿತದಲ್ಲಿ ಹಲವಾರು ಬಾರಿ ಉಬ್ಬುತಗ್ಗುಗಳು ಉಂಟಾಗಿದ್ದುವು. ಆದರೆ ಅವರು ಎಂದಿಗೂ ಕಠಿಣವಾಗಿ ವರ್ತಿಸಿರಲಿಲ್ಲ. ನಾನು ಅವರೊಡನೆ ಎಂದಾದರೂ ಕಠಿಣವಾಗಿ ವರ್ತಿಸಿದರೆ, ಅವರು ಆಗಲೂ ಯಾವಾಗಲೂ ಸೌಮ್ಯವಾಗಿ ಜವಾಬು ನೀಡುತ್ತಿದ್ದರು. ಮಕ್ಕಳೊಂದಿಗೆ ಸದಾ ಕರುಣೆ ಮತ್ತು ಪ್ರೀತಿಯಿಂದ ವರ್ತಿಸುತ್ತಿದ್ದರು. ಶಹೀದ್ ಆಗಲು ಅವರಿಗೆ ಅತಿಯಾದ ಅಭಿಲಾಷೆಯಿತ್ತು. ಯಾವಾಗಲೂ ಪರೀಕ್ಷಣೆಯ ಸ್ಥಿತಿ ಬಂದರೆ, ಅಹ್ಮದಿಯಾ ಖಿಲಾಫತ್‌ನಿಂದ ದೂರವಿರುವುದಕ್ಕೆ ಬದಲಿಗೆ ಮರಣಕ್ಕೆ ಆದ್ಯತೆಯನ್ನು ನೀಡುವೆನು ಎಂದು ಯಾವಾಗಲೂ ಹೇಳುತ್ತಿದ್ದರು. ನಮಾಝ್ ಅನುಷ್ಠಾನದ ಸ್ಥಿತಿ ಏನಾಗಿತ್ತೆಂದರೆ, ಅವರು ದೀರ್ಘವಾದ ಸಜ್‌ದ ಮಾಡುತ್ತಿದ್ದ ಕಾರಣದಿಂದ ಮನೆಯವರು ಅವರನ್ನು ಸಜ್‌ದಲ್ಲಿರುವಾಗ ಮುಟ್ಟಿ ನೋಡಿ, ಏನೂ ಆಗಿಲ್ಲವೆಂದು ಖಾತರಿ ಮಾಡಿಕೊಳ್ಳುತ್ತಿದ್ದರು. ಶಹೀದ್‌ರಿಗೆ ಬಾಝೀದ್‌ಖೈಲ್‌ನಲ್ಲಿ ಮುಂತಝಿಂ ತರ್ಬಿಯತ್ ಎಂಬ ನೆಲೆಯಲ್ಲಿ ಸಹ ಜಮಾಅತ್ತಿನ ಸೇವೆ ಮಾಡುವ ಸೌಭಾಗ್ಯ ಲಭಿಸಿತ್ತು. ದಿವಂಗತರು ತಮ್ಮ ಪತ್ನಿಯಾದ ಸಾಜಿದ ಖಾದಿರ್ ಸಾಹಿಬರನ್ನಲ್ಲದೆ ನಾಲ್ವರು ಪುತ್ರರನ್ನು ಮತ್ತು ಐವರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಅಲ್ಲಾಹನೇ ಸಂಬಂಧಿಕರ ಸಹಾಯಿಯಾಗಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಎರಡನೇ ಜನಾಝ಼ ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳು ಆಗಿದ್ದ ಅಕ್ಬರ್ ಅಲಿ ಸಾಹಿಬ್‌ರದ್ದಾಗಿದೆ. ಇವರು ಇಬ್ರಾಹೀಂ ಸಾಹಿಬ್‌ರ ಮಗನಾಗಿದ್ದರು. ನಂಕಾನ ಜಿಲ್ಲೆಯ ಶೌಕತಾಬಾದ್ ಕಾಲೋನಿಯ ನಿವಾಸಿಯಾಗಿದ್ದರು. ಫೆಬ್ರವರಿ 16ರಂದು ಹೃದಯಾಘಾತದ ನಿಮಿತ್ತ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಇವರೊಂದಿಗೆ ಬೇರೆ ಈರ್ವರು ಇದ್ದರು. ಮೇ 2, 2020ರಲ್ಲಿ ಅವರ ವಿರುದ್ಧ ಮೊಕದ್ದಮೆ ಹೂಡಲಾಗಿತ್ತು. ಅಕ್ಟೋಬರ್‌ನಲ್ಲಿ ಅವರಿಗೆ ಸಿಗಬೇಕಾದ ಜಾಮೀನನ್ನು ರದ್ದುಮಾಡಿಕೊಂಡು ಅವರನ್ನು ಬಂಧಿಸಲು ಹೈಕೋರ್ಟ್ ಆದೇಶಿಸಿತು. ಹೇಗಿದ್ದರೂ ಈ ಮೂವರನ್ನೂ ಬಂಧಿಸಲಾಯಿತು. ಅನಂತರ ಒಂದು ಮನವಿ ಪ್ರಕಾರ ನಂಕಾನ ಜಿಲ್ಲೆಯ ಮೆಜಿಸ್ಟ್ರೇಟ್ ಒಂದು ಪಕ್ಷದ ಅಹವಾಲನ್ನು ಮಾತ್ರ ಆಲಿಸಿಕೊಂಡು ನಮ್ಮ ನಿಲುವನ್ನು ಕೇಳದೇ ಜನವರಿ 2021ರಲ್ಲಿ 296 ಸೆಕ್ಷನನ್ನುವರ್ಧಿಸಿತ್ತು. ಇದು ಮತ್ತೊಂದು ಭಯಾನಕ ಸೆಕ್ಷನ್ ಆಗಿದೆ. ಹೀಗೆ ದಿವಂಗತರು ನಾಲ್ಕುವರೆ ತಿಂಗಳುಗಳಿಂದ ಜೈಲಿನಲ್ಲಿದ್ದರು. ನಿಧನದ ಸಮಯದಲ್ಲಿ ಅವರಿಗೆ 55 ವಯಸ್ಸಿತ್ತು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ವ್ಯವಸ್ಥೆಯಲ್ಲಿ ಇದ್ದರು.

ದಿವಂಗತರ ಕುಟುಂಬದಲ್ಲಿ ಅಹ್ಮದಿಯ್ಯತ್ತಿನ ಪ್ರವೇಶ ಅವರ ತಂದೆಯಾದ ಇಬ್ರಾಹೀಂ ಸಾಹಿಬ್‌ರ ಮೂಲಕ ನಡೆದಿತ್ತು. ಅವರು ತಮ್ಮ ಸಹೋದರರಾದ ಸನ್ಮಾನ್ಯ ಮಿಯಾ ಇಸ್ಮಾಈಲ್ ಸಾಹಿಬ್‌ರೊಂದಿಗೆ 1920ರಲ್ಲಿ ಎರಡನೇ ಖ಼ಲೀಫರ ಕಾಲದಲ್ಲಿ ಬೈಅತ್ ಮಾಡಿದ್ದರು. ಅಕ್ಬರ್ ಅಲಿ ಸಾಹಿಬ್‌ರು ಸೈನ್ಯದಲ್ಲಿ ಭರ್ತಿಯಾಗಿದ್ದರು. 23 ವರ್ಷಗಳ ಕಾಲ ಹವಾಲದಾರರಾಗಿ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದರು. 16 ವರ್ಷಗಳ ಹಿಂದೆ ಸೈನ್ಯದಿಂದ ನಿವೃತ್ತಿ ಪಡೆದಿದ್ದರು. ಅನಂತರ ಸೆಕ್ಯೂರಿಟಿ ಗಾರ್ಡಿನ ಕೆಲಸ ಮಾಡುತ್ತಿದ್ದರು. ಅತ್ಯಂತ ಜವಾಬ್ದಾರಿಯುತ ಧೈರ್ಯಶಾಲಿ ವ್ಯಕ್ತಿಯಾಗಿದ್ದರು. ಬಂಧಿಯಾಗುವುದಕ್ಕೆ ಮುಂಚೆ ಬ್ಯಾಂಕಿನ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. "ಅಕ್ಬರ್ ಅಲಿ ಸಾಹಿಬ್‌ರನ್ನು ನೀವು ನೌಕರಿಯಲ್ಲಿ ಇರಿಸಿದ್ದೀರಿ. ಇವನಂತು ಕಾಫಿರ್ ಆಗಿದ್ದಾನೆ" ಎಂದು ಒಬ್ಬ ವಿರೋಧಿ ಬ್ಯಾಂಕ್ ಮ್ಯಾನೇಜರ್‌ರಿಗೆ ದೂರುಕೊಟ್ಟಿದ್ದರು. ಬ್ಯಾಂಕ್ ಮ್ಯಾನೇಜರ್ ಹೀಗೆ ಉತ್ತರಿಸಿದರು: ನಾನು ಪ್ರತಿ ಬೆಳಿಗ್ಗೆ ಬಂದು ಸಿ.ಸಿ.ಟಿ.ವಿ. ಕ್ಯಾಮೆರದ ರಿಕಾರ್ಡಿಂಗ್ ಚೆಕ್ ಮಾಡುತ್ತೇನೆ. ಅಕ್ಬರ್ ಅಲಿ ಸಾಹಿಬ್‌ರು ರಾತ್ರಿ ಸಮಯದಲ್ಲಿ ನಫ್ಲ್ ನಮಾಝ್ ನಿರ್ವಹಿಸುತ್ತಾರೆ, ತಿಲಾವತ್ ಮಾಡುತ್ತಾರೆ, ರಮಝಾನಿನ ಉಪವಾಸ ಇರಿಸುತ್ತಾರೆ. ಈ ವ್ಯಕ್ತಿ ಕಾಫಿರ್ ಹೇಗೆ ಆಗುವುದು? ಹೇಗಿದ್ದರೂ ಧೈರ್ಯಶಾಲಿ ಮ್ಯಾನೇಜರ್ ಇರಬೇಕು. ದಿವಂಗತರಿಗೆ ಜಮಾಅತಿನ ಸದರ್ ಎಂಬ ನೆಲೆಯಲ್ಲಿ 6 ವರ್ಷಗಳ ಕಾಲ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತ್ತು. ಬಂಧಿಯಾಗುವುದಕ್ಕೆ ಮುಂಚೆ ಸೆಕ್ರಟರಿ ಮಾಲ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಬಡವರೊಡನೆ ಸಹಾನುಭೂತಿ, ಅತಿಥಿ ಸತ್ಕಾರದ ಗುಣವನ್ನಲ್ಲದೆ, ಕುಟುಂಬದ ಎಲ್ಲರೊಡನೆ ಅವರಿಗೆ ಅನ್ಯೋನ್ಯ ಪ್ರೀತಿಯ ಸಂಬಂಧವಿತ್ತು. ತಬ್ಲೀಗ್ ಮಾಡುವ ಬಹಳ ಆಸಕ್ತಿ ಹೊಂದಿದ್ದರು. ಯಾವಾಗಲೂ ಸಮರ್ಥನೀಯ ಶೈಲಿಯಲ್ಲಿ ಮಾತನಾಡುತ್ತಿದ್ದರು. ಅದರ ಕಾರಣದಿಂದ ವಿರೋಧವನ್ನು ಎದುರಿಸಬೇಕಾಗಿ ಬರುತ್ತಿತ್ತು. ಸೆಕ್ಯೂರಿಟಿ ಗಾರ್ಡಿನ ಡ್ಯೂಟಿ ಸಹ ವಿರೋಧದ ಕಾರಣದಿಂದ ಬಿಡಬೇಕಾಗಿ ಬಂದಿತ್ತು. ಈರ್ವರು ಪತ್ನಿಯರಾದ ಝೀನತ್ ಬೀಬಿ ಸಾಹಿಬ ಮತ್ತು ಫಝೀಲತ್ ಬೀಬಿ ಸಾಹಿಬರನ್ನಲ್ಲದೆ 19 ಪ್ರಾಯದ ಅನೀಸ್ ಎಂಬ ಹೆಸರಿನ ಒಬ್ಬ ಮಗನನ್ನು ಮತ್ತು 16 ವರ್ಷ ಪ್ರಾಯದ ಒಬ್ಬಳು ಮಗಳನ್ನು ಅಗಲಿರುವರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಪದವಿಗಳನ್ನು ಉನ್ನತಗೊಳಿಸಲಿ. ಅಲ್ಲಾಹನು ಅವರ ಮಕ್ಕಳ ಸಂರಕ್ಷಕನಾಗಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ಼ ರಬ್ವದಲ್ಲಿ ಈಗ ತಹ್ರೀಕ್ ಜದೀದಿನಲ್ಲಿ ವಕೀಲುಲ್ ಮಾಲ್ ಸಾಲಿಸ್ ಆಗಿದ್ದ ಖ಼ಾಲಿದ್ ಮಹ್ಮೂದುಲ್ ಹಸನ್ ಭಟ್ಟಿಯರದ್ದಾಗಿದೆ. ಅದೇ ರೀತಿಯಲ್ಲಿ ಅವರು ಅನ್ಸಾರುಲ್ಲಾಹ್‌ದ ನಾಇಬ್ ಸದರ್ ಮತ್ತು ನಾಇಬ್ ಆಫೀಸರ್ ಜಲ್ಸ ಸಾಲಾನ ಸಹ ಆಗಿದ್ದರು. ತಾಹಿರ್ ಹಾರ್ಟ್ ಇನ್ಸ್ಟಿಟ್ಯೂಟ್‌ನಲ್ಲಿ 67ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರ ತಾತರಾದ ಬಾಬುಲ್‌ಖ಼ಾನ್ ಭಟ್ಟಿ ಅಹ್ಮದಿಯ್ಯತ್ ಸ್ವೀಕರಿಸಿದ್ದರು. ಆದರೆ ಖಾಲಿದ್ ಮಹ್ಮೂದ್ ಭಟ್ಟಿ ಸಾಹಿಬ್‌ರ ತಂದೆ ಅಹ್ಮದಿಯ್ಯತ್ ಸ್ವೀಕರಿಸಿರಲಿಲ್ಲ. ಅವರಿಗೆ ಅಹ್ಮದಿಯ್ಯತ್ತಿನಲ್ಲಿ ವಿಶ್ವಾಸವಿರಲಿಲ್ಲ. ಹೇಗಿದ್ದರೂ ಇವರ ಕೃಷಿಭೂಮಿಯಲ್ಲಿದ್ದ ಡೇರೆಯಲ್ಲಿ ಇವರ ತಾತ ಒಂದು ಸಲ ಕುಳಿತುಕೊಂಡಿದ್ದರು. ಖ಼ಾಲಿದ್ ಮಹ್ಮೂದ್‌ರ ತಂದೆ ಸಹ ಅಲ್ಲೇ ಚಾದರ ಬಿಚ್ಚಿ ಮಲಗಿದ್ದರು. ಆಗ ಇವರ ತಂದೆಯವರು ಹೋಗುತ್ತಿದ್ದ ಮಸೀದಿಯ ಮೌಲವಿ ಅಲ್ಲಿಂದ ದಾಟಿಹೋಗುತ್ತಿದ್ದರು. ಅವರು ಸಹ ಅಲ್ಲೇ ಕುಳಿತುಕೊಂಡರು. ಅಹ್ಮದಿಯ್ಯತ್ತಿನ ಮೇಲೆ ಮಾತುಕತೆ ಶುರುವಾಯಿತು. ಮಾತಿನ ನಡುವೆ ಅಹ್ಮದಿಯೇತರ ಮೌಲವಿ, ಅಹ್ಮದಿಯ್ಯತ್ ಸತ್ಯವೆಂದು ಸಮ್ಮತಿಸಿದರು. ಇದನ್ನು ಕೇಳಿದಾಕ್ಷಣ ಖಾಲಿದ್ ಮಹ್ಮೂದ್‌ರ ತಂದೆ ಚಾದರದಿಂದ ತನ್ನ ಮುಖವನ್ನು ನೀಗಿಸಿ ಎದ್ದು ಕುಳಿತುಕೊಂಡರು. ಅಹ್ಮದಿಯ್ಯತ್ ಸತ್ಯವೆಂದಾದರೆ, ನಮ್ಮನ್ನು ಏಕೆ ದಾರಿಗೆಡಿಸುತ್ತೀರಿ ಎಂದು ಕೇಳಿದರು. ಅಹ್ಮದಿಯ್ಯತ್ ಸತ್ಯವಲ್ಲವೆಂದೂ ಅದನ್ನು ಸ್ವೀಕರಿಸಬೇಡವೆಂದೂ ತಂದೆಯ ಹಿಂದೆ ಹೋಗಬೇಡವೆಂದೂ ಹೇಳಿ ನಮ್ಮನ್ನು ಏಕೆ ದಾರಿಗೆಡಿಸುತ್ತೀರಿ ಎಂದು ಕೇಳಿದರು. ಕೇಳಿರಿ, ಸತ್ಯ ಎಲ್ಲಿದೆಯೋ ಇಂದಿನಿಂದ ನಾನೂ ಅಲ್ಲೇ ಇರುವೆನು ಎಂದು ಹೇಳಿದರು. ಅನಂತರ ಖ಼ಾಲಿದ್ ಮಹ್ಮೂದ್‌ರ ತಂದೆ ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಕೈಯಲ್ಲಿ ಬೈಅತ್ ಮಾಡಿದರು. ಖ಼ಾಲಿದ್ ಮಹ್ಮೂದ್ ಭಟ್ಟಿ ಸಾಹಿಬ್‌ರು ಪಂಜಾಬ್ ಯೂನಿವರ್ಸಿಟಿಯಿಂದ ಬಿ.ಎ. ಮಾಡಿದ ನಂತರ 1978ರಲ್ಲಿ ಪೊಲಿಟಿಕಲ್ ಸೈನ್ಸ್‌ನಲ್ಲಿ ಮತ್ತು 1980ರಲ್ಲಿ ಹಿಸ್ಟರಿಯಲ್ಲಿ ಎಂ.ಎ. ಮಾಡಿದರು. ಅನಂತರ ಎರಡು ವರ್ಷಗಳು ಗವರ್ನ್‌ಮೆಂಟ್ ಸರ್ವಿಸ್‌ನಲ್ಲಿ ಲೆಕ್ಚರ್ ಆಗಿ ಇದ್ದರು. ಅನಂತರ ರಾಜೀನಾಮೆ ಕೊಟ್ಟರು. 1982ರಲ್ಲಿ ತನ್ನ ಜೀವಿತವನ್ನು ವಖ್ಫ್ ಮಾಡಿದರು. ಹಲವು ನೆಲೆಯಲ್ಲಿ ಸುಮಾರು 38 ವರ್ಷಗಳ ಕಾಲ ಜಮಾಅತಿನ ಸೇವೆ ಸೌಭಾಗ್ಯವನ್ನು ಪಡೆದರು. 1982ರಲ್ಲಿ ಅವರ ಪೋಸ್ಟಿಂಗ್ ವಕಾಲತ್ ತಅ್‌ಮೀಲ್ ತನ್‌ಫೀಝ್‌ನಲ್ಲಿ ಆಗಿತ್ತು. ಅನಂತರ ಅವರು ನಾಇಬ್ ವಕೀಲ್ ಸಹ ಆಗಿದ್ದರು. ಅನಂತರ ವಕೀಲುದ್ದೀವಾನ್ ಆಗಿ ನಿಶ್ಚಯಿಸಲ್ಪಟ್ಟರು. ಅನಂತರ ಅವರು ವಕೀಲುಲ್ ಮಾಲ್ ಸಾಲಿಸ್ ಆಗಿದ್ದರು. ಅವರಿಗೆ ಇಂಡೋನೇಶ್ಯ, ಸಿಂಗಾಪೂರ್, ಬರ್ಮ, ಶ್ರೀಲಂಕಾ, ನೇಪಾಳ್, ಯೂಗಾಂಡ ಮುಂತಾದ ದೇಶಗಳಿಗೆ ಪರ್ಯಟನೆ ಮಾಡುವ ಸೌಭಾಗ್ಯ ಲಭಿಸಿತ್ತು. ಎಲ್ಲಿಗೆ ಪರ್ಯಟನೆಗೆ ಹೋಗುವುದಾದರೂ ಬಹಳ ಆಳವಾಗಿ ಎಲ್ಲವನ್ನು ಅವಲೋಕಿಸುತ್ತಿದ್ದರು. ಅವರಿಗೆ ಮಾರ್ಗನಿರ್ದೇಶನಗಳನ್ನು ಕೊಡುತ್ತಿದ್ದರು. ವಿಶೇಷವಾಗಿ ಅವರಿಂದ ಶ್ರೀಲಂಕಾ ಮತ್ತು ಬರ್ಮಾದ ಜಮಾಅತಿನವರು ಬಹಳಷ್ಟು ಕಲಿತಿದ್ದಾರೆ. ಅದನ್ನು ಅಲ್ಲಿಯ ಜನರು ಹೇಳುತ್ತಿರುತ್ತಾರೆ. 'ನಾವು ಬಹಳಷ್ಟು ಕಲಿತಿದ್ದೇವೆ. ಜಮಾಅತಿನ ವ್ಯವಸ್ಥೆ ಬಗ್ಗೆ ನಾವು ಭಟ್ಟಿ ಸಾಹಿಬ್‌ರಿಂದ ಸರಿಯಾಗಿ ಕಲಿತಿದ್ದೇವೆ. ಖ಼ಿಲಾಫತ್‌ನೊಂದಿಗೆ ಸಂಬಂಧವನ್ನು ಜೋಡಿಸುವುದರಲ್ಲಿ ಭಟ್ಟಿ ಸಾಹಿಬ್‌ರು ಹಿರಿದಾದ ಪಾತ್ರ ವಹಿಸಿದ್ದರು' ಎಂದು ಜನರು ನನಗೆ ಪತ್ರ ಮೂಲಕ ತಿಳಿಸಿದ್ದಾರೆ. ಅದೇ ರೀತಿಯಲ್ಲಿ ಅವರು ಖುದ್ದಾಮುಲ್ ಅಹ್ಮದಿಯಾದ ಕೇಂದ್ರ ಆಮಿಲದಲ್ಲೂ ಮತ್ತು ಹಲವು ಕಮಿಟಿಗಳ ಮೆಂಬರ್ ಸಹ ಆಗಿದ್ದರು. ಕಝ಼ಾ ಬೋರ್ಡಿನ ಮೆಂಬರ್ ಸಹ ಆಗಿದ್ದರು. ಅವರ ಪತ್ನಿಯಾದ ನುಸ್ರತ್ ನಾಹೀದ ಸಾಹಿಬರಿಗೆ ಅಲ್ಲಾಹನು ಇಬ್ಬರು ಪುತ್ರಿಯರನ್ನು ಮತ್ತು ಒಬ್ಬ ಪುತ್ರನನ್ನು ದಯಪಾಲಿಸಿದ್ದಾನೆ. ಒಬ್ಬ ಮಗನಾದ ಖುರ್ರಮ್ ಉಸ್ಮಾನ್ ವಖ್ಫ್ ಝಿಂದಗಿಯಾಗಿ ಯು.ಕೆ.ಯ ಎಂ.ಟಿ.ಎ. ಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಅವರ ಪತ್ನಿ ಹೇಳುತ್ತಾರೆ: ಪೊಲಿಟಿಕಲ್ ಸೈನ್ಸ್‌ನಲ್ಲಿ ಎಂ.ಎ. ಮಾಡಿದ ನಂತರ ಅವರು ತನ್ನ ತಂದೆಯೊಡನೆ ಹೇಳಿದರು: ನಾನು ಎಂ.ಎ. ಹಿಸ್ಟರಿ ಸಹ ಮಾಡಲು ಇಚ್ಚಿಸುತ್ತೇನೆ. ಅವರ ತಂದೆ ಹೇಳಿದರು: ಇಷ್ಟವಿರುವಷ್ಟು ಕಲಿ, ಆದರೆ ಕೆಲಸ ಜಮಾಅತ್ತಿನದ್ದು ಮಾತ್ರ ಮಾಡಬೇಕು. ವಿವಾಹವಾಗಿ 43 ವರ್ಷಗಳು ಆಯಿತು. ಸದಾ ಕರುಣೆಯಿಂದ ವರ್ತಿಸುತ್ತಿದ್ದರು. ಅಲ್ಲಾಹನು ಅವರೊಂದಿಗೆ ಹೇಗೆ ಪ್ರೀತಿಯಿಂದ ವರ್ತಿಸಿದರು ಎಂದು ಅವರು ಯಾವಾಗಲೂ ಪರ್ಯಟನೆಯಿಂದ ಮರಳಿಬಂದ ನಂತರ ಹೇಳುತ್ತಿದ್ದರು. ಮಕ್ಕಳಿಗೂ ಕರುಣೆಯ ತಂದೆಯಾಗಿದ್ದರು. ಪ್ರತಿ ಮಗುವಿನ ಅನುಮತನೀಯವಾದ ಬಯಕೆಯನ್ನು ಈಡೇರಿಸಲು ಪ್ರಯತ್ನಿಸುತ್ತಿದ್ದರು. ಅವರ ಹಿರಿಯ ಮಗಳಾದ ಡಾಕ್ಟರ್ ಸಾಇಮ ಹೇಳುತ್ತಾರೆ: ನಾನು ವೀಸಾ ಅಪ್ಲೈ ಮಾಡಿದ್ದೆ. ಎರಡು ಬಾರಿ ರಿಜೆಕ್ಟ್ ಆಗಿತ್ತು. ಮೂರನೇ ಬಾರಿ ಅಪ್ಲೈ ಮಾಡಿದ ಸಮಯದಲ್ಲಿ ತಂದೆಯವರು ಹೊರಗೆ ಪರ್ಯಟನೆಗೆ ಹೋಗುತ್ತಿದ್ದರು. ನಾನು ಹೇಳಿದೆ: ನಿಮ್ಮ ಪರ್ಯಟನೆಯನ್ನು ಸ್ವಲ್ಪ ದಿನಗಳಿಗೆ ಮುಂದೂಡಿರಿ. ವೀಸಾದ ತಾರೀಕು ಸಮೀಪವಾಗುತ್ತಿದೆ. ಎಂಬಸಿಗೆ ಹೋಗಲಿಕ್ಕಿದೆ. ಅವರು ಹೇಳಿದರು: ಅದು ಸಾಧ್ಯವಲ್ಲ, ನೀನು ಒಬ್ಬಂಟಿಯಾಗಿ ಹೋಗು. ಏಕೆಂದರೆ, ಅಲ್ಲಾಹನಿಗಾಗಿ ಯಾತ್ರೆ ಮಾಡುತ್ತಿದ್ದೇನೆ. ಅಲ್ಲಾಹನು ನಿನ್ನನ್ನು ಅನುಗ್ರಹಿಸುವನು. ಅನಂತರ ಈ ಬಾರಿ ನನಗೆ ವೀಸಾ ಸಿಕ್ಕಿತು. ಕಿರಿಯ ಮಗಳು ಹೇಳುತ್ತಾಳೆ: ಬಹಳ ಸೌಮ್ಯ ಸ್ವಭಾವದ ತಂದೆಯಾಗಿದ್ದರು. ಬಹಳ ಸೌಮ್ಯವಾಗಿ ವರ್ತಿಸುತ್ತಿದ್ದರು. ಯಾವತ್ತೂ ನಮ್ಮನ್ನು ಬೈಯ್ಯುತ್ತಿರಲಿಲ್ಲ. ಬಹಳ ಪ್ರೀತಿಯಿಂದ ತಿಳಿಹೇಳುತ್ತಿದ್ದರು. ಜಮಾಅತಿನ ಕೆಲಸಗಳಿಗೆ ಯಾವಾಗಲೂ ಆದ್ಯತೆ ನೀಡುತ್ತಿದ್ದರು. ಮನೆಯ ಕೆಲಸ ಎಷ್ಟು ಆವಶ್ಯವುಳ್ಳದ್ದಾದರೂ ಮೊದಲು ಆಫೀಸಿನ ಕೆಲಸವನ್ನು ಮುಗಿಸಿ ಮನೆಗೆ ಬರುತ್ತಿದ್ದರು. ಸದಾ ಜಮಾಅತಿನ ಕೆಲಸಕ್ಕೆ ತಯಾರಿರುತ್ತಿದ್ದರು. ಪ್ರೀತಿ ಮತ್ತು ಮಗ್ನತೆಯಿಂದ ಜಮಾಅತಿನ ಕೆಲಸ ಮಾಡುತ್ತಿದ್ದರು. ದೀನಗೆ ಭೌತಿಕತೆಯ ಮೇಲೆ ಆದ್ಯತೆ ನೀಡುತ್ತಿದ್ದರು. ಇದನ್ನು ನಾನು ಸಹ ನೋಡಿದ್ದೇನೆ. ಬಹಳ ಪರಿಶ್ರಮದಿಂದ ಕೆಲಸ ಮಾಡುವವರಾಗಿದ್ದರು. ಬಹಳ ನಿಷ್ಠೆಯಿಂದ ವಖ್ಫ್‌ನ ಸ್ಫೂರ್ತಿಯೊಂದಿಗೆ ಅವರು ಯಾವಾಗಲೂ ಸೇವೆ ಮಾಡುತ್ತಿದ್ದರು. ಮಗಳು ಹೇಳುತ್ತಾಳೆ: ಕಷ್ಟದ ಸನ್ನಿವೇಶ ಬರುವಾಗಲೆಲ್ಲ ಅಲ್ಲಾಹನ ಮೇಲೆ ಭರವಸೆ ಇರಿಸಲು ಉಪದೇಶಿಸುತ್ತಿದ್ದರು. ಅಲ್ಲಾಹನು ನಮ್ಮನ್ನು ಕೈಬಿಡಲಿಕ್ಕಿಲ್ಲವೆಂದು ಹೇಳುತ್ತಿದ್ದರು. ಅಲ್ಲಾಹನು ಕೈಬಿಡಲೂ ಇಲ್ಲ. ಅವರ ಮಗನು ಹೇಳುತ್ತಾರೆ: ಚಿಕ್ಕಂದಿನಿಂದ ನಾವು ಅವರನ್ನು ಜಮಾಅತಿನ ಸೇವೆ ಮಾಡುತ್ತಲೇ ಕಂಡಿದ್ದೇವೆ. ಕಷ್ಟತೆ ಅಥವಾ ಪರೀಕ್ಷಣೆ ಬರುವಾಗಲೆಲ್ಲ ಅವರು ಹೀಗೆ ಹೇಳುತ್ತಿದ್ದರು: ನಾನು ಧರ್ಮದ ಕೆಲಸ ಮಾಡುತ್ತಿದ್ದೇನೆ. ಅಲ್ಲಾಹನ ಕೆಲಸ ಮಾಡುತ್ತಿದ್ದೇನೆ. ಅಲ್ಲಾಹನು ನನ್ನ ಕೆಲಸವನ್ನು ಮಾಡುವನು.' ಅಲ್ಲಾಹನು ಸಹ ತನ್ನ ಕೃಪೆಯಿಂದ ಅವರ ಕೆಲಸವನ್ನು ಸುಲಭಗೊಳಿಸುತ್ತಿದ್ದರು. ನೈಜ ರೀತಿಯಲ್ಲಿ ಅವರು ವಖ್ಫ್‌ನ ಸ್ಫೂರ್ತಿಯನ್ನು ನೆಲೆನಿಲ್ಲಿಸಿದ್ದರು. ಜಮಾಅತಿನ ಕೆಲಸಗಳಲ್ಲಿ ಕಾರ್ಯನಿರತರಾಗಿದ್ದರೂ ಮನೆಯ ಎಲ್ಲ ಕರ್ತವ್ಯಗಳನ್ನು ಮಾಡುವುದರಲ್ಲಿ ನ್ಯೂನತೆ ತೋರಿಸಿರಲಿಲ್ಲ. ಪ್ರತಿಯೊಂದು ಸಂಗತಿಯ ಬಗ್ಗೆ ಸಂಪೂರ್ಣವಾಗಿ ಸ್ವತಃ ಮೇಲ್ನೋಟವಹಿಸುತ್ತಿದ್ದರು. ತಹ್ರೀಕ್ ಜದೀದಿನ ಕಾನೂನು ಸಲಹೆಗಾರರಾದ ಲೈಕ್ ಆಬಿದ್ ಸಾಹಿಬ್‌ರು ಹೇಳುತ್ತಾರೆ: 38ವರ್ಷಗಳಿಂದ ನಾನು ಅವರೊಂದಿಗೆ ಕೆಲಸ ಮಾಡುತ್ತಿದ್ದೇನೆ. ಜಮಾಅತಿನ ಪರಂಪರೆಯ ಸಂರಕ್ಷಕರಾಗಿದ್ದರು. ಅವರ ಹಲವಾರು ಗುಣವೈಶಿಷ್ಟ್ಯಗಳಲ್ಲಿ ಒಂದು ವೈಶಿಷ್ಟ್ಯವೇನೆಂದರೆ, ಬಹಳ ಸೂಕ್ಷ್ಮವಾಗಿ ಜಮಾಅತಿನ ಸಂಪತ್ತನ್ನು ಸಂರಕ್ಷಿಸುವುದು ಆವಶ್ಯಕವೆಂದು ಅವರು ಭಾವಿಸುತ್ತಿದ್ದರು. ಅವರ ಸಹಪಾಠಿಯಾಗಿದ್ದ ಮುಹಮ್ಮದ್ ಇದ್ರೀಸ್ ಸಾಹಿಬ್‌ರು ಹೇಳುತ್ತಾರೆ: ಮೌನವಾಗಿರುತ್ತಿದ್ದ ಖ಼ಾಲಿದ್ ವಖ್ಫ್‌ನ ನಂತರ ಬೇರೆಯೇ ವ್ಯಕ್ತಿಯಾಗಿದ್ದರು. ಖ಼ಿಲಾಫತ್ತಿನೊಂದಿಗೆ ಪ್ರೀತಿ ಅವರ ಪ್ರತಿಯೊಂದು ಅಂಗಾಂಗಗಳಲ್ಲಿ ಸೇರಿಕೊಂಡಿತ್ತು ಎಂದು ತೋರುತ್ತಿತ್ತು. ಖ಼ಲೀಫರನ್ನು ಅನುಸರಿಸುವುದು ಅವರ ಹಾಸಿಗೆ ಮತ್ತು ಹೊದಿಕೆಯೆಂಬಂತೆ ಆಗಿತ್ತು. ಸದಾ ಜಮಾಅತಿನ ಕೆಲಸಗಳಲ್ಲಿ ಮಗ್ನರಾಗಿರುವುದು ಅವರ ಪ್ರಿಯ ಆಹಾರವಾಗಿ ಬಿಟ್ಟಿತ್ತು. ವಕಾಲತ್ ಮಾಲ್ ಸಾಲಿಸ್‌ನ ಒಬ್ಬ ಉದ್ಯೋಗಿ ಹೇಳುತ್ತಾರೆ: ಆಫೀಸಿಗೆ ಬರುವ ಯಾವುದೇ ಅಂಚೆಯನ್ನು ಪೆಂಡಿಂಗ್‌ನಲ್ಲಿ ಇಡುತ್ತಿರಲಿಲ್ಲ. ಬೇಗನೇ ಅದರ ಕೆಲಸಗಳನ್ನು ಮುಗಿಸುತ್ತಿದ್ದರು. ಇಂದಿನ ಕೆಲಸವನ್ನು ಇಂದೇ ಮಾಡಬೇಕು, ನಾಳೆ ಮಾಡುವ ಸಂದರ್ಭ ಸಿಕ್ಕುವುದೋ ಎಂದು ಗೊತ್ತಿಲ್ಲ ಎಂದು ಹೇಳುತ್ತಿದ್ದರು. ನಾನು ಹೇಳಿದಂತೆ, ಪಾಕಿಸ್ತಾನದಲ್ಲೂ ಮತ್ತು ಅವರ ಹೋದ ಸ್ಥಳಗಳಲ್ಲೆಲ್ಲ

ತುಂಬ ಉತ್ತಮ ಪ್ರಭಾವವನ್ನು ಅವರು ನೆಲೆನಿಲ್ಲಿಸಿದ್ದರು. ಸೇವೆಯ ಆವೇಶದೊಂದಿಗೆ ಕೆಲಸ ಮಾಡಿದ್ದರು. ಬಹಳ ನಿಷ್ಠೆಯಿಂದ ತನ್ನ ವಖ್ಫ್‌ನ್ನು ಕಾಪಾಡಿದ್ದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಪ್ರಸ್ತಾಪ ಸದರ್ ಅಂಜುಮನ್ ಅಹ್ಮದಿಯಾದ ಕಾನೂನು ಸಲಹೆಗಾರರಾದ ಸನ್ಮಾನ್ಯ ಮುಬಾರಕ್ ಅಹ್ಮದ್ ತಾಹಿರ್ ಸಾಹಿಬ್‌ರದ್ದಾಗಿದೆ. ಫೆಬ್ರವರಿ 17ರಂದು ತಾಹಿರ್ ಹಾರ್ಟ್ ಇನ್ಸ್ಟಿಟ್ಯೂಟ್‌ನಲ್ಲಿ 81ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆಯಾದ ಸನ್ಮಾನ್ಯ ಸೂಫಿ ಗುಲಾಂ ಮುಹಮ್ಮದ್ ಸಾಹಿಬ್‌ರ ಮೂಲಕ 1927ರಲ್ಲಿ ಬಂದಿತ್ತು. ಖಾದಿಯಾನಿನಲ್ಲಿ ಜಮಾಅತಿನ ಸ್ಥಾಪನೆಯ ಬಗ್ಗೆ ಗೊತ್ತಾದಾಗ ತನ್ನ ಸಂಬಂಧಿಕರೊಂದಿಗೆ ಖಾದಿಯಾನಿಗೆ ಹೋಗಿ ನೋಡಲು ತೀರ್ಮಾನಿಸಿದರು. ಹೀಗೆ 1926ರಲ್ಲಿ ಸಿಂಧ್ ಥರ್‌ಪಾರ್‌ನಿಂದ ಖಾದಿಯಾನ್ ಜಲ್ಸದಲ್ಲಿ ಭಾಗವಹಿಸಲು ಬಂದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತು ಜಮಾಅತಿನಿಂದ ತುಂಬಾ ಪ್ರಭಾವಿತರಾದರು. ಆದರೆ ಬೈಅತ್ ಮಾಡಿರಲಿಲ್ಲ. ಹೇಗಿದ್ದರೂ ನಂತರ 1927ರಲ್ಲಿ ಖಾದಿಯಾನಗೆ ಹೋಗಿ ಜಲ್ಸ ಸಾಲಾನ ಆಲಿಸಿದರು ಮತ್ತು ಅಲ್ಲಿಂದಲೇ ಬೈಅತ್ ಮಾಡಿದರು. ಆಗ ಅವರಿಗೆ 28 ವರ್ಷ ಪ್ರಾಯವಿತ್ತು. ಇವರು ಕಡಾಹಲ್ ಹದೀಸ್ ಗ್ರಾಮದವರಾಗಿದ್ದರು. ತೀವ್ರವಾದ ವಿರೋಧವನ್ನು ಎದುರಿಸಬೇಕಾಗಿ ಬಂದಿತ್ತು. ಇವರು ಕಾಫಿರ್ ಆಗಿದ್ದಾರೆ ಎಂದು ಹೇಳಿ ಹೆಂಡತಿಯ ಮನೆಯವರು ಅವರ ಪತ್ನಿಯನ್ನು ಮರಳಿ ಕರೆದರು. ಆದರೆ ಹೇಗಿದ್ದರೂ ಕೆಲವು ಕಾಲದ ನಂತರ ಅವರ ಪತ್ನಿ ಹೀಗೆ ಹೇಳುತ್ತಾ ಮರಳಿ ಬಂದರು: ನನ್ನ ಪತಿ ಕಾಫಿರ್ ಆದ ನಂತರ ಮೊದಲಿಗಿಂತ ಹೆಚ್ಚು ಮುಸ್ಲಿಮರಾಗಿದ್ದಾರೆ. ಅವರಿಂದ ಬೇರ್ಪಡಲು ನಾನು ಯಾವುದೇ ಕಾರಣವನ್ನು ಕಾಣುತ್ತಿಲ್ಲ. ಹೇಗಿದ್ದರೂ ಗ್ರಾಮವಾಸಿಗಳು ಪೂರ್ತಿ ಅವರ ಕುಟುಂಬವನ್ನು ಬಹಿಷ್ಕರಿಸಿದ್ದರು. ಬಾವಿಯಿಂದ ನೀರು ತೆಗೆಯುವುದರಿಂದಲೂ ತಡೆದಿದ್ದರು. ಹಲವಾರು ಮೈಲುಗಳಷ್ಟು ದೂರ ಹೋಗಿ ನೀರು ತರಬೇಕಾಗಿ ಬರುತ್ತಿತ್ತು. ಕೆಲವು ವಾರಗಳ ನಂತರ ಗ್ರಾಮವಾಸಿಗಳ ಆ ಬಾವಿಯ ನೀರು ಬತ್ತಿಹೋಯಿತು. ನಾವು ಸೂಫಿ ಸಾಹಿಬ್‌ರು ಬಾವಿಯಿಂದ ನೀರನ್ನು ತೆಗೆಯುವುದನ್ನು ತಡೆದಿದ್ದೆವು ಆದ್ದರಿಂದ ನಮ್ಮ ಬಾವಿಯ ನೀರು ಒಣಗಿಹೋಗಿದೆ ಎಂದು ಗ್ರಾಮವಾಸಿಗಳು ಹೇಳತೊಡಗಿದರು. ಅನಂತರ ಅವರು ಪುನಃ ಬಾವಿ ತಯಾರು ಮಾಡುವಾಗ, ಗ್ರಾಮವಾಸಿಗಳು ಸೂಫಿ ಸಾಹಿಬ್‌ರ ಬಳಿಗೆ ಬಂದು ಹೇಳಿದರು: ನೀವು ಮೊತ್ತಮೊದಲು ಬಾವಿ ನಿರ್ಮಾಣಕ್ಕಾಗಿ ಚಂದ ಕೊಡಿರಿ. ಏಕೆಂದರೆ ನೀವು ಹಣಕೊಟ್ಟರೆ ಬಾವಿಯಲ್ಲಿ ನೀರು ಬರುವುದು ಮತ್ತು ನೀರು ಜಾರಿಯಾಗಿ ಇರುವುದು. ಹೇಗಿದ್ದರೂ ಸಂಬಂಧಿಕರು ಅಹ್ಮದಿಯ್ಯತ್ ಸ್ವೀಕರಿಸಲಿಲ್ಲ. ಆದರೆ ಅದರ ನಂತರ ವಿರೋಧ ಮಾಡುವುದನ್ನು ನಿಲ್ಲಿಸಿದರು.

ಅವರ ಪತ್ನಿಯಾದ ರಾಶಿದ ಪರ್ವೀನ್‌ರಿಗೆ ಅಲ್ಲಾಹನು ನಾಲ್ವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ದಯಪಾಲಿಸಿದ್ದಾನೆ. ಇವರ ಒಬ್ಬ ಮಗನು ಇಸ್ಲಾಮಾಬಾದಿನಲ್ಲಿ ಮುರಬ್ಬಿ ಆಗಿರುವರು. ಜಾಮಿಅ ಅಹ್ಮದಿಯ್ಯ ಯು.ಕೆ.ಯಲ್ಲಿ ಕಲಿಸುತ್ತಿದ್ದಾರೆ. ಎರಡನೇ ಮಗನಾದ ನಾಸಿರ್ ಅಹ್ಮದ್ ತಾಹಿರ್ ಸಾಹಿಬ್ ವಖ್ಫೆ ಝಿಂದಗೀಯಾಗಿರುವರು. ಕೆನಡದಲ್ಲಿ ರಿವ್ಯೂ ಆಫ್ ರಿಲಿಜಿಯನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ.

ಸನ್ಮಾನ್ಯ ಮುಬಾರಕ್ ತಾಹಿರ್ ಸಾಹಿಬ್ ಸಹ 1968ರಲ್ಲಿ ಎಂ.ಎ. ಇಕ್ನೋಮಿಕ್ಸ್ ಮಾಡಿದ್ದರು. ಅನಂತರ 1969ರಲ್ಲಿ ಎಲ್.ಎಲ್.ಬಿ. ಪಡೆದರು. 1970ರಲ್ಲಿ ವಖ್ಫ್‌ನ ಮಂಜೂರಾತಿ ಆಯಿತು. ಅನಂತರ ಅವರನ್ನು ವಕಾಲತ್ ಉಲ್‌ಯದಲ್ಲಿ ನಿಶ್ಚಯಿಸಲಾಯಿತು. ಅನಂತರ 1971ರಲ್ಲಿ ಟೀಚರ್ ಎಂಬ ನೆಲೆಯಲ್ಲಿ ಅವರನ್ನು ಯೂಗಾಂಡಕ್ಕೆ ಕಳುಹಿಸಲಾಯಿತು. 1972ರಲ್ಲಿ ಅವರು ಅಲ್ಲಿಂದ ಮರಳಿ ಕರೆಯಲಾಯಿತು. ಅನಂತರ ವಕಾಲತ್ ಮಾಲ್ ಸಾನಿಯಲ್ಲಿ ಕೆಲವು ಕಾಲ ಕೆಲಸ ಮಾಡುವ ಸೌಭಾಗ್ಯವನ್ನು ಪಡೆದರು. ಅನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) 1976ರಲ್ಲಿ ಅವರನ್ನು ಹಲವಾರು ವಕೀಲರೊಂದಿಗೆ ಇಂಕಮ್ ಟಾಕ್ಸ್ ಮತ್ತು ಆಸ್ತಿಯ ಕೆಲಸದಲ್ಲಿ ಟ್ರೇನಿಂಗ್ ಮಾಡಿಸಿದರು. ಬಾರ್ ಕೌನ್ಸಿಲ್‌ನಲ್ಲಿ ಸಹ ಅವರನ್ನು ಸೇರಿಸಲಾಗಿತ್ತು. 1970ರಲ್ಲಿ ಅವರನ್ನು ತಹ್ರೀಕ್ ಜದೀದಿನಲ್ಲಿ ಕಾನೂನು ಸಲಹೆಗಾರರಾಗಿ ನಿಶ್ಚಯಿಸಲಾಯಿತು. ಜೂಲೈ 1, 1983ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರ) ಅವರನ್ನು ಸದರ್ ಅಂಜುಮನ್ ಅಹ್ಮದಿಯಾದ ಕಾನೂನು ಸಲಹೆಗಾರರಾಗಿ ನಿಶ್ಚಯಿಸಿದರು. ಮರಣದ ವರೆಗೆ ಇದೇ ಸೇವೆಯಲ್ಲಿ ಇದ್ದರು. ಇವರ ಸೇವೆಯ ಕಾಲಾವಧಿ 50ವರ್ಷಗಳಿಗಿಂತ ಹೆಚ್ಚಿಗೆ ಆಗಿತ್ತು. ಕೇಂದ್ರ ಖುದ್ದಾಮುಲ್ ಅಹ್ಮದಿಯಾದಲ್ಲೂ ಅವರು ಹಲವು ವಿಭಾಗಗಳಲ್ಲಿ ಮುಹ್ತಮಿಂ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು.

ಅವರ ಪತ್ನಿಯಾದ ರಾಶಿದ ಪರ್ವೀನ್ ಹೇಳುತ್ತಾರೆ: ಸದಾ ಮುಗುಳ್ನಗುತ್ತಾ ಮನೆಗೆ ಪ್ರವೇಶಿಸುತ್ತಿದ್ದರು. ಸಲಾಂ ಹೇಳುತ್ತಿದ್ದರು. ಮೊದಲು ನಮಾಝ್ ನಿರ್ವಹಿಸಿ ಊಟ ಮಾಡುತ್ತಿದ್ದರು. ಎಲ್ಲ ಖಲೀಫರೊಂದಿಗೆ ಕಳೆಯಲಾದ ಅನೇಕ ನೆನಪುಗಳು ಇದ್ದುವು. ತಮ್ಮ ಕುಟುಂಬದ ಮಕ್ಕಳೊಂದಿಗೆ ಕುಳಿತುಕೊಳ್ಳುವಾಗ ವಿಶ್ವಾಸವರ್ಧಕ ಘಟನೆಗಳ ಬಗ್ಗೆ ಹೇಳುತ್ತಿದ್ದರು. ಖಿಲಾಫತ್‌ನೊಂದಿಗೆ ಸೇರಿಕೊಂಡಿರುವುದರ ಅನುಗ್ರಹದಿಂದ ಅಲ್ಲಾಹನ ವರದಾನಗಳ ಮತ್ತು ಕೃಪೆಗಳ ಸಿಗುವಿಕೆ ಬಗ್ಗೆ ಹೇಳುತ್ತಿದ್ದರು. ರಹಸ್ಯವಾಗಿ ನಿರ್ಗತಿಕರ ಸಹಾಯ ಮಾಡುತ್ತಿದ್ದರು. ನಮಗೂ ಗೊತ್ತಾಗುತ್ತಿರಲಿಲ್ಲ. ನೆರವು ಸಿಕ್ಕಿದವರು ಎಂದಾದರೂ ಬಂದು ಹೇಳಿದರೆ, ಅವರ ಮೂಲಕ ಇದರ ಬಗ್ಗೆ ನಮಗೆ ಗೊತ್ತಾಗುತ್ತಿತ್ತು. ಇತರರ ದುಃಖದಲ್ಲಿ ದುಃಖಿತರಾಗುವ ಅವರ ಸುಖದಲ್ಲಿ ಸಂತೋಷಗೊಳ್ಳುವ ವ್ಯಕ್ತಿಯಾಗಿದ್ದರು. ನಫ್ಲ್ ನಮಾಝ್ ಅನುಷ್ಠಿಸುತ್ತಿದ್ದರು, ತಿಲಾವತ್ ನಿಯತವಾಗಿ ಮಾಡುತ್ತಿದ್ದರು, ದುರೂದ್ ಪ್ರಾರ್ಥನೆ ಮಾಡುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು: ವಖ್ಫೇ ಝಿಂದಗಿಯ ಕೆಲಸದ ವಿಜಯ ಅಲ್ಲಾಹನು ಸ್ವತಃ ಹೊತ್ತಿದ್ದಾನೆ. ಅಲ್ಲಾಹನ ಮೇಲೆ ಭರವಸೆ ಇಡಿರಿ, ದುಆ ಮಾಡುತ್ತಿರಿ, ಇಸ್ತಿಗ್‌ಫಾರ್ ಮಾಡುತ್ತಿರಿ, ಖಿಲಾಫತ್‌ನೊಂದಿಗೆ ಪ್ರೀತಿ ಇರಿಸಿರಿ, ದುಆಗಾಗಿ ಖಲೀಫತುಲ್ ಮಸೀಹ್‌ರಿಗೆ ಬರೆಯಿರಿ." ಎಂದೆಲ್ಲ ಹೇಳುತ್ತಿದ್ದರು. ಇವೆಲ್ಲ ಬಹಳ ಆವಶ್ಯಕ, ಇವರ ಬಗ್ಗೆ ಹೇಳಲಾದ ಎಲ್ಲ ಮಾತುಗಳು ಸತ್ಯವಾದುದಾಗಿದೆ. ಅವರು ಅಲ್ಲಾಹನ ಮೇಲೆ ಬಹಳ ಭರವಸೆ ಇರಿಸುತ್ತಿದ್ದರು. ನಾನು ನಾಝಿರ್ ಅಅ್‌ಲಾ ಆಗಿದ್ದಾಗ, ಆಗಲೂ ಅದಕ್ಕಿಂತ ಮುಂಚೆಯೂ ನಾನು ನೋಡಿದ್ದೇನೆ. ದೊಡ್ಡ ದೊಡ್ಡ ಕಷ್ಟದ ಕೆಲಸಗಳಲ್ಲಿ ಕೂಡ ಅಲ್ಲಾಹನ ಮೇಲೆ ಪರಿಪೂರ್ಣ ಭರವಸೆ ಹೊಂದಿದ್ದರು. ಜಮಾಅತಿನ ಕೆಲಸವಾಗಿದೆ, ಖಲೀಫತುಲ್ ಮಸೀಹರ ದುಆ ಇದೆ, ಇನ್ಶಾ ಅಲ್ಲಾಹ್ ನಡೆಯುವುದು ಎಂದು ಹೇಳುತ್ತಿದ್ದರು. ದಾನಧರ್ಮ ಮತು ದುಆದೊಂದಿಗೆ ಕೆಲಸ ಮಾಡುತ್ತಿದ್ದರು. ಅನಂತರ ಅಲ್ಲಾಹನ ಅನುಗ್ರಹದಿಂದ ವಿಜಯಗಳು ಸಹ ಉಂಟಾಗುತ್ತಿದ್ದುವು.

ಅವರ ಮಗನಾದ ಹಾಫಿಝ್ ಇಜಾಝ್ ಸಾಹಿಬ್ ಹೇಳುತ್ತಾರೆ: 1967ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಕರಾಚಿಗೆ ರೈಲುಗಾಡಿಯಲ್ಲಿ ಯಾತ್ರೆ ಹೋಗುತ್ತಿದ್ದರು. ಟ್ರೇನ್ ಹೈದರಾಬಾದ್ ಸ್ಟೇಶನ್‌ನಲ್ಲಿ ಸ್ವಲ್ಪ ಸಮಯ ತಂಗಿತ್ತು. ಹಲವಾರು ಅಹ್ಮದೀ ಸಹೋದರರು ಖಲೀಫತುಲ್ ಮಸೀಹ್‌ರನ್ನು ಭೇಟಿಯಾಗಲು ಅಲ್ಲಿಗೆ ಬಂದಿದ್ದರು. ಹುಝೂರ್ ರೈಲುಗಾಡಿಯ ಬಾಗಿಲ ಬಳಿ ನಿಂತಿದ್ದರು. ಅವರು ಸನ್ಮಾನ್ಯ ಮುಬಾರಕ್ ತಾಹಿರ್ ಸಾಹಿಬ್‌ರನ್ನು ಕೈಯಿಂದ ಸನ್ನೆ ಮಾಡುತ್ತಾ ತನ್ನ ಬಳಿಗೆ ಕರೆದರು. ಮುಂಚೆ ಅವರೊಡನೆ ಪರಿಚಯವೂ ಇರಲಿಲ್ಲ. ಕಡಿಮೆ ಪಕ್ಷ ಖಲೀಫ ಸಾಲಿಸ್‌ರಿಗೆ ಅವರ ಬಗ್ಗೆ ಗೊತ್ತಿಲ್ಲ ಎಂದು ಅವರು ಭಾವಿಸಿದ್ದರು. ಹೇಗಿದ್ದರೂ ಮುಬಾರಕ್ ತಾಹಿರ್ ಸಾಹಿಬ್‌ರು ಜನಕೂಟವನ್ನು ಮುರಿಯುತ್ತಾ ಬೇಗನೇ ಖಲೀಫತುಲ್ ಮಸೀಹ್‌ರ ಬಳಿಗೆ ಹೋಗಲು ಮುಂದಕ್ಕೆ ಧಾವಿಸಿದರು. ಬಾಗಿಲಿನ ಸಮೀಪ ತಲುಪಿದಾಗ, ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ತನ್ನ ಶೇರ್‌ವಾನಿಯಿಂದ ಸ್ವಲ್ಪ ಪೈಸೆಯನ್ನು ತೆಗೆದು ಮುಬಾರಕ್ ತಾಹಿರ್ ಸಾಹಿಬ್‌ರ ಜೇಬಿನಲ್ಲಿ ಹಾಕಿದರು. ಅನಂತರ ಟ್ರೈನ್ ಹೊರಟುಹೋಯಿತು. ಮುಬಾರಕ್ ಸಾಹಿಬ್ ಹೇಳುತ್ತಿದ್ದರು: ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ನನ್ನ ಜೇಬಿನಲ್ಲಿ ಹಣ ಹಾಕಿದ್ದ ಅನುಗ್ರಹದಿಂದ ನನ್ನ ಜೇಬು ಯಾವಾಗಲೂ ತುಂಬಿರುತ್ತಿತ್ತು. ಇದು ಸತ್ಯವೂ ಆಗಿದೆ. ಅಲ್ಲಾಹನು ಅವರ ಜೇಬನ್ನು ಯಾವಾಗಲೂ ತುಂಬಿಸಿ ಇಟ್ಟಿದ್ದನು. ಅಸಾಧಾರಣವಾದ ರೀತಿಯಲ್ಲಿ ಅವರಿಗೆ ಕೆಲವು ಆದಾಯಗಳು ಸಿಗುತ್ತಿದ್ದುವು. ಅದೇ ರೀತಿಯಲ್ಲಿ ಅವರು ಅವುಗಳನ್ನು ಬಡವರಿಗಾಗಿ ಮತ್ತು ಜಮಾಅತಿಗಾಗಿ ಖರ್ಚು ಮಾಡುತ್ತಿದ್ದರು. ಹೇಗಿದ್ದರೂ ಕೆಲವು ಕಾಲದ ನಂತರ ಅವರು ಒಂದು ಕನಸಿನ ಆಧಾರದಲ್ಲಿ ತಮ್ಮ ಜೀವಿತವನ್ನು ವಖ್ಫ್ ಮಾಡಿದರು. ಜೀವಿತ ವಖ್ಫ್ ಮಾಡುವ ವೇಳೆಯಲ್ಲಿ ಅವರ ನಿಕಾಹ್ ನಡೆದಿತ್ತು. ಅವರ ಪತ್ನಿ ಹೈದರಾಬಾದಿನಲ್ಲಿ ಇದ್ದರು. ಸಂಬಂಧಿಕರಾದ ಒಬ್ಬಳು ಸ್ತ್ರೀ ಅವರ ಪತ್ನಿಯ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದರು. ಡಾಕ್ಟರ್ ಬಳಿಗೆ ಹೋಗಲಿಕ್ಕಿದೆ ಎಂದು ಅವರೊಡನೆ ಸಹ ಹೇಳಿದರು. ಅಲ್ಲಿಂದ ರೈಲುಗಾಡಿಯಿಂದ ಇಳಿದಾಗ, ಆ ಸಂಬಂಧಿಯಾದ ಸ್ತ್ರೀ ಅವರೊಡನೆ ಹೇಳಿದರು: ನೀವು ವಖ್ಫ್ ಮಾಡಿದ್ದೀರಿ ಎಂದು ನಾನು ಕೇಳಿದ್ದೇನೆ. ವಖ್ಫ್ ಮಾಡಿದ್ದವರಿಗೆ ಆಹಾರಕ್ಕೂ ಹಣವಿರುವುದಿಲ್ಲ. ಮುಬಾರಕ್ ಸಾಹಿಬ್ ತಕ್ಷಣವೇ ಹೇಳಿದರು: ಈಗ ನಿಕಾಹ್ ಮಾತ್ರ ನಡೆದಿದೆ. ಬೀಳ್ಕೊಡುವಿಕೆ ನಡೆದಿಲ್ಲ. ನಿಮಗೆ ಇಷ್ಟು ಸಂಶಯವಿದ್ದರೆ, ನೀವು ನಿಮ್ಮ ಮಗಳನ್ನು ಮನೆಗೆ ಕರೆದುಕೊಂಡು ಹೋಗಿರಿ" ಎಂದು ಹೇಳಿ ಬೇಸರಗೊಂಡು ಅಲ್ಲಿಂದ ಹೊರಟುಹೋದರು. ಹೇಗಿದ್ದರೂ ಅವರು ವಖ್ಫ್‌ನ ಅಭಿಮಾನವನ್ನು ಕಾಪಾಡಿದರು. ಅವರು ವಖ್ಫ್‌ನಲ್ಲಿದ್ದುಕೊಂಡೇ ಅಲ್ಲಾಹನು ಸಹಅವರಿಗೆ ಅಪರಿಮಿತವಾಗಿ ನೀಡಿದ್ದನು. ಆರ್ಥಿಕವಾಗಿ ಬಹಳ ಉತ್ತಮ ಸ್ಥಿತಿಯಲ್ಲಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರ(ರಹ್) ಕಾಲದಲ್ಲಿ ಅವರು ಕಾನೂನು ಸಲಹೆಗಾರರಾಗಿದ್ದರು. ಕೇಸುಗಳಿಗೆ ಪಟ್ಟಣದ ಹೊರಗೆ ಹೋಗಬೇಕಾಗಿ ಬರುತ್ತಿತ್ತು. ಬಸ್ಸಿನಲ್ಲಿ ಯಾತ್ರೆ ಮಾಡಲಾಗುತ್ತಿತ್ತು. ಪ್ರತಿಯೊಬ್ಬರ ಬಳಿ ಆ ಕಾಲದಲ್ಲಿ ರಬ್ವದಲ್ಲಿ ಯಾತ್ರೆಯ ಸೌಕರ್ಯ ಅಥವಾ ಕಾರುಗಳ ಸೌಕರ್ಯಗಳೆಲ್ಲ ಇರುತ್ತಿರಲಿಲ್ಲ. ಯಾತ್ರೆಯಿಂದ ಮರಳಿಬರುವಾಗಲೆಲ್ಲ ಬಂದು ರಿಪೋರ್ಟ್ ಮಾಡಬೇಕೆಂದು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರ ಆದೇಶವಿತ್ತು. ಮುಬಾರಕ್ ಸಾಹಿಬ್‌ರು ಹೇಳುತ್ತಾರೆ: ಒಂದು ಬಾರಿ ತುಂಬ ರಾತ್ರಿಯಾಯಿತು. ಫಜ್ರ್ ನಮಾಝ್‌ಗಿಂತ ಕೇವಲ ಎರಡು ಗಂಟೆಗಳಿಗೆ ಮುಂಚಿತವಾಗಿ ನಾನು ರಬ್ವ ತಲುಪಿದೆ. ಈಗ ಹೋಗಿ ಹಝ್ರತ್ ಖಲೀಫತುಲ್ ಮಸೀಹ್‌ರ ನಿದ್ದೆಯನ್ನು ಹಾಳುಮಾಡುವ ಆವಶ್ಯಕತೆಯಿಲ್ಲವೆಂದು ಯೋಚಿಸಿದೆ. ನಫ್ಲ್ ನಿರ್ವಹಿಸುತ್ತಿದ್ದಾರೆಯೇ, ನಿದ್ದೆ ಮಾಡುತ್ತಿದ್ದರಾರೆಯೇ ಎಂದು ಗೊತ್ತಿಲ್ಲ ಫಜ್ರ್ ನಮಾಝ್ ನಂತರ ಯಾತ್ರೆಯಿಂದ ಮರಳಿ ಬಂದ ವಿವರ ತಿಳಿಸುತ್ತೇನೆ ಎಂದು ನಾನು ಭಾವಿಸಿದೆ. ಫಜ್ರ್ ನಮಾಝ್‌ನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ನನ್ನನ್ನು ಕಂಡು ಕೇಳಿದರು: ಮುಬಾರಕ್ ಸಾಹಿಬ್, ರಾತ್ರಿ ಯಾವಾಗ ಬಂದಿರಿ? ನಾನು ಹೇಳಿದೆ: ಈಗ ಒಂದುವರೆ ಎರಡು ಗಂಟೆ ಮುಂಚೆ. ಆಗ ಹಝ್ರತ್ ಖಲೀಫತುಲ್ ಮಸೀಹ್ ಹೇಳಿದರು: ನೀನು ಆಗಲೇ ನನಗೆ ತಿಳಿಸಿದ್ದರೆ, ನಾನು ಸ್ವಲ್ಪ ಸಮಯ ಮಲಗುತ್ತಿದ್ದೆ. ನೀನು ಯಾತ್ರೆಯಿಂದ ಕ್ಷೇಮವಾಗಿ ತಲುಪಿದ್ದಿಯೋ ಇಲ್ಲವೋ ಎಂದು ಯೋಚಿಸಿ ಕಾಯುತ್ತಿದ್ದೆ.

ಅವರ ಮಗನು ಹೇಳುತ್ತಾರೆ: ನಾನು ವಖ್ಫ್ ಮಾಡಿ ಜಾಮಿಅಗೆ ಹೋಗಲು ನಿರ್ಧರಿಸಿದ್ದಾಗ ಅವರು ನನ್ನೊಡನೆ ಹೇಳಿದರು: ವಖ್ಫ್ ಎಂಬುದು ಅನುಸರಣೆಯ ಹೆಸರಾಗಿದೆ. ನಿನ್ನ ಸ್ವಭಾವದಲ್ಲಿ ಸ್ವಲ್ಪ ತೀಕ್ಷ್ಣತೆ ಇದೆ, ಮುಂಗೋಪವಿದೆ. ಇದರಿಂದ ವಖ್ಫ್ ಸರಿಯಾಗಲಿಕ್ಕಿಲ್ಲ. ವಖ್ಫ್ ಎಂದರೆ ಮೌನವಾಗಿ ಮತ್ತು ಅನುಸರಣೆಯಿಂದ ಸೇವೆ ಮಾಡುವ ಹೆಸರಾಗಿದೆ. ನಿನಗೆ ಹೀಗಿರಲು ಸಾಧ್ಯವಿದೆ ಎಂದಾದರೆ, ಸಂತೋಷದ ಸಂಗತಿ. ಅಲ್ಲದೆ, ವಖ್ಫ್ ಮಾಡಿಕೊಂಡು ಅದನ್ನು ಬಿಡುವುದು ನನಗೆ ಇಷ್ಟವಲ್ಲ.

*(ಪುಟ 01 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಉಸ್ಮಾನ್(ರ) ಹೇಳುತ್ತಾರೆ: ಯಾವುದೇ ಸಮುದಾಯ ನೇತೃತ್ವವಿಲ್ಲದೇ ಅಭಿವೃದ್ಧಿ ಹೊಂದಲು ಸಾಧ್ಯವಲ್ಲ. ಇಮಾಂ ಇಲ್ಲದಿದ್ದರೆ, ಜಮಾಅತಿನ ಎಲ್ಲ ಕೆಲಸಗಳು ಹಾಳಾಗಿ ನಾಶವಾಗುತ್ತದೆ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಧುನ್ನೂರೈನ್ ಹಝ್ರತ್ ಉಸ್ಮಾನ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಅಲ್‌ಜೀರಿಯಾ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡುವ ವಿಶೇಶ ಕೋರಿಕೆ**

**ನಾಲ್ಕು ದಿವಂಗತರಾದ ಸನ್ಮಾನ್ಯ ಮೌಲವಿ ಮುಹಮ್ಮದ್ ನಜೀಬ್ ಖಾನ್ ಸಾಹಿಬ್, ಚೌಧರಿ ಅಹ್ಮದ್ ದೀನ್ ಚಟ್ಟ ಸಾಹಿಬ್‌ರ ಮಗನಾದ ನಧೀರ್ ಅಹ್ಮದ್ ಖಾದಿಮ್ ಸಾಹಿಬ್, ಸನ್ಮಾನ್ಯ ಅಲ್‌ಹಾಜ್ಜ್ ಡಾಕ್ಟರ್ ನಾನಾ ಮುಸ್ತಫಾ ಏಟೀ ಬಾಟಿಂಗ್ ಸಾಹಿಬ್ ಮತ್ತು ರಬ್ವದ ಫಝ್ಲ್ ದೀನ್ ಸಾಹಿಬ್‌ರ ಮಗನಾದ ಸನ್ಮಾನ್ಯ ಗ್ಝುಲಾಂ ನಬಿ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **05-03-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಉಸ್ಮಾನ್‌ರ(ರ) ವಿರುದ್ಧ ಎದ್ದ ಪಿತೂರಿಯ ಬಗ್ಗೆ ಪ್ರಸ್ತಾಪ ನಡೆಯುತ್ತಿತ್ತು. ಇದರ ಬಗ್ಗೆ ಬಹುತೇಕ ಉಲ್ಲೇಖಗಳನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ತಬರಿಯಿಂದ ತೆಗೆದುಕೊಂಡು ಅವುಗಳನ್ನು ಅವಲೋಕಿಸಿದ್ದಾರೆ ಮತ್ತು ಅದರ ಬಗ್ಗೆ ತನ್ನ ದೃಷ್ಟಿಕೋನವನ್ನು ಹೇಳಿರುವರು. ಅವರು ಹೇಳುತ್ತಾರೆ: ಮೂವರು ವ್ಯಕ್ತಿಗಳಾದ ಮುಹಮ್ಮದ್ ಬಿನ್ ಅಬೂಬಕರ್, ಮುಹಮ್ಮದ್ ಬಿನ್ ಹುಧೈಫ ಮತ್ತು ಅಮ್ಮಾರ್ ಬಿನ್ ಯಾಸಿರ್ ವಿದ್ರೋಹಿಗಳ ಮಾತಿಗೆ ಮೋಸ ಹೋಗಿ ಅವರೊಂದಿಗೆ ಸೇರಿಕೊಂಡಿದ್ದರು. ಇವರಲ್ಲದೇ ಮದೀನ ನಿವಾಸಿಗಳಲ್ಲಿ ಯಾರಿಗೂ ಗಲಭೆಕೋರರೊಂದಿಗೆ ಅನುಕಂಪ ಇರಲಿಲ್ಲ. ಪ್ರತಿಯೊಬ್ಬರು ಅವರನ್ನು ದೂಷಿಸುತ್ತಲೂ ಶಪಿಸುತ್ತಲೂ ಇದ್ದರು. ಆದರೆ ವಿದ್ರೋಹಿಗಳು ಯಾರ ದೂಷಣೆಯ ಪರಿವೆ ಮಾಡುತ್ತಿರಲಿಲ್ಲ. ಹಝ್ರತ್ ಉಸ್ಮಾನ್(ರ) ಖಿಲಾಫತ್ ಸ್ಥಾನವನ್ನು ತ್ಯಜಿಸುವಂತೆ ಮಾಡಲು 20 ದಿನಗಳ ವರೆಗೆ ವಿದ್ರೋಹಿಗಳು ಬಾಯಿಮಾತಿನ ಮೂಲಕ ಪ್ರಯತ್ನಿಸಿದರು. ಆದರೆ ಹಝ್ರತ್ ಉಸ್ಮಾನ್(ರ) ಇದನ್ನು ಸಂಪೂರ್ಣವಾಗಿ ನಿರಾಕರಿಸಿದರು ಮತ್ತು ಹೀಗೆ ಹೇಳಿದರು: ಅಲ್ಲಾಹನು ನನಗೆ ತೊಡಿಸಿದ ನಿಲುವಂಗಿಯನ್ನು ಕಳಚುವಂತಿಲ್ಲ. ಯಾರಿಗೆ ಬೇಕಾದರೂ ಇತರರ ಮೇಲೆ ದೌರ್ಜನ್ಯ ಮಾಡುವ ರೀತಿಯಲ್ಲಿ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯವನ್ನು ಅಸುರಕ್ಷಿತಾವಸ್ಥೆಯಲ್ಲಿ ಬಿಡಲು ಸಾಧ್ಯವಲ್ಲ. ಈ ಕಲಹದಿಂದ ಬಿಟ್ಟುನಿಲ್ಲಲು ಅವರನ್ನು ಉಪದೇಶಿಸುತ್ತಿದ್ದರು. ಹಝ್ರತ್ ಉಸ್ಮಾನ್(ರ) ಹೇಳಿದರು: ಇಂದು ಇವರು ಕಲಹವನ್ನುಂಟು ಮಾಡುತ್ತಾರೆ ಮತ್ತು ನನ್ನ ಜೀವಿತದಿಂದ ಬೇಸರಗೊಂಡಿದ್ದಾರೆ. ಆದರೆ "ಉಸ್ಮಾನ್‌ರ ವಯಸ್ಸಿನ ಒಂದೊಂದು ದಿನ ಒಂದೊಂದು ವರ್ಷವಾಗಿ ಬದಲಾಗಿದ್ದರೆ ಮತ್ತು ಅವರು ಬೇಗನೇ ನಮ್ಮನ್ನು ಬಿಟ್ಟುಹೋಗಿರದಿದ್ದರೆ ಎಷ್ಟು ಚೆನ್ನಾಗಿತ್ತು" ಎಂದು ನನ್ನ ಮರಣದ ನಂತರ ಅವರು ಬಯಸುವರು. ಏಕೆಂದರೆ ನನ್ನ ನಂತರ ಘೋರವಾದ ಕೊಲೆಗಳು, ಹಕ್ಕುಗಳ ದೋಚುವಿಕೆ ಮತ್ತು ಅವ್ಯವಸ್ಥೆಗಳು ಉಂಟಾಗುವುವು. ಹೀಗೆ ಬನೂ ಉಮಯ್ಯರ ಕಾಲದಲ್ಲಿ ಖಿಲಾಫತ್ ಆಡಳಿತಶಾಹಿಯಾಗಿ ಬದಲಾಯಿತು ಮತ್ತು ವಿದ್ರೋಹಿಗಳು ವಿದ್ರೋಹ ಮಾಡುವುದನ್ನು ಮರೆತುಬಿಡುವ ರೀತಿಯಲ್ಲಿ ಅವರಿಗೆ ಶಿಕ್ಷೆ ಕೂಡ ಲಭಿಸಿತು.

ಹೇಗಿದ್ದರೂ ರಾಜ್ಯಗಳಿಂದ ಸೈನ್ಯಗಳು ಬಂದು ಅವರಿಗೆ ಅವರ ಕುಕೃತ್ಯಗಳಿಗೆ ಶಿಕ್ಷೆ ಅನುಭವಿಸಬೇಕಾಗಿ ಬರದಿರಲಿಕ್ಕಾಗಿ ಬೇಗನೇ ತೀರ್ಮಾನ ಮಾಡಬೇಕೆಂಬ ಯೋಚನೆ 20 ದಿನಗಳು ಕಳೆದ ನಂತರ ವಿದ್ರೋಹಿಗಳಿಗೆ ಉಂಟಾಯಿತು. ತಪ್ಪನ್ನು ಮಾಡುತ್ತಿದ್ದೇವೆ ಎಂದು ಅವರಿಗೆ ಗೊತ್ತಿತ್ತು. ಬಹುತೇಕ ಮುಸ್ಲಿಮರು ಹಝ್ರತ್ ಉಸ್ಮಾನ್‌ರೊಂದಿಗೆ ಇದ್ದರು. ಆದ್ದರಿಂದ ವಿದ್ರೋಹಿಗಳು ಹಝ್ರತ್ ಉಸ್ಮಾನ್(ರ) ಮನೆಯಿಂದ ಹೊರಗೆ ಹೋಗುವುದನ್ನು ತಡೆದರು ಮತ್ತು ಆಹಾರ ಪಾನೀಯಗಳು ಅವರ ಮನೆಯ ಒಳಗೆ ಪ್ರವೇಶಿಸುವುದನ್ನು ಕೂಡ ತಡೆದರು. ಈ ರೀತಿಯಲ್ಲಿ ಹಝ್ರತ್ ಉಸ್ಮಾನ್(ರ) ವಿವಶರಾಗಿಕೊಂಡು ಅವರ ಬೇಡಿಕೆಗಳನ್ನು ಅಂಗೀಕರಿಸುವರು ಎಂದು ಅವರು ಭಾವಿಸಿದರು. ಆದರೆ ಅಲ್ಲಾಹನು ಅವರಿಗೆ ತೊಡಿಸಿದ ನಿಲುವಂಗಿಯನ್ನು ಹೇಗೆ ಕಳಚುವುದು ಎಂದು ಅವರು ಮೊದಲೇ ಹೇಳಿದ್ದರು. ಹೇಗಿದ್ದರೂ ಮದೀನದ ವ್ಯವಸ್ಥೆ ಈ ಜನರ ಕೈಗಳಲ್ಲೇ ಇತ್ತು. ಅವರೆಲ್ಲರೂ ಸೇರಿಕೊಂಡು ಈಜಿಪ್ಟಿನ ಸೈನ್ಯದ ಸೇನಾಧಿಪತಿಯಾದ ಗ್ಹಾಫ್‌ಖಿಯನ್ನು ಅವರ ನೇತಾರರನ್ನಾಗಿ ಅಂಗೀಕರಿಸಿದ್ದರು. ಹೀಗೆ ಮದೀನದ ಆಡಳಿತಗಾರ ಗ್ಹಾಫ್‌ಖಿ ಎಂಬಂತೆ ಆಯಿತು. ಕೂಫದ ಸೈನ್ಯದ ಸರದಾರ ಉಶ್ತರ್ ಆಗಿದ್ದನು. ಜನರ ಸಂಪತ್ತನ್ನು ಲೂಟಿ ಮಾಡಿದ ಕಾರಣದಿಂದ ಹಕೀಂ ಬಿನ್ ಜಬ್‌ಲ ಎಂಬವನನ್ನು ಬಂಧಿಸಲು ಮುಂಚೆ ಹಝ್ರತ್ ಉಸ್ಮಾನ್(ರ) ಆದೇಶಿಸಿದ್ದರು. ಆ ದರೋಡೆಕೋರ ಈಗ ಬಸ್ರದ ಸೈನ್ಯದ ಸರದಾರ ಆದನು. ಹಕೀಂ ಬಿನ್ ಜಬ್ಲ ಮತ್ತು ಉಶ್ತರ್ ಗ್ಹಾಫ್‌ಕಿಯ ಕೆಳಗೆ ಕೆಲಸ ಮಾಡಲು ತೊಡಗಿದರು. ಇದರಿಂದ ಪಿತೂರಿಯ ಬೇರು ಇರುವುದು ಈಜಿಪ್ಟಿನಲ್ಲಾಗಿದೆ ಎಂದು ಸಾಬೀತಾಗುತ್ತದೆ. ಅಲ್ಲಿ ಅಬ್ದುಲ್ಲಾಹ್ ಬಿನ್ ಸಬಾ ತನ್ನ ಕುಕೃತ್ಯಗಳನ್ನು ಮಾಡುತ್ತಿದ್ದನು.

ಮಸ್ಜಿದ್ ನಬವಿಯಲ್ಲಿ ಗ್ಹಾಫ್‌ಕಿ ನಮಾಝಿನ ಇಮಾಮತ್ ವಹಿಸುತ್ತಿದ್ದನು. ಹಝ್ರತ್ ಪೈಗಂಬರರ(ಸ) ಸಹಾಬರು ತಮ್ಮ ತಮ್ಮ ಮನೆಗಳಲ್ಲಿ ಬಂಧಿಯಾಗಿದ್ದರು ಅಥವಾ ಅವನ ಹಿಂದೆ ನಮಾಝ್ ನಿರ್ವಹಿಸಲು ನಿರ್ಬಂಧಿತರಾಗಿದ್ದರು. ಹಝ್ರತ್ ಉಸ್ಮಾನ್‌ರ ಮನೆಗೆ ಮುತ್ತಿಗೆ ಹಾಕುವ ತನಕ ಈ ವಿದ್ರೋಹಿಗಳು ಸಾಮಾನ್ಯ ಜನರನ್ನು ಸುಮ್ಮನೆ ಬಿಟ್ಟಿದ್ದರು. ಆದರೆ ವಿದ್ರೋಹಿಗಳು ಹಝ್ರತ್ ಉಸ್ಮಾನ್‌ರ(ರ) ಮನೆಯನ್ನು ಸುತ್ತುವರೆದ ನಂತರ ಇತರರ ಮೇಲೆ ಸಹ ಕಠಿಣವಾಗಿ ವರ್ತಿಸಲು ಶುರುಮಾಡಿದರು. ಹೀಗೆ ಮದೀನ ಸಮಾಧಾನದ ಬೀಡು ಆಗುವ ಬದಲಿಗೆ ಯುದ್ಧಭೂಮಿಯಾಗಿತ್ತು. ಮದೀನ ನಿವಾಸಿಗಳ ಗೌರವಾದರಗಳು ಅಪಾಯದಲ್ಲಿತ್ತು. ಆಯುಧವಿಲ್ಲದೇ ಯಾರೂ ಮನೆಯಿಂದ ಹೊರಗೆ ಹೋಗುತ್ತಿರಲಿಲ್ಲ. ಗಲಭೆಕೋರರನ್ನು ಎದುರಿಸುವವರನ್ನು ಅವರು ಕೊಲ್ಲುತ್ತಿದ್ದರು. ವಿದ್ರೋಹಿ ಜನರು ಹಝ್ರತ್ ಉಸ್ಮಾನ್‌ರ ಮನೆಗೆ ಮುತ್ತಿಗೆ ಹಾಕಿಕೊಂಡು ಆಹಾರ ಪಾನೀಯಗಳನ್ನು ಕೂಡ ತಡೆದಾಗ, ಹಝ್ರತ್ ಉಸ್ಮಾನ್(ರ) ತನ್ನ ನೆರೆಕರೆಯ ಒಬ್ಬ ಹುಡುಗನನ್ನು ಹಝ್ರತ್ ಅಲಿ, ಹಝ್ರತ್ ತಲ್‌ಹ, ಹಝ್ರತ್ ಝುಬೇರ್ ಮತ್ತು ಹಝ್ರತ್ ಪೈಗಂಬರರ(ಸ) ಪತ್ನಿಯಂದಿರ ಬಳಿಗೆ ಕಳುಹಿಸಿದರು. ವಿದ್ರೋಹಿಗಳು ನಮಗೆ ನೀರನ್ನು ಕೂಡ ತಡೆದಿದ್ದಾರೆ, ನಿಮ್ಮಿಂದ ಆಗುವುದಾದರೆ, ನಮಗೆ ನೀರು ತಲುಪಿಸಲು ಪ್ರಯತ್ನಿಸಿರಿ ಎಂದು ಅವರೊಡನೆ ಹೇಳಿ ತಿಳಿಸಿದರು. ಪುರುಷರಲ್ಲಿ ಮೊಟ್ಟಮೊದಲು ಹಝ್ರತ್ ಅಲಿ(ರ) ಬಂದು ವಿದ್ರೋಹಿಗಳೊಡನೆ ಹೀಗೆ ಹೇಳಿದರು: "ನೀವು ಹೇಗೆ ವರ್ತಿಸುತ್ತಿದ್ದೀರಿ. ನಿಮ್ಮ ಕರ್ಮಗಳು ಸತ್ಯವಿಶ್ವಾಸಿಗಳ ಕೃತ್ಯಗಳ ಹಾಗೆಯೂ ಇಲ್ಲ; ಸತ್ಯನಿಷೇಧಿಗಳ ಕೃತ್ಯಗಳ ಹಾಗೆಯೂ ಇಲ್ಲ. ಹಝ್ರತ್ ಉಸ್ಮಾನ್‌ರ ಮನೆಗೆ ಆಹಾರ ಪಾನೀಯ ತಲುಪದಂತೆ ಮಾಡಬೇಡಿರಿ. ರೋಮನ್ನರು ಮತ್ತು ಪೇರ್ಶಿಯನ್ನರು ಕೂಡ ಕೈದಿ ಮಾಡುವಾಗ ಆಹಾರ ಪಾನೀಯಗಳನ್ನು ಕೊಡುತ್ತಾರೆ. ಇಸ್ಲಾಮಿನ ರೀತಿಯ ಪ್ರಕಾರ ನಿಮ್ಮ ಈ ಕೃತ್ಯ ಯಾವ ರೀತಿಯಲ್ಲೂ ಅನುಮತನೀಯವಲ್ಲ.. ಅವರನ್ನು ಬಂಧಿಸುವುದನ್ನು ಮತ್ತು ಕೊಲೆ ಮಾಡುವುದನ್ನು ಅನುಮತನೀಯವೆಂದು ನೀವು ಭಾವಿಸುವಂತಾಗಲು ಹಝ್ರತ್ ಉಸ್ಮಾನ್ ನಿಮಗೆ ಏನು ಕೇಡುಂಟು ಮಾಡಿರುವರು." ಹಝ್ರತ್ ಅಲಿಯ(ರ) ಈ ಉಪದೇಶ ಅವರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ. ವಿದ್ರೋಹಿಗಳು ಸ್ಪಷ್ಟವಾಗಿ ಹೀಗೆ ಹೇಳಿದರು: "ಏನೇ ಆದರು ನಾವು ಅವರಿಗೆ ಆಹಾರ ಪಾನೀಯ ತಲುಪಲು ಬಿಡುವುದಿಲ್ಲ." ಹಝ್ರತ್ ಪೈಗಂಬರರ(ಸ) ವಸ್ಸೀ (ಉಯಿಲು ಮಾಡಲ್ಪಟ್ಟವ) ಮತ್ತು ಯಥಾರ್ಥ ಉತ್ತರಾಧಿಕಾರಿಯೆಂದು ಯಾರ ಬಗ್ಗೆ ವಿದ್ರೋಹಿಗಳು ಹೇಳುತ್ತಾರೋ ಅವರಿಗೆ ವಿದ್ರೋಹಿಗಳು ಕೊಟ್ಟ ಉತ್ತರವಾಗಿದೆ ಇದು. ಹಝ್ರತ್ ಪೈಗಂಬರರ(ಸ) ಯಥಾರ್ಥ ಉತ್ತರಾಧಿಕಾರಿಯೆಂದು ಇವರು ಹಝ್ರತ್ ಅಲಿ ಬಗ್ಗೆಯೇ ಅಲ್ಲವೇ ಹೇಳುತ್ತಿದ್ದದ್ದು. ಇದು ಅವರಿಗೆ ಸಿಕ್ಕ ಉತ್ತರವಾಗಿದೆ. ಈ ಜನರು ಸತ್ಯಕ್ಕೆ ನೆರವು ನೀಡುವ ಮತ್ತು ಹಝ್ರತ್ ಪೈಗಂಬರರ(ಸ) ಕುಟುಂಬದೊಂದಿಗೆ ಪ್ರೇಮವಿರುವ ಜನರಲ್ಲ ಎಂದು ಈ ಉತ್ತರದಿಂದ ಗೊತ್ತಾಗುತ್ತದೆ. ಬೇರೆ ಪುರಾವೆಗಳ ಆವಶ್ಯಕತೆಯೇ ಇಲ್ಲ. ಇವರು ತಮ್ಮ ಸ್ವಂತ ಸ್ವಾರ್ಥಕ್ಕಾಗಿ ಅಲ್ಲಿದ್ದರು.

ಹೇಗಿದ್ದರೂ ಹಝ್ರತ್ ಪೈಗಂಬರರ(ಸ) ಪತ್ನಿಯಂದಿರಲ್ಲಿ ಮೊಟ್ಟಮೊದಲು ಉಮ್ಮೇ ಹಬೀಬ ಸಹಾಯಕ್ಕಾಗಿ ಬಂದರು. ಒಂದು ಹೇಸರಗತ್ತೆಯ ಮೇಲೆ ಅವರು ಸವಾರರಾಗಿದ್ದರು. ಅವರು ಒಂದು ತೋಳುಚೀಲದಲ್ಲಿ ನೀರು ಸಹ ತಂದಿದ್ದರು. ಬನೂ ಉಮಯ್ಯದ ಅನಾಥರ ಮತ್ತು ವಿಧವೆಗಳ ವಸಿಯ್ಯತ್‌ಗಳು ಹಝ್ರತ್ ಉಸ್ಮಾನ್‌ರ ಬಳಿಯಿದ್ದುವು. ಹಝ್ರತ್ ಉಸ್ಮಾನ್‌ರಿಗೆ ಆಹಾರ ಪಾನೀಯಗಳು ಕೂಡ ತಲಪದಂತೆ ಮಾಡಲಾಗಿದೆ ಎಂದು ಅವರಿಗೆ ಗೊತ್ತಾದಾಗ, ಈ ವಸಿಯ್ಯತ್‌ಗಳು ಸಹ ನಾಶವಾಗುವುದೋ ಎಂಬ ಭಯ ಅವರಿಗೆ ಉಂಟಾಯಿತು. ಆದ್ದರಿಂದ ಯಥಾರ್ಥದಲ್ಲಿ ಅವರು ಆ ವಸಿಯ್ಯತ್ ಪತ್ರಗಳನ್ನು ಸುರಕ್ಷಿತಗೊಳಿಸಲು ಬಂದಿದ್ದರು. ನೀರನ್ನು ಅವರು ಬೇರೆಯವರ ಮೂಲಕ ಕೂಡ ತಲುಪಿಸಬಹುದಾಗಿತ್ತು. ಹಝ್ರತ್ ಉಮ್ಮೇ ಹಬೀಬ ಹಝ್ರತ್ ಉಸ್ಮಾನ್‌ರ ಮನೆಬಾಗಿಲ ಸಮೀಪ ತಲುಪಿದಾಗ ವಿದ್ರೋಹಿಗಳು ಅವರನ್ನು ತಡೆಯಲು ಬಯಸಿದರು. ಇವರು ಉಮ್ಮುಲ್ ಮೂಮಿನೀನ್ ಉಮ್ಮೇ ಹಬೀಬ ಆಗಿರುವರು ಎಂದು ಜನರು ವಿದ್ರೋಹಿಗಳೊಡನೆ ಹೇಳಿದರು. ಆದರೂ ವಿದ್ರೋಹಿಗಳು ಅವರನ್ನು ತಡೆದರು. ಅವರ ಹೇಸರಗತ್ತೆಯನ್ನು ಹೊಡೆಯಲು ಶುರುಮಾಡಿದರು. ಉಮ್ಮೇ ಹಬೀಬ ವಿದ್ರೋಹಿಗಳೊಡನೆ ಹೇಳಿದರು: ಬನೂ ಉಮಯ್ಯದ ಅನಾಥರ ಮತ್ತು ವಿಧವೆಯರ ವಸಿಯ್ಯತ್ ಪತ್ರ ನಾಶವಾಗದೇ ಅವುಗಳನ್ನು ಸುರಕ್ಷಿತಗೊಳಿಸಲು ನಾನು ಒಳಗೆ ಹೋಗಲು ಇಚ್ಛಿಸುತ್ತಿದ್ದೇನೆ. ಆದರೆ ನೀವು ಸುಳ್ಳು ಹೇಳುತ್ತಿದ್ದೀರಿ ಎಂದು ಈ ಹತಭಾಗ್ಯರು ಹಝ್ರತ್ ಪೈಗಂಬರರ(ಸ) ಪರಿಶುದ್ಧ ಪತ್ನಿಯೊಂದಿಗೆ ಹೇಳಿದರು. ಅವರ ಹೇಸರಗತ್ತೆಯ ಮೇಲೆ ಹಲ್ಲೆ ನಡೆಸಿ ಅದರ ಆಸನದ ಹಗ್ಗವನ್ನು ತುಂಡರಿಸಿದರು. ಅದರ ಆಸನ ಮಗುಚಿಹೋಗಿ ಹಝ್ರತ್ ಉಮ್ಮೇ ಹಬೀಬ ಅದರಿಂದ ಬೀಳುವಂತೆ ಆಯಿತು. ಈ ವಿದ್ರೋಹಿಗಳ ಕಾಲುಗಳ ಅಡಿಯಲ್ಲಿ ಬಿದ್ದು ಶಹೀದ್ ಆಗಬಹುದಾದ ಸಾಧ್ಯತೆಯಿತ್ತು. ಅಷ್ಟರಲ್ಲಿ ಅಲ್ಲಿ ಸಮೀಪದಲ್ಲೇ ಇದ್ದ ಕೆಲವು ಮದೀನ ನಿವಾಸಿಗಳು ಬೇಗನೇ ಬಂದು ಅವರನ್ನು ರಕ್ಷಿಸಿದರು ಮತ್ತು ಅವರನ್ನು ಮನೆಗೆ ತಲುಪಿಸಿದರು.

ಹಝ್ರತ್ ಪೈಗಂಬರರ(ಸ) ಪತ್ನಿಯೊಂದಿಗೆ ವಿದ್ರೋಹಿಗಳ ವರ್ತಿಸಿದ ರೀತಿಯಾಗಿದೆ ಇದು. ಹಝ್ರತ್ ಉಮ್ಮೇ ಹಬೀಬರಿಗೆ ಹಝ್ರತ್ ಪೈಗಂಬರರೊಂದಿಗೆ(ಸ) ಎಷ್ಟು ಪ್ರೀತಿಯಿತ್ತು ಎಂದರೆ, ಅವರ ವಿವಾಹದ 15, 16 ವರ್ಷಗಳ ನಂತರ ಒಬ್ಬ ರಾಜನಂತಿದ್ದ ಅರೇಬಿಯದ ಸರದಾರರಾಗಿದ್ದ ಅವರ ತಂದೆ ಒಂದು ವಿಶೇಷ ಉದ್ದೇಶದಿಂದ ಮದೀನಕ್ಕೆ ಬಂದಾಗ, ಹಝ್ರತ್ ಉಮ್ಮೇ ಹಬೀಬರನ್ನು ಸಹ ಭೇಟಿಯಾಗಲು ಬಂದಿದ್ದರು. ಹಝ್ರತ್ ಪೈಗಂಬರ್(ಸ) ಉಪಯೋಗಿಸುತ್ತಿದ್ದ ಹಾಸಿಗೆಯನ್ನು ಮನೆಯಲ್ಲಿ ಹಾಸಲಾಗಿತ್ತು. ಅವರ ತಂದೆ ಅದರಲ್ಲಿ ಕುಳಿತುಕೊಳ್ಳಲು ಹೋದಾಗ, ಆ ಹಾಸಿಗೆಯನ್ನು ಅಲ್ಲಿಂದ ಎಳೆದರು. ಅಲ್ಲಾಹನ ಪ್ರವಾದಿಯ ಪರಿಶುದ್ಧ ಬಟ್ಟೆಯನ್ನು ಒಬ್ಬ ಸತ್ಯನಿಷೇಧಿಯ ಶರೀರ ಮುಟ್ಟುವುದು ಅವರಿಗೆ ಸಹಿಸಲು ಸಾಧ್ಯವಿರಲಿಲ್ಲ. ತಂದೆಯನ್ನು ಕೂಡ ಅದರಲ್ಲಿ ಕುಳಿತುಕೊಳ್ಳಲು ಬಿಡಲಿಲ್ಲ. ಹಝ್ರತ್ ಪೈಗಂಬರ್(ಸ) ಇಲ್ಲದ ಸಮಯದಲ್ಲಿ ಅವರ ಬಟ್ಟೆಯ ಪರಿಶುದ್ಧಿಯನ್ನು ಅವರು ಕಾಪಾಡಿದರು. ಆದರೆ ಹಝ್ರತ್ ಪೈಗಂಬರ್(ಸ) ಇಲ್ಲದ ಸಮಯದಲ್ಲಿ ವಿದ್ರೋಹಿಗಳು ಅವರ ಪತ್ನಿಯನ್ನು ಕೂಡ ಗೌರವಿಸಲಿಲ್ಲ ಎಂಬುದು ಅಚ್ಚರಿಯ ಸಂಗತಿಯಾಗಿದೆ. ಹಝ್ರತ್ ಪೈಗಂಬರರ ಪತ್ನಿ ಸುಳ್ಳು ಹೇಳುತ್ತಿದ್ದಾರೆ ಎಂದು ಈ ಮೂಢರು ಹೇಳಿದರು. ಹಝ್ರತ್ ಉಮ್ಮೇ ಹಬೀಬ(ರ) ಹೇಳಿದ್ದು ಸತ್ಯವೇ ಆಗಿತ್ತು.

ಹಝ್ರತ್ ಉಸ್ಮಾನ್(ರ) ಬನೂ ಉಮಯ್ಯರ ಸಂರಕ್ಷಕರಾಗಿದ್ದರು. ವಿದ್ರೋಹಿಗಳ ಶತ್ರುತ್ವವನ್ನು ನೋಡಿಕೊಂಡು ಅನಾಥರ ಮತ್ತು ವಿಧವೆಯರ ಸಂಪತ್ತು ನಾಶವಾಗಬಹುದೋ ಎಂಬ ಹಝ್ರತ್ ಉಮ್ಮೇ ಹಬೀಬರ ಭಯ ಸರಿಯೇ ಆಗಿತ್ತು. ಸತ್ಯದಲ್ಲಿ ಹಝ್ರತ್ ಪೈಗಂಬರರನ್ನು ಪ್ರೀತಿಸುತ್ತೇವೆ ಎಂದು ವಾದಿಸಿ ಧರ್ಮವನ್ನು ನಾಶಮಾಡುವ ಕೆಲಸದಲ್ಲಿ ನಿರತರಾಗಿದ್ದ ಈ ವಿದ್ರೋಹಿಗಳೇ ಯಥಾರ್ಥದಲ್ಲಿ ಸುಳ್ಳುಗಾರರಾಗಿದ್ದರು. ಹಝ್ರತ್ ಉಮ್ಮೇ ಹಬೀಬರೊಡನೆ ವಿದ್ರೋಹಿಗಳು ತೋರಿಸಿದ ವರ್ತನೆಯ ಸುದ್ದಿ ಮದೀನದಲ್ಲಿ ಹರಡಿತ್ತು. ಮದೀನ ನಿವಾಸಿಗಳು ಇದನ್ನು ಕೇಳಿ ಅಚ್ಚರಿಗೊಂಡರು. ಇನ್ನು ಅವರಿಂದ ಏನಾದರೂ ಒಳಿತನ್ನು ನಿರೀಕ್ಷಿಸುವುದು ವ್ಯರ್ಥವೆಂದು ಅವರಿಗೆ ಗೊತ್ತಾಯಿತು. ಹಝ್ರತ್ ಆಯಿಶ(ರ) ಅದೇ ಸಮಯದಲ್ಲಿ ಹಜ್ಜ್ ಮಾಡಲು ಉದ್ದೇಶಿಸಿದರು. ಯಾತ್ರೆಯ ತಯಾರಿ ಮಾಡಿದರು. ಹಝ್ರತ್ ಆಯಿಶ(ರ) ಮದೀನದಿಂದ ಹೋಗುತ್ತಿರುವುದಾಗಿ ಜನರಿಗೆ ಗೊತ್ತಾದಾಗ, ಕೆಲವರು ಅವರೊಡನೆ ಹೀಗೆ ವಿನಂತಿಸಿದರು: ನೀವು ಇಲ್ಲೇ ತಂಗಿರಿ. ಹಾಗಾದರೆ ಫಿತ್ನ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದು. ವಿದ್ರೋಹಿಗಳ ಮೇಲೆ ಸ್ವಲ್ಪ ಪ್ರಭಾವವಿರಬಹುದು. ಆದರೆ ಹಝ್ರತ್ ಆಯಿಶ(ರ) ಹೀಗೆ ಹೇಳಿಕೊಂಡು ನಿರಾಕರಿಸಿದರು: ಉಮ್ಮೇ ಹಬೀಬರೊಡನೆ ವರ್ತಿಸಿದ ರೀತಿಯಲ್ಲೇ ನನ್ನೊಂದಿಗೂ ವಿದ್ರೋಹಿಗಳು ವರ್ತಿಸುವಂತೆ ನೀವು ಮಾಡುತ್ತೀರಾ? ಅಲ್ಲಾಹನಾಣೆ, ನಾನು ನನ್ನ ಗೌರವವನ್ನು ಅಪಾಯದಲ್ಲಿ ಹಾಕಲು ಬಯಸುವುದಿಲ್ಲ. ಏಕೆಂದರೆ ಇದು ಹಝ್ರತ್ ಪೈಗಂಬರರ ಗೌರವವಾಗಿದೆ. ಏನಾದರೂ ಆದರೆ ನನ್ನ ಸಂರಕ್ಷಣೆಯ ಯಾವ ವ್ಯವಸ್ಥೆಯಿದೆ? ಈ ಜನರು ತಮ್ಮ ವಿದ್ರೋಹದಲ್ಲಿ ಎಷ್ಟರ ಮಟ್ಟಿಗೆ ಹೋಗುವರು ಮತ್ತು ಅದರ ಪರಿಣಾಮ ಏನಾಗುವುದು ಎಂದು ಅಲ್ಲಾಹನೇ ಬಲ್ಲನು. ಹಝ್ರತ್ ಆಯಿಶ(ರ) ಹೋಗುವಾಗ ಒಂದು ಯೋಜನೆಯನ್ನು ಮಾಡಿದರು. ಅದು ನಡೆದಿದ್ದರೆ ಕಲಹ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದಾಗಿತ್ತು. ಅದೇನೆಂದರೆ, ತನ್ನ ಅಲ್ಪ ಜ್ಞಾನದ ಕಾರಣದಿಂದ, ಸಣ್ಣವನಾದ ಕಾರಣದಿಂದ, ಬಲಹೀನ ವಿಶ್ವಾಸದ ಕಾರಣದಿಂದ ವಿದ್ರೋಹಿಗಳೊಂದಿಗೆ ಸೇರಿಕೊಂಡಿದ್ದ ಮುಹಮ್ಮದ್ ಬಿನ್ ಅಬೀಬಕರ್‌ನನ್ನು ಸಹ ಹಜ್ಜ್‌ಗೆ ತನ್ನೊಂದಿಗೆ ಬರಲು ಹಝ್ರತ್ ಆಯಿಶ(ರ) ಹೇಳಿದರು. ಆದರೆ ಅವರು ಅದನ್ನು ನಿರಾಕರಿಸಿದರು. ಆಗ ಹಝ್ರತ್ ಆಯಿಶ(ರ) ಹೇಳಿದರು; ಏನೂ ಮಾಡುವುದು? ನಾನೂ ಈಗ ನಿಸ್ಸಹಾಯಕ, ನನಗೆ ಶಕ್ತಿಯಿದ್ದರೆ, ಈ ವಿದ್ರೋಹಿಗಳ ಉದ್ದೇಶಗಳು ಈಡೇರಲು ನಾನು ಬಿಡುತ್ತಿರಲಿಲ್ಲ. ಹಝ್ರತ್ ಆಯಿಶ(ರ) ಹಜ್ಜ್‌ಗಾಗಿ ಹೋದರು. ಕೆಲವು ಸಹಾಬಿಯರು ಸಹ ಮದೀನದಿಂದ ಹೊರಟುಹೋದರು. ಕೆಲವು ಹಿರಿಯ ಸಹಾಬರನ್ನು ಬಿಟ್ಟು ಇತರ ಜನರು ಮನೆಯಲ್ಲೇ ಕುಳಿತುಕೊಂಡರು.

ಸೌಮ್ಯತೆಯಿಂದ ವರ್ತಿಸುವುದರಿಂದ ವಿದ್ರೋಹಿಗಳು ಏನನ್ನೂ ಸಮ್ಮತಿಸಲಾರರು ಎಂದು ಹಝ್ರತ್ ಉಸ್ಮಾನ್‌ರಿಗೆ ಅರಿವಾಗಿತ್ತು. ಹಝ್ರತ್ ಉಸ್ಮಾನ್(ರ) ಒಂದು ಪತ್ರವನ್ನು ಎಲ್ಲ ರಾಜ್ಯಗಳ ಅಧಿಕಾರಿಗಳ ಹೆಸರಲ್ಲಿ ರವಾನೆ ಮಾಡಿದರು. ಅದರ ಸಂಕ್ಷೇಪ ಹೀಗಿದೆ: "ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರರ ನಂತರ ಯಾವುದೇ ಬಯಕೆ ಅಥವಾ ವಿನಂತಿ ಇಲ್ಲದೆ ನನ್ನನ್ನು ಖಿಲಾಫತಿನ ಸಮಾಲೋಚನೆಯ ಕೆಲಸ ಒಪ್ಪಿಸಲ್ಪಟ್ಟ ಜನರಲ್ಲಿ ಸೇರಿಸಿದ್ದರು. ಅನಂತರ ನನ್ನ ಇಚ್ಛೆ ಅಥವಾ ಬೇಡಿಕೆಯಿಲ್ಲದೆ ನನ್ನನ್ನು ಖಿಲಾಫತಿಗಾಗಿ ಆಯ್ಕೆ ಮಾಡಲಾಯಿತು. ನನಗಿಂತ ಮುಂಚಿನ ಖಲೀಫರು ಮಾಡುತ್ತಿದ್ದ ಕೆಲಸಗಳನ್ನು ನಾನು ನಿರಂತರವಾಗಿ ಮುಂದುವರಿಸಿದೆ. ನಾನು ನನ್ನ ಕಡೆಯಿಂದ ಯಾವುದೇ ಹೊಸ ಆಚಾರಗಳನ್ನು ಶುರುಮಾಡಿರಲಿಲ್ಲ. ಆದರೆ ಕೆಲವು ಜನರ ಹೃದಯಗಳಲ್ಲಿ ಕೆಡುಕಿನ ಬೀಜ ನೆಡಲ್ಪಟ್ಟಿತು ಮತ್ತು ಕುಕೃತ್ಯಗಳು ಜಾರಿಯಾಯಿತು. ಅವರು ನನ್ನ ವಿರುದ್ಧ ಕುತಂತ್ರಗಳನ್ನು ಮಾಡಲು ಶುರುಮಾಡಿದರು. ಜನರ ಮುಂದೆ ಒಂದು ಮುಖವನ್ನು ಪ್ರಕಟಿಸಿದರು ಮತ್ತು ಹೃದಯದಲ್ಲಿ ಮತ್ತೊಂದು ಉದ್ದೇಶವನ್ನು ಇರಿಸಿಕೊಂಡಿದ್ದರು. ನನಗಿಂತ ಮುಂಚಿನ ಖಲೀಫರ ಮೇಲೆ ಹೊರಿಸಲಾಗುತ್ತಿದ್ದಂತಹ ಆರೋಪಗಳನ್ನು ನನ್ನ ಮೇಲೆ ಸಹ ಹೊರಿಸಲು ಶುರುಮಾಡಿದರು. ಆದರೆ ನಾನು ಗೊತ್ತಿದ್ದೂ ಮೌನವಾಗಿದ್ದೆ. ಈ ಜನರು ನನ್ನ ದಯೆಯಿಂದ ಅನುಮತನೀಯವಲ್ಲದ ಪ್ರಯೋಜನವನ್ನು ಪಡೆಯುತ್ತಾ ವಿದ್ರೋಹವನ್ನು ಇನ್ನೂ ಹೆಚ್ಚಿಸಿದರು. ಕೊನೆಗೆ ಸತ್ಯನಷೇಧಿಗಳ ಹಾಗೆ ಮದೀನದ ಮೇಲೆ ಆಕ್ರಮಣ ನಡೆಸಿದರು. ಆದ್ದರಿಂದ ಇಂದು ಏನಾದರೂ ನಿಮಗೆ ಮಾಡಲು ಸಾಧ್ಯವಿದ್ದರೆ, ಸಹಾಯ ತಲುಪಿಸುವ ಏರ್ಪಾಡು ಮಾಡಿರಿ."

ಅದೇ ರೀತಿಯಲ್ಲಿ ಹಝ್ರತ್ ಉಸ್ಮಾನ್(ರ) ಹಾಜಿಗಳ ಹೆಸರಲ್ಲಿ ಒಂದು ಪತ್ರವನ್ನು ಬರೆದರು. ಅದರ ಸಂಕ್ಷಿಪ್ತ ತಾತ್ಪರ್ಯ ಹೀಗಿದೆ: ಅಲ್ಲಾಹನ ಕಡೆಗೆ ನಿಮ್ಮ ಗಮನವನ್ನು ಸೆಳೆಯುತ್ತೇನೆ. ಅವನ ಔದಾರ್ಯಗಳನ್ನು ನೆನಪಿಸುತ್ತೇನೆ. ಈಗ ಕೆಲವು ಜನರು ಪಿತೂರಿಯನ್ನುಂಟು ಮಾಡುತ್ತಿದ್ದಾರೆ ಮತ್ತು ಇಸ್ಲಾಮಿನಲ್ಲಿ ಬಿರುಕು ಉಂಟುಮಾಡುವ ಪ್ರಯತ್ನದಲ್ಲಿ ಮಗ್ನರಾಗಿದ್ದಾರೆ. ವಅದಲ್ಲಾಹು.... ಎಂದರೆ,... ಖಲೀಫರನ್ನು ಅಲ್ಲಾಹನೇ ನೇಮಿಸುತ್ತಾನೆ ಎಂದು ಈ ಜನರು ಚಿಂತಿಸಲಿಲ್ಲ. ವತಸಿಮು...... ಎಂದರೆ ...... ಆದಾಗ್ಯೂ ಇವರು ಐಕ್ಯತೆಗೆ ಬೆಲೆಕೊಡುವುದಿಲ್ಲ ಮತ್ತು ನನ್ನ ಮೇಲೆ ಆರೋಪ ಹೊರಿಸುವವರ ಮಾತುಗಳನ್ನು ಅವರು ಸಮ್ಮತಿಸಿದರು. **"ಯಾ ಅಯ್ಯುಹಲ್ಲಧೀನ ಆಮನೂ ಇನ್ ಜಾಅಕುಂ ಫಾಸಿಕುನ್ ಬಿನಬಇನ್ ಫತಬಯ್ಯನೂ"** ಎಂಬ ಪವಿತ್ರ ಖುರ್‌ಆನಿನ ಆದೇಶದ ಪರಿವೆ ಮಾಡಲಿಲ್ಲ. ಎಂದರೆ,....... ಅಲ್ಲಾಹನು ಹಝ್ರತ್ ಪೈಗಂಬರರ(ಸ) ಕುರಿತು ಹೇಳುತ್ತಾನೆ: **ಇನ್ನಲ್ಲಧೀನ ಯುಬಾಯಿಊನಕ ಇನ್ನಮಾ ಯುಬಾಯಿಊನಲ್ಲಾಹ**. ಎಂದರೆ,... . ನಾನು ಹಝ್ರತ್ ಪೈಗಂಬರರ(ಸ) ಉತ್ತರಾಧಿಕಾರಿಯಾಗಿದ್ದೇನೆ. ಆದಾಗ್ಯೂ ಇವರು ನನಗೆ ಮತ್ತು ನನಗೆ ಮಾಡಿದ ಬೈಅತಿಗೆ ಗೌರವ ಕೊಡಲಿಲ್ಲ. ಯಾವುದೇ ಸಮುದಾಯ ನೇತೃತ್ವವಿಲ್ಲದೇ ಅಭಿವೃದ್ಧಿ ಹೊಂದಲು ಸಾಧ್ಯವಲ್ಲ. ಇಮಾಂ ಇಲ್ಲದಿದ್ದರೆ, ಜಮಾಅತಿನ ಎಲ್ಲ ಕೆಲಸಗಳು ಹಾಳಾಗಿ ನಾಶವಾಗುತ್ತದೆ. ಈ ಜನರು ಮುಸ್ಲಿಂ ಸಮುದಾಯವನ್ನು ನಾಶಮಾಡಲು ಬಯಸುತ್ತಾರೆ. ಇದಲ್ಲದೇ ಇವರಿಗೆ ಬೇರೆ ಉದ್ದೇಶವಿಲ್ಲ. ಕಾರಣವೇನೆಂದರೆ, ನಾನು ಇವರ ಮಾತುಗಳನ್ನು ಅಂಗೀಕರಿಸಿಕೊಂಡು ಅಧಿಕಾರಿಗಳನ್ನು ಬದಲಾಯಿತ್ತೇನೆಂದು ಅವರಿಗೆ ವಾಗ್ದಾನ ಕೊಟ್ಟಿದ್ದೆ. ಆದರೆ ಅವರು ಆಗಲೂ ತಮ್ಮ ವಿದ್ರೋಹಗಳನ್ನು ಕೈಬಿಡಲಿಲ್ಲ. ಈಗ ಇವರು ಮೂರು ಸಂಗತಿಗಳಲ್ಲಿ ಒಂದರ ಬೇಡಿಕೆಯನ್ನು ಇರಿಸಿದ್ದಾರೆ. ಒಂದನೆಯದು ಏನೆಂದರೆ, ನನ್ನ ಕಾಲದಲ್ಲಿ ಶಿಕ್ಷೆ ಲಭಿಸಿದ ಎಲ್ಲರ ಪರಿಹಾರ ಧನವನ್ನು ನನ್ನಿಂದ ಪಡೆಯುವುದು. ಇದನ್ನು ನಾನು ಅಂಗೀಕರಿಸುವುದಿಲ್ಲವಾದರೆ, ಇವರು ನನ್ನ ಸ್ಥಾನದಲ್ಲಿ ಬೇರೆಯವರನ್ನು ನಿಶ್ಚಯಿಸುವರು. ಇದನ್ನು ಕೂಡ ನಾನು ಅಂಗೀಕರಿಸುವುದಿಲ್ಲ ಎಂದಾದರೆ, ನನ್ನನ್ನು ಅನುಸರಿಸುವುದರಿಂದ ಬಿಟ್ಟು ನಿಲ್ಲಬೇಕು ಎಂದು ಈ ಜನರು ಇವರಿಗೆ ಸಮಾನವಾದ ಯೋಚನೆ ಇರಿಸುವ ಎಲ್ಲರಿಗೂ ಸಂದೇಶ ಕಳುಹಿಸುವುದಾಗಿ ನನಗೆ ಬೆದರಿಕೆ ಹಾಕುತ್ತಿದ್ದಾರೆ.

ಮೊದಲು ಸಂಗತಿಗೆ ಉತ್ತರವೇನೆಂದರೆ, ನನಗಿಂತ ಮುಂಚಿನ ಖಲೀಫತು ಸಹ ತೀರ್ಮಾನದಲ್ಲಿ ತಪ್ಪು ಮಾಡುತ್ತಿದ್ದರು. ಆದರೆ ಅವರನ್ನು ಎಂದೂ ಶಿಕ್ಷಿಸಲಾಗಿಲ್ಲ. ನೀವು ನನ್ನನ್ನು ಕೊಲ್ಲಲು ಬಯಸುದ್ದೀರಿ ಎಂದು ಇದರಿಂದ ಅರ್ಥವಾಗುತ್ತದೆ. ಖಿಲಾಫತ್ ಸ್ಥಾನವನ್ನು ತ್ಯಾಗ ಮಾಡಬೇಕು ಎಂಬುದಕ್ಕೆ ನನ್ನ ಕಡೆಯಿಂದ ಉತ್ತರವೇನೆಂದರೆ, ಈ ಜನರು ಚಿಮುಟಯಿಂದ ನನ್ನನ್ನು ಮಾಂಸದ ತುಣುಕುಗಳನ್ನಾಗಿ ಮಾಡಿದರೂ ಅದಕ್ಕೂ ನಾನು ತಯಾರಿದ್ದೇನೆ ಆದರೆ ಖಿಲಾಫತ್ ಸ್ಥಾನವನ್ನು ತ್ಯಜಿಸಲು ಸಾಧ್ಯವಲ್ಲ. ನನ್ನ ಮಾತನ್ನು ಅಂಗೀಕರಿಸಬಾರದೆಂದು ಹೇಳಿಕೊಂಡು ಇವರು ನಾಲ್ಕೂ ದಿಕ್ಕುಗಳಿಗೆ ಜನರನ್ನು ಕಳುಹಿಸುವರು ಎಂಬ ಮೂರನೇ ಸಂಗತಿಗೆ ನನ್ನ ಉತ್ತರವೇನೆಂದರೆ, ನಾನು ಅಲ್ಲಾಹನ ಕಡೆಯಿಂದ ಇದಕ್ಕೆ ಜವಾಬ್ದಾರನಲ್ಲ. ಈ ಜನರು ಶರೀಅತಿನ ಆಜ್ಞೆಗೆ ವಿರುದ್ಧವಾಗಿ ಏನಾದರೂ ಮಾಡಲು ಇಚ್ಛಿಸುವರಾದರೆ ಮಾಡಲಿ. ಮೊದಲು ಕೂಡ ಇವರು ನನ್ನ ಬೈಅತ್ ಮಾಡಿದಾಗ, ಖಂಡಿತವಾಗಿಯೂ ನನ್ನ ಬೈಅತ್ ಮಾಡು ಎಂದು ಹೇಳಿ ನಾನು ಅವರನ್ನು ಒತ್ತಾಯ ಮಾಡಿರಲಿಲ್ಲ. ಯಾರು ಪ್ರತಿಜ್ಞೆಯನ್ನು ಮುರಿಯಲು

ಇಚ್ಛಿಸುತ್ತಾರೋ ಅವರ ಕೃತ್ಯವನ್ನು ನಾನು ಇಷ್ಟಪಡುವುದಿಲ್ಲ ಮತ್ತು ಅಲ್ಲಾಹನ ಸಹ ಅವನ್ನು ಇಷ್ಟಪಡುವುದಿಲ್ಲ. ಹೇಗಿದ್ದರೂ ಇದು ತಪ್ಪಾದ ಕೃತ್ಯವಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಜ್ಜ್ ದಿನಗಳು ಸಮೀಪವಾಗುತ್ತಿತ್ತು ಮತ್ತು ನಾಲ್ಕೂ ಕಡೆಯಿಂದ ಜನರು ಪವಿತ್ರ ಮಕ್ಕದಲ್ಲಿ ಒಟ್ಟುಗೂಡುತ್ತಿದ್ದರು. ಈ ವಿದ್ರೋಹಿಗಳು ಅಲ್ಲೂ ಹೋಗಿಕೊಂಡು ಕಲಹವನ್ನು ಉಂಟುಮಾಡದಿರಲು ಹಝ್ರತ್ ಉಸ್ಮಾನ್(ರ) ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್‌ರನ್ನು ಹಜ್ಜಿನ ಅಮೀರರನ್ನಾಗಿ ಮಾಡಿಕೊಂಡು ಕಳುಹಿಸಿದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್ ಸಹ ಹೇಳಿದರು: ನೀವು ನನ್ನನ್ನು ಹಜ್ಜ್ ಮಾಡುವುದಕ್ಕೆ ಕಳುಹಿಸುವುದಕ್ಕಿಂತ ನನಗೆ ಈ ವಿದ್ರೋಹಿಗಳ ವಿರುದ್ಧ ಜಿಹಾದ್ ಮಾಡುವುದನ್ನು ಹೆಚ್ಚು ಇಷ್ಟಪಡುತ್ತೇನೆ. ಆದರೆ ವಿದ್ರೋಹಿಗಳು ಅಲ್ಲಿ ಕಲಹವನ್ನು ಉಂಟುಮಾಡದಿರಲಿಕ್ಕಾಗಿ ಹಜ್ಜ್‌ಗೆ ಹೋಗಿಕೊಂಡು ಹಜ್ಜಿನ ನೇತೃತ್ವವನ್ನು ವಹಿಸಲು ಹಝ್ರತ್ ಉಸ್ಮಾನ್(ರ) ಅಬ್ದುಲ್ಲಾಹ್ ಬಿನ್ ಅಬ್ಬಾಸ್‌ರೊಡನೆ ಹೇಳಿದರು. ಹಝ್ರತ್ ಉಸ್ಮಾನ್(ರ) ಮೇಲೆ ಪ್ರಸ್ತಾಪಿಸಲಾದ ಪತ್ರವನ್ನು ಅವರ ಮೂಲಕ ರವಾನೆ ಮಾಡಿದ್ದರು.

ಈ ಪತ್ರಗಳ ಬಗ್ಗೆ ಗಲಭೆಕೋರರಿಗೆ ಗೊತ್ತಾದಾಗ, ಅವರು ಇನ್ನೂ ಹೆಚ್ಚು ಕಠಿಣವಾಗಿ ವರ್ತಿಸಲು ತೊಡಗಿದರು. ಜಗಳ ಉಂಟಾಗುವಂತೆ ಏನಾದರೂ ನೆಪವನ್ನು ಮಾಡಿಕೊಂಡು ಹಝ್ರತ್ ಉಸ್ಮಾನ್‌ರನ್ನು ಶಹೀದ್ ಮಾಡಲು ಸಂದರ್ಭವನ್ನು ಹುಡುಕುತ್ತಿದ್ದರು. ಆದರೆ ಅವರ ಎಲ್ಲ ಪ್ರಯತ್ನಗಳು ವ್ಯರ್ಥವಾಗುತ್ತಿದ್ದುವು. ಹಝ್ರತ್ ಉಸ್ಮಾನ್ ಅವರಿಗೆ ಕುಚೇಷ್ಟೆಗಳನ್ನು ಮಾಡಲು ಅವಕಾಶ ಸಿಗದಂತೆ ನೋಡುತ್ತಿದ್ದರು. ಕೊನೆಗೆ ಅವರು ರೋಸಿಗೆದ್ದು, ರಾತ್ರಿ ಸಮಯದಲ್ಲಿ, ಜನರು ನಿದ್ದೆ ಹೋಗುವ ವೇಳೆ ಹಝ್ರತ್ ಉಸ್ಮಾನ್‌ರ ಮನೆಗೆ ಕಲ್ಲುಗಳನ್ನು ತೂರಲು ಯೋಜನೆ ಹೂಡಿದರು. ಹೀಗೆ ಆವೇಶಗೊಂಡು ಹಝ್ರತ್ ಉಸ್ಮಾನ್‌ರ ಮನೆಯವರು ಸಹ ಕಲ್ಲುಗಳನ್ನು ತೂರಿದರೆ ನಮ್ಮ ಮೇಲೆ ಆಕ್ರಮಣ ನಡೆಸುತ್ತಾರೆಂದು ಜನರೊಡನೆ ಹೇಳಲಿಕ್ಕಾಗಿ ಹೀಗೆ ಅವರು ಮಾಡುತ್ತಿದ್ದರು. ಆದರೆ ಹೀಗೆ ಕಲ್ಲು ತೂರುವುದರಿಂದ ಹಝ್ರತ್ ಉಸ್ಮಾನ್(ರ) ತನ್ನ ಕುಟುಂಬದ ಎಲ್ಲರನ್ನು ತಡೆದಿದ್ದರು. ಒಂದು ದಿನ ಸಂದರ್ಭ ಸಿಕ್ಕಿದಾಗ ಗೋಡೆಯ ಸಮೀಪಕ್ಕೆ ಬಂದು ಹಝ್ರತ್ ಉಸ್ಮಾನ್(ರ) ಹೇಳಿದರು: ಹೇ ಜನರೇ, ನಿಮ್ಮ ಪ್ರಕಾರ ನಾನು ತಪ್ಪುಗಾರನಾಗಿದ್ದೇನೆ. ನಾನು ಪಾಪಿಯೆಂದು ನೀವು ಭಾವಿಸುತ್ತೀರಿ. ಸರಿ, ಆದರೆ ಇತರ ಜನರು ಯಾವ ತಪ್ಪುಗಳನ್ನು ಮಾಡಿರುವರು? ಇತರರ ಮೇಲೆ ಏಕೆ ಕಲ್ಲುಗಳನ್ನು ತೂರುತ್ತಿದ್ದೀರಿ. ಇದರಿಂದ ಇತರರು ಕೂಡ ಗಾಯಗೊಳ್ಳುವ ಸಾಧ್ಯತೆಯಿದೆ. ಆದರೆ ನಾವು ಕಲ್ಲುಗಳನ್ನು ತೂರಲಿಲ್ಲವೆಂದು ವಿದ್ರೋಹಿಗಳು ಹೇಳಿದರು. ನೀವು ಕಲ್ಲುಗಳನ್ನು ತೂರದಿದ್ದರೆ, ಮತ್ತೆ ಈ ಕೆಲಸವನ್ನು ಯಾರು ಮಾಡುತ್ತಿದ್ದಾರೆ ಎಂದು ಹಝ್ರತ್ ಉಸ್ಮಾನ್ ಕೇಳಿದರು. ಅಲ್ಲಾಹನು ಕಲ್ಲುಗಳನ್ನು ಬಿಸಾಕುತ್ತಿರಬಹುದು ಎಂದು ಅವರು ಹೇಳಿದರು. **ನಊಧುಬಿಲ್ಲಾಹ್**. ಹಝ್ರತ್ ಉಸ್ಮಾನ್(ರ) ಹೇಳಿದರು: ನೀವು ಸುಳ್ಳು ಹೇಳುತ್ತಿದ್ದೀರಿ. ಅಲ್ಲಾಹನು ಕಲ್ಲುಗಳನ್ನು ಎಸೆಯುತ್ತಿದ್ದಾನೆ ಎಂದಾದರೆ, ಅವನ ಕಲ್ಲೆಸೆತ ಗುರಿಮುಟ್ಟದೇ ಇರುತ್ತಿರಲಿಲ್ಲ. ಆದರೆ ನೀವು ಹಾಕುತ್ತಿರುವ ಕಲ್ಲುಗಳು ಅಲ್ಲಿ ಇಲ್ಲಿ ಬೀಳುತ್ತಿವೆ. ಹೀಗೆ ಹೇಳಿ ಹಝ್ರತ್ ಉಸ್ಮಾನ್(ರ) ಅವರಿಂದ ದೂರಸರಿದರು.

ಸಹಾಬರನ್ನು ಹಝ್ರತ್ ಉಸ್ಮಾನ್‌ರ ಬಳಿ ಒಟ್ಟುಗೂಡಲು ಆಗದಂತೆ ಮಾಡಲಾಗಿತ್ತು. ಆದರೂ ಸಹಾಬರು ತಮ್ಮ ಕರ್ತವ್ಯಗಳಿಂದ ಅಶ್ರದ್ಧೆರಾಗಿರಲಿಲ್ಲ. ಸಮಯೋಚಿತವಾಗಿ ಅವರು ತಮ್ಮ ಕೆಲಸಗಳನ್ನು ಎರಡಾಗಿ ವಿಭಾಗಿಸಿದ್ದರು. ಹಿರಿಯ ಸಹಾಬರು ಅವರಿಗೆ ಸಮಾನವಾದ ಜನರನ್ನು ಮನವರಿಕೆ ಮಾಡಿಸುವುದಲ್ಲಿ ನಿರತರಾಗಿದ್ದರು. ಆದರೆ ಅಷ್ಟು ಪ್ರಭಾವಶಾಲಿಯಲ್ಲದ ಜನರು ಅಥವಾ ಯುವಕರು ಹಝ್ರತ್ ಉಸ್ಮಾನ್‌ರ ಸಂರಕ್ಷಣೆಯ ಪ್ರಯತ್ನದಲ್ಲಿ ಮಗ್ನರಾಗಿದ್ದರು. ಮೊದಲು ಪ್ರಸ್ತಾಪಿಸಿದ ಸಂಘದಲ್ಲಿ ಹಝ್ರತ್ ಅಲಿ(ರ) ಮತ್ತು ಹಝ್ರತ್ ಸಅದ್ ಬಿನ್ ವಖಾಸ್(ರ) ಫಿತ್ನವನ್ನು ಕಡಿಮೆಗೊಳಿಸಲು ಅತ್ಯಧಿಕವಾಗಿ ಪ್ರಯತ್ನಿಸುತ್ತಿದ್ದರು. ವಿಶೇಷವಾಗಿ ಹಝ್ರತ್ ಅಲಿ(ರ) ಈ ದಿನಗಳಲ್ಲಿ ತಮ್ಮ ಇತರ ಎಲ್ಲ ಕೆಲಸಗಳನ್ನು ಬಿಟ್ಟುಕೊಂಡು ಈ ಕೆಲಸದಲ್ಲಿ ಮಗ್ನರಾಗಿದ್ದರು. ಈ ಘಟನೆಗಳನ್ನೆಲ್ಲ ಕಂಡಿದ್ದ ಒಬ್ಬ ವ್ಯಕ್ತಿಯಾದ ಅಬ್ದುರ್ರಹ್ಮಾನ್ ಎಂಬವರು ಹೇಳುತ್ತಾರೆ: ಈ ಫಿತ್ನಗಳ ದಿನಗಳಲ್ಲಿ ನಾನು ನೋಡಿದ್ದೇನೆ. ಹಝ್ರತ್ ಅಲಿ(ರ) ತನ್ನ ಇತರ ಎಲ್ಲ ಕೆಲಸಗಳನ್ನು ಬಿಟ್ಟಿದ್ದರು. ಹಝ್ರತ್ ಉಸ್ಮಾನ್‌ರ ಶತ್ರುಗಳ ಕೋಪವನ್ನು ಕಡಿಮೆಗೊಳಿಸಲು ಮತ್ತು ಹಝ್ರತ್ ಉಸ್ಮಾನ್‌ರ ಕಷ್ಟತೆಗಳನ್ನು ಕಡಿಮೆಗೊಳಿಸುವ ಚಿಂತೆಯಲ್ಲೇ ದಿನರಾತ್ರಿ ಅವರು ಕಳೆಯುತ್ತಿದ್ದರು. ಒಂದು ಸಲ ಹಝ್ರತ್ ಉಸ್ಮಾನ್‌ರಿಗೆ ನೀರು ತಲುಪಿಸಲು ತಡವಾಯಿತು. ಈ ಕೆಲಸವನ್ನು ಹಝ್ರತ್ ತಲ್‌ಹರಿಗೆ ಒಪ್ಪಿಸಲಾಗಿತ್ತು. ಆಗ ಹಝ್ರತ್ ಅಲ್ಲಿ ಇದರಿಂದ ತುಂಬ ಕೋಪಗೊಂಡರು. ಹಝ್ರತ್ ಉಸ್ಮಾನ್‌ರ ಮನೆಗೆ ನೀರು ತಲುಪುವ ತನಕ ಹಝ್ರತ್ ಅಲಿ(ರ) ವಿಶ್ರಾಂತಿ ಪಡೆಯಲಿಲ್ಲ. ಮತ್ತೊಂದು ಸಂಘ ಒಬ್ಬೊಬ್ಬರಾಗಿ ಇಬ್ಬಿಬ್ಬರಾಗಿ ಸಂದರ್ಭ ಸಿಕ್ಕುವಾಗಲೆಲ್ಲ ಹಝ್ರತ್ ಉಸ್ಮಾನ್‌ರ ಅಥವಾ ಅವರ ನೆರೆಕರೆಯ ಮನೆಗಳಲ್ಲಿ ಒಟ್ಟುಸೇರುತ್ತಿದ್ದರು. ನಾವು ನಮ್ಮ ಜೀವವನ್ನು ತ್ಯಾಗಮಾಡಲು ಸಿದ್ಧರಿದ್ದೇವೆ ಆದರೆ, ಹಝ್ರತ್ ಉಸ್ಮಾನ್‌ರ ಜೀವಕ್ಕೆ ಏನೂ ಆಗದಂತೆ ನೋಡುತ್ತೇವೆ ಎಂದು ಅವರು ದೃಢಪ್ರತಿಜ್ಞೆ ಮಾಡಿದ್ದರು. ಈ ಸಂಘದಲ್ಲಿ ಹಝ್ರತ್ ಅಲಿ, ಹಝ್ರತ್ ತಲ್‌ಹ ಮತ್ತು ಹಝ್ರತ್ ಝುಬೇರರ ಮಕ್ಕಳಲ್ಲದೆ ಸ್ವತಃ ಸಹಾಬರಲ್ಲಿ ಕೆಲವರು ಇದ್ದರು. ಈ ಜನರು ದಿನರಾತ್ರಿ ಹಝ್ರತ್ ಉಸ್ಮಾನ್‌ರ ಮನೆಯ ಸಂರಕ್ಷಣೆ ಮಾಡುತ್ತಿದ್ದರು. ಹಝ್ರತ್ ಉಸ್ಮಾನ್‌ರ ಬಳಿಗೆ ಯಾವುದೇ ತಲುಪದಂತೆ ನೋಡುತ್ತಿದ್ದರು. ಇಷ್ಟು ಅಲ್ಪ ಜನರಿಗೆ ಹೆಚ್ಚಿನ ಸಂಖ್ಯೆಯಲ್ಲಿದ್ದ ಶತ್ರುಗಳನ್ನು ಎದುರಿಸಲು ಸಾಧ್ಯವಿರಲಿಲ್ಲ. ದ್ರೋಹಿಗಳು ಸಹ ಏನಾದರೂ ನೆಪವನ್ನು ಮಾಡಿಕೊಂಡು ಹಝ್ರತ್ ಉಸ್ಮಾನ್‌ರನ್ನು(ರ) ವಧಿಸಲು ಬಯಸುತ್ತಿದ್ದರು. ಆದ್ದರಿಂದ ಅವರು ಸಹ ಶಕ್ತಿ ಪ್ರಯೋಗಿಸುತ್ತಿರಲಿಲ್ಲ. ಆ ಸ್ಥಿತಿಯಲ್ಲಿ ಹಝ್ರತ್ ಇಸ್ಲಾಮಿನ ಹಿತಕ್ಕಾಗಿ ಮಾಡಿದ ಕೆಲಸಗಳ ಮೇಲೆ ಬೆಳಕುಬೀರುವಾಗ ಅಚ್ಚರಿಲಯಾಗುತ್ತದೆ. 3 ಸಾವಿರಕ್ಕೂ ಮೇಲ್ಪಟ್ಟ ವಿದ್ರೋಹಿಗಳ ಸೈನ್ಯ ಹಝ್ರತ್ ಉಸ್ಮಾನ್‌ರ ಮನೆಬಾಗಿಲನ ಮುಂದೆ ಇದ್ದರು. ಅಲ್ಲಿಂದ ರಕ್ಷಣೆ ಹೊಂದಲು ಯಾವುದೇ ಮಾರ್ಗವಿರಲಿಲ್ಲ. ಆದರೆ ಅವರನ್ನು ರಕ್ಷಿಸಲು ಪ್ರಯತ್ನಿಸುವವರನ್ನು ಅವರು ತಡೆಯುತ್ತಿದ್ದರು. ನಿಮ್ಮ ಜೀವಗಳನ್ನು ಅಪಾಯದಲ್ಲಿ ಸಿಲುಕಿಸಬೇಡಿರಿ ಎಂದು ಅವರು ಹೇಳುತ್ತಿದ್ದರು. ಈ ಜನರಿಗೆ ನನ್ನೊಡನೆ ಮಾತ್ರ ಶತ್ರುತ್ವವಿದೆ. ನಿಮ್ಮೊಂದಿಗೆ ಇಲ್ಲವೆಂದು ಹೇಳುತ್ತಿದ್ದರು. ಇಸ್ಲಾಂ ಈ ವಿದ್ರೋಹಿಗಳ ಕೈಯಲ್ಲಿ ದೊಡ್ಡ ಅಪಾಯದಲ್ಲಿರುವುದನ್ನು ಅವರು ಕಾಣುತ್ತಿದ್ದರು. ಬಾಹ್ಯವಾದ ಐಕ್ಯ ಮಾತ್ರವಲ್ಲ, ಆಧ್ಯಾತ್ಮಿಕ ವ್ಯವಸ್ಥೆ ಸಹ ಛಿದ್ರಗೊಳ್ಳುವಂತಿತ್ತು. ಇಂತಹ ಸಮಯದಲ್ಲಿ ಇಸ್ಲಾಮಿನ ಸಂರಕ್ಷಣೆ ಮತ್ತು ಅದರ ಪುನಃಸ್ಥಾಪನೆಗೆ ಪ್ರತಿಯೊಬ್ಬ ಸಹಾಬರ ಆವಶ್ಯಕತೆ ಇದೆ ಎಂದು ಅವರಿಗೆ ಗೊತ್ತಿತ್ತು. ಆದ್ದರಿಂದ ಹಝ್ರತ್ ಉಸ್ಮಾನ್‌ರ ಜೀವ ರಕ್ಷಣೆಯ ವ್ಯರ್ಥವಾದ ಪ್ರಯತ್ನದಲ್ಲಿ ಸಹಾಬರ ಜೀವ ಹೋಗುವುದನ್ನು ಹಝ್ರತ್ ಉಸ್ಮಾನ್(ರ) ಇಷ್ಟಪಟ್ಟಿರಲಿಲ್ಲ. ವಿದ್ರೋಹಿಗಳನ್ನು ಎದುರಿಸದಿರಲು ಉಪದೇಶಿಸುತ್ತಿದ್ದರು ಮತ್ತು ಮುಂದಿನ ಪಿತೂರಿಗಳನ್ನು ದೂರಮಾಡಲು ಹಝ್ರತ್ ಪೈಗಂಬರರ(ಸ) ಸಹವಾಸವನ್ನು ಪಡೆದ ಸಹಾಬರು ಸುರಕ್ಷಿತರಾಗಿರಬೇಕು ಎಂದು ಹೇಳುತ್ತಿದ್ದರು. ಆದರೆ ಅವರ ಮನೆಯ ತನಕ ತಲುಪಲು ಸಂದರ್ಭ ಸಿಕ್ಕಿದವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ಕೊರತೆ ಮಾಡಿರಲಿಲ್ಲ. ಅವರು ಮುಂದೆ ಬರುವ ಅಪಾಯಕ್ಕಿಂತ ಈಗಿದ್ದ ಅಪಾಯದ ಬಗ್ಗೆ ಚಿಂತಿಸುತ್ತಿದ್ದರು. ಅನಂತರ ಹಝ್ರತ್ ಉಸ್ಮಾನ್‌ರ ಮೇಲೆ ಆಕ್ರಮಣ ನಡೆಸಲಿರುವ ಸಮಯವು ಬಂತು.

ಏಕೆಂದರೆ ಹಜ್ಜ್‌ಗಾಗಿ ಒಟ್ಟುಗೂಡುವ ಮುಸ್ಲಿಮರಿಗಾಗಿ ಹಝ್ರತ್ ಉಸ್ಮಾನ್(ರ) ಕಳುಹಿಸಿದ್ದ ಹೃದಯಗಳನ್ನು ಕಂಪಿಸುವಂತಹ ಸಂದೇಶವನ್ನು ಹಿಜಾಜಿನ ಜನ ಸಮೂಹದ ಮುಂದೆ ಓದಿ ಹೇಳಲಾಯಿತು. ಮಕ್ಕಾ ಕಣಿವೆಯ ಒಂದು ಬದಿಯಿಂದ ಮತ್ತೊಂದು ಬದಿಯ ತನಕ ಇದರ ಶಬ್ದ ಪ್ರತಿಧ್ವನಿಸುತ್ತಿತ್ತು. ಹಜ್ಜಿನ ನಂತರ ಜಿಹಾದಿನ ಪ್ರತಿಫಲದಿಂದ ದೂರವಿರುವುದಿಲ್ಲ ಎಂದೂ ಈಜಿಪ್ಟಿನ ಗಲಭೆಕೋರರ ಸಂಗಡಿಗರನ್ನು ನಿರ್ಮೂಲನ ಮಾಡುವೆವು ಎಂದೂ ಹಜ್ಜ್‌ಗೆ ಒಟ್ಟುಗೂಡಿದ ಮುಸ್ಲಿಮರು ತೀರ್ಮಾನಿಸಿದರು. ಗಲಭೆಕೋರರ ಗುಪ್ತಚರರು ವಿದ್ರೋಹಿಗಳಿಗೆ ಇದರ ಬಗ್ಗೆ ತಿಳಿಸಿದರು. ಹೀಗೆ ಅವರ ಕ್ಯಾಂಪ್‌ನಲ್ಲಿ ತೀವ್ರತರದ ಗಾಬರಿಯ ಸ್ಥಿತಿಯುಂಟಾಯಿತು. ಎಲ್ಲಿಯ ವರೆಗೆ ಎಂದರೆ, ಈಗ ಹಝ್ರತ್ ಉಸ್ಮಾನ್‌ರನ್ನು ಕೊಲ್ಲದೇ ಬೇರೆ ಮಾರ್ಗವಿಲ್ಲವೆಂದು ಅವರು ಪರಸ್ಪರ ಗುಟ್ಟಾಗಿ ಹೇಳುತ್ತಿದ್ದರು. ಅವರನ್ನು ನಾವು ವಧಿಸದಿದ್ದರೆ ನಾವು ಮುಸ್ಲಿಮರ ಕೈಗಳಿಂದ ಕೊಲ್ಲಲ್ಪಡುವುದರಲ್ಲಿ ಸಂಶಯವಿಲ್ಲವೆಂದು ಹೇಳತೊಡಗಿದರು. ಸಿರಿಯ, ಕೂಫ ಮತ್ತು ಬಸ್ರದಲ್ಲೂ ಹಝ್ರತ್ ಉಸ್ಮಾನ್‌ರ ಪತ್ರಗಳು ತಲುಪಿದುವು. ಅಲ್ಲಿಯ ಜನರು ಮೊದಲೇ ಹಝ್ರತ್ ಉಸ್ಮಾನ್‌ರ ಆದೇಶವನ್ನು ಕಾಯುತ್ತಿದ್ದರು. ಈ ಪತ್ರಗಳಿಂದ ಅವರ ಆವೇಶ ಇನ್ನೂ ಹೆಚ್ಚಾಯಿತು. ಸಹಾಬರು ತಮ್ಮ ಕರ್ತವ್ಯವನ್ನು ಅರಿತುಕೊಂಡು ಮಸೀದಿಗಳಲ್ಲಿ ಮತ್ತು ಸಭೆಗಳಲ್ಲಿ ಎಲ್ಲ ಮುಸ್ಲಿಮರೊಡನೆ ಅವರವರ ಕರ್ತವ್ಯಗಳ ಬಗ್ಗೆ ಹೇಳಿದರು. ವಿದ್ರೋಹಿಗಳ ವಿರುದ್ಧ ಜಿಹಾದಿನ ಫತ್ವಾ ನೀಡಿದರು. ಇಂದು ಜಿಹಾದ್ ಮಾಡದವನು ಏನೂ ಮಾಡದವನಂತೆ ಎಂದು ಹೇಳಿದರು. ಕೂಫದಲ್ಲಿ ಉಖ್ಬ ಬಿನ್ ಅಮ್ರ್, ಅಬ್ದುಲ್ಲಾಹ್ ಬಿನ್ ಅಬೀ ಔಫ ಮತ್ತು ಹಂಝ್ಲ ಬಿನ್ ರಬೀಉಲ್ ತಮೀಮಿ ಮತ್ತು ಇತರ ಸಹಾಬರು ಮದೀನದ ನಿವಾಸಿಗಳ ನೆರವಿಗೆ ಹೋಗಬೇಕೆಂದು ಜನರೊಡನೆ ಹೇಳಿದರು. ಬಸ್ರದಲ್ಲಿ ಇಮ್ರಾನ್ ಬಿನ್ ಹುಸೈನ್, ಅನಸ್ ಬಿನ್ ಮಾಲಿಕ್, ಹಿಶಾಮ್ ಬಿನ್ ಆಮಿರ್ ಜನರನ್ನು ಪ್ರೇರೇಪಿಸಿದರು. ಸಿರಿಯದಲ್ಲಿ ಉಬಾದ ಬಿನ್ ಸಾಬಿತ್, ಅಬೂ ಅಮಾಮ ಮತ್ತು ಇತರ ಸಹಾಬರು ಹಝ್ರತ್ ಉಸ್ಮಾನ್‌ರ ಸಹಾಯಕ್ಕಾಗಿ ತಯಾರಾಗಲು ಜನರೊಡನೆ ಹೇಳಿದರು. ಈಜಿಪ್ಟಿನಲ್ಲಿ ಖಾರ್‌ಜ ಮತ್ತು ಇತರ ಜನರು ಸೈನ್ಯವನ್ನು ತಯಾರಿಸಿ ಮದೀನದ ಕಡೆಗೆ ಧಾವಿಸಿದರು. ಒಟ್ಟಿನಲ್ಲಿ ಈ ಸುದ್ದಿಗಳಿಂದ ವಿದ್ರೋಹಿಗಳು ಭಯಗೊಂಡರು. ಈ ವಿದ್ರೋಹಿಗಳು ಹಝ್ರತ್ ಉಸ್ಮಾನ್‌ರನ್ನು ವಧಿಸಲು ಮನೆಗೆ ಹಲ್ಲೆ ನಡೆಸಿ ಶಕ್ತವಾಗಿ ಒಳಗೆ ನುಗ್ಗಲು ಬಯಸಿದರು. ಸಹಾಬರು ಅವರನ್ನು ಎದುರಿಸಿದರು. ಅನ್ಯೋನ್ಯ ಶಕ್ತವಾದ ಹೋರಾಟ ನಡೆಯಿತು. ಸಹಾಬರು ಕಡಿಮೆ ಸಂಖ್ಯೆಯಲ್ಲಿದ್ದರು. ಆದರೆ ಅವರ ಸತ್ಯವಿಶ್ವಾಸದ ಶಕ್ತಿ ಆ ಕೊರತೆಯನ್ನು ನೀಗಿಸುತ್ತಿತ್ತು. ಹಝ್ರತ್ ಉಸ್ಮಾನ್‌ರ ಮನೆಯ ಮುಂದೆ ಜಾಗ ಕಡಿಮೆಯಿದ್ದ ಕಾರಣದಿಂದ ವಿದ್ರೋಹಿಗಳು ಹೆಚ್ಚಿದ್ದರೂ ಅದರಿಂದ ಹೆಚ್ಚಿನ ಪ್ರಯೋಜನವಿರಲಿಲ್ಲ. ಹಝ್ರತ್ ಉಸ್ಮಾನ್‌ರಿಗೆ ಈ ಜಗಳದ ಅರಿವಾದಾಗ ಅವರು ಸಹಾಬರನ್ನು ಜಗಳ ಮಾಡುವುದರಿಂದ ತಡೆದರು. ಆದರೆ ಈ ಘಟ್ಟದಲ್ಲಿ ಹಝ್ರತ್ ಉಸ್ಮಾನ್‌ರನ್ನು ಒಬ್ಬಂಟಿಯಾಗಿ ಬಿಡುವುದನ್ನು ಪ್ರಾಮಾಣಿಕತೆಗೆ ವಿರುದ್ಧ ಮತ್ತು ಅನುಸರಣೆಯ ಆದೇಶಕ್ಕೆ ವಿರುದ್ಧವೆಂದು ಸಹಾಬರು ಭಾವಿಸುತ್ತಿದ್ದರು. ಕೊನೆಗೆ ಹಝ್ರತ್ ಉಸ್ಮಾನ್(ರ) ಕೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡು ಹೊರಗೆ ಬಂದರು ಮತ್ತು ಸಹಾಬರನ್ನು ತನ್ನ ಮನೆಯ ಒಳಗೆ ಕರೆದರು ಹಾಗೂ ಬಾಗಿಲನ್ನು ಮುಚ್ಚಿದರು. ಹಝ್ರತ್ ಉಸ್ಮಾನ್(ರ) ಸಹಾಬರೊಡನೆ ಮತ್ತು ಅವರ ಸಹಾಯಕರನ್ನು ಹೀಗೆ ಉಪದೇಶಿಸಿದರು: ಅಲ್ಲಾಹನು ನಿಮಗೆ ಈ ಲೋಕವನ್ನು ಅದರ ಕಡೆಗೆ ಬಾಗಲಿಕ್ಕೆ ನೀಡಲಿಲ್ಲ. ಬದಲಿಗೆ ಇದರ ಮೂಲಕ ಪರಲೋಕಕ್ಕೆ ಬೇಕಾಗಿರುವ ಸಾಮಾನುಗಳನ್ನು ಒಟ್ಟುಗೂಡಿಸಲು ನೀಡಿದ್ದಾನೆ. ಈ ಲೋಕ ನಾಶವಾಗುವುದು. ಪರಲೋಕವೇ ಬಾಕಿಯುಳಿಯುವುದು. ಆದ್ದರಿಂದ ತಾತ್ಕಾಲಿಕ ವಸ್ತುಗಳು ನಿಮ್ಮನ್ನು ಆಲಸಿಗರನ್ನಾಗಿ ಮಾಡದಿರಲಿ. ಬಾಕಿಯುಳಿಯುವ ವಸ್ತುವಿಗೆ

ತಾತ್ಕಾಲಿಕ ವಸ್ತುಗಳ ಮೇಲೆ ಆದ್ಯತೆ ನೀಡಿರಿ. ಅಲ್ಲಾಹನೊಂದಿಗೆ ಭೇಟಿಯಾಗಲಿದೆ ಎಂದು ನೆನಪಿರಲಿ. ಜಮಾಅತಿನ ಐಕ್ಯವನ್ನು ಮುರಿಯದಿರಿ. ನೀವು ನಾಶದ ಹೊಂಡಕ್ಕೆ ಬೀಳುವುದರಿಂದ ಅಲ್ಲಾಹನು ತನ್ನ ಅನುಗ್ರಹದಿಂದ ರಕ್ಷಿಸಿದನು ಮತ್ತು ನಿಮ್ಮನ್ನು ಸಹೋದರರಂತೆ ಮಾಡಿದನು. ಈ ಶ್ರೇಷ್ಠ ಅನುಗ್ರಹವನ್ನು ಮರೆಯದಿರಿ. ಅನಂತರ ಅಲ್ಲಾಹನೇ ನಿಮ್ಮ ಸಂರಕ್ಷಕನಾಗಲಿ ಎಂದು ಹೇಳಿಕೊಂಡು ಎಲ್ಲರನ್ನು ಬೀಳ್ಕೊಟ್ಟರು. ಎಲ್ಲರೊಡನೆ ಮನೆಯಿಂದ ಹೊರಗೆ ಹೋಗಲು ಹೇಳಿದರು. ಹಝ್ರತ್ ಉಸ್ಮಾನ್ ನನ್ನ ಬಳಿಗೆ ತಲುಪದಂತೆ ತಡೆಯಲ್ಪಟ್ಟ ಸಹಾಬರನ್ನು ಕರೆಯಲು ಅವರು ಹೇಳಿದರು. ವಿಶೇಷವಾಗಿ ಹಝ್ರತ್ ಅಲಿ, ಹಝ್ರತ್ ತಲ್‌ಹ ಮತ್ತು ಹಝ್ರತ್ ಝುಬೇರ್‌ರನ್ನು ಕರೆದರು. ಸಹಾಬರು ಹೊರಗೆ ಹೋದಾಗ ವಿದ್ರೋಹಿಗಳು ಅವರ ಮೇಲೆ ಹಲ್ಲೆ ನಡೆಸಿರಲಿಲ್ಲ. ಆಗಿನ ತಾತ್ಕಾಲಿಕ ಸ್ಥಿತಿಯ ಪ್ರಭಾವ ಅವರ ಮೇಲೆ ಸಹ ಉಂಟಾಗಿತ್ತು. ಹಝ್ರತ್ ಪೈಗಂಬರ್(ಸ) ಬೆಳಗಿಸಿದ ಒಂದು ಬೆಳಕು ಈಗ ತನ್ನ ಆಯಸ್ಸನ್ನು ಪೂರ್ತಿ ಮಾಡಿ ಈ ಲೋಕದ ಜನರ ಕಣ್ಣುಗಳಿಂದ ಕಣ್ಮರೆಯಾಗುತ್ತಿತ್ತು.

ಹೇಗಿದ್ದರೂ ವಿದ್ರೋಹಿಗಳು ಅವರ ಮೇಲೆ ಆಕ್ರಮಣ ನಡೆಸಲಿಲ್ಲ. ಎಲ್ಲ ಸಹಾಬರು ಮನೆಯ ಹೊರಗೆ ಒಟ್ಟುಸೇರಿದರು. ಎಲ್ಲರೂ ಒಟ್ಟುಗೂಡಿದಾಗ ಹಝ್ರತ್ ಉಸ್ಮಾನ್(ರ) ಮನೆಯ ಗೋಡೆಯನ್ನು ಹತ್ತಿದರು ಮತ್ತು ಎಲ್ಲರೊಡನೆ ಸಮೀಪಕ್ಕೆ ಬರಲು ಹೇಳಿದರು. ಎಲ್ಲರೂ ಸಮೀಪವಾದಾಗ ಹೇಳಿದರು: ಎಲೈ ಜನರೇ ಕುಳಿತುಕೊಳ್ಳಿರಿ. ಆಗ ಸಹಾಬರೂ ಮತ್ತು ಸಭೆಯ ಗಾಂಭೀರ್ಯದಿಂದ ಪ್ರಭಾವಿತರಾಗಿ ವಿದ್ರೋಹಿಗಳೂ ಕುಳಿತುಕೊಂಡರು. ಎಲ್ಲರೂ ಕುಳಿತುಕೊಂಡಾಗ ಹಝ್ರತ್ ಉಸ್ಮಾನ್(ರ) ಹೇಳಿದರು: ಮದೀನ ನಿವಾಸಿಗಳೇ, ನಾನು ನಿಮ್ಮನ್ನು ಅಲ್ಲಾಹನಗೆ ಒಪ್ಪಿಸುತ್ತೇನೆ. ನನ್ನ ನಂತರ ನಿಮಗೆ ಖಿಲಾಫತ್‌ಗಾಗಿ ಬೇರೆ ಏನಾದರೂ ವ್ಯವಸ್ಥೆ ಮಾಡಿಕೊಡಲು ನಾನು ಅಲ್ಲಾಹನೊಡನೆ ದುಆ ಮಾಡುತ್ತೇನೆ. ಇಂದಿನ ನಂತರ ಅಲ್ಲಾಹನು ನನ್ನ ಕುರಿತು ಏನಾದರೂ ತೀರ್ಮಾನ ಮಾಡುವ ತನಕ ನಾನು ಮನೆಯಿಂದ ಹೊರಗೆ ಹೋಗುವುದಿಲ್ಲ. ಭೌತಿಕ ಮತ್ತು ಧಾರ್ಮಿಕ ಕಾರ್ಯದಲ್ಲಿ ನಿಮ್ಮ ಮೇಲೆ ಆಡಳಿತ ನಡೆಸಲು ಯಾರಿಗೂ ನಾನು ಅವಕಾಶ ನೀಡುವುದಿಲ್ಲ. ಈ ಕೆಲಸವನ್ನು ಅಲ್ಲಾಹನಿಗೆ ಒಪ್ಪಿಸುತ್ತೇನೆ. ಅವನು ಇಷ್ಟವಿರುವವರನ್ನು ತನ್ನ ಕೆಲಸಕ್ಕಾಗಿ ಆಯ್ಕೆ ಮಾಡುವನು. ಅನಂತರ ಹಝ್ರತ್ ಉಸ್ಮಾನ್(ರ) ಅಲ್ಲಾಹನ ಹೆಸರಲ್ಲಿ ಸಹಾಬರೊಡನೆ ಮತ್ತು ಮದೀನ ನಿವಾಸಿಯರೊಡನೆ ಹೀಗೆ ಹೇಳಿದರು: ನೀವು ನನ್ನ ಸಂರಕ್ಷಣೆಯಲ್ಲಿ ತಮ್ಮ ಜೀವಗಳನ್ನು ದೊಡ್ಡ ಅಪಾಯದಲ್ಲಿ ಸಿಲುಕಿಸದಿರಿ ಮತ್ತು ತಮ್ಮ ತಮ್ಮ ಮನೆಗಳಿಗೆ ಹೋಗಿರಿ. ಹಝ್ರತ್ ಉಸ್ಮಾನ್‌ರ ಈ ಆದೇಶದಿಂದ ಸಹಾಬರ ನಡುವೆ ದೊಡ್ಡದಾದ ಭಿನ್ನಾಭಿಪ್ರಾಯ ಉಂಟಾಯಿತು. ಹಿಂದೆಂದೂ ಕಾಣದಂತಹ ಭಿನ್ನಾಭಿಪ್ರಾಯ. ಆದೇಶವನ್ನು ಅನುಸರಿಸುವುದನ್ನಲ್ಲದೇ ಅಂದಿನ ತನಕ ಸಹಾಬರಿಗೆ ಬೇರೇನೂ ಗೊತ್ತಿರಲಿಲ್ಲ. ಆದರೆ ಅಲ್ಲಿಂದ ಹೋಗಿರಿ ಎಂದು ಹಝ್ರತ್ ಉಸ್ಮಾನ್(ರ) ಹೇಳಿದ್ದನ್ನು ಅವರು ಅಂದು ಅನುಸರಣೆ ಎಂದಲ್ಲ, ಬದಲಿಗೆ ಮೋಸ ಮತ್ತು ಅವಿಧೇಯತೆ ಎಂದು ಭಾವಿಸುತ್ತಿದ್ದರು. ಕೆಲವು ಸಹಾಬರು ಆದೇಶದ ಅನುಸರಣೆಗೆ ಬೆಲೆಕೊಟ್ಟು ವಿದ್ರೋಹಿಗಳೊಡನೆ ಹೋರಾಡುವುದನ್ನು ಬಿಟ್ಟುಬಿಟ್ಟರು. ನಮ್ಮ ಕೆಲಸ ಅನುಸರಣೆಯಾಗಿದೆ. ಈ ಆದೇಶದ ಅನುಸರಣೆಯಿಂದ ಉಂಟಾಗುವ ಪರಿಣಾಮವೇನೆಂದು ನೋಡುವ ಆವಶ್ಯಕತೆಯಿಲ್ಲವೆಂದು ಕೆಲವರು ಭಾವಿಸಿದರು. ಆದರೆ ಕೆಲವು ಸಹಾಬರು ಈ ಆದೇಶವನ್ನು ಅನುಸರಿಸವುದನ್ನು ನಿರಾಕರಿಸಿದರು. ಖಲೀಫರನ್ನು ಅನುಸರಿಸುವುದು ಕಡ್ಡಾಯ. ಆದರೆ ನನ್ನನ್ನು ಬಿಟ್ಟುಹೋಗಿರಿ ಎಂದು ಖಲೀಫ ಆದೇಶಿಸಿದರೆ ಅದರ ಅರ್ಥ ಖಿಲಾಫತ್‌ನೊಂದಿಗ ಸಂಬಂಧವನ್ನು ಬೇಕಾದರೆ ತ್ಯಜಿಸಿರಿ ಎಂದಾಗಿದೆ. ಇದನ್ನು ಅನುಸರಿಸುವುದು ಸರಿಯಲ್ಲವೆಂದು ಕೆಲವು ಸಹಾಬರು ಭಾವಿಸಿದರು. ಮಾತ್ರವಲ್ಲ ಸಹಾಬರ ಜೀವವನ್ನು ಸಂರಕ್ಷಿಸಲು ಹಝ್ರತ್ ಉಸ್ಮಾನ್ ಹೀಗೆ ಹೇಳುತ್ತಿದ್ದಾರೆ ಎಂದು ಅವರಿಗೆ ಗೊತ್ತಿತ್ತು. ಹೀಗಿರುವಾಗ ಇಷ್ಟು ಪ್ರಿಯ ವ್ಯಕ್ತಿಯನ್ನು ಬಿಟ್ಟುಕೊಂಡು, ಸ್ವಂತ ಜೀವವನ್ನು ಸಂರಕ್ಷಿಸಲು ಮನೆಗೆ ಹೋಗಲು ಕೆಲವು ಸಹಾಬರು ತಯಾರಾಗಿರಲಿಲ್ಲ. ಈ ಅಭಿಪ್ರಾಯವನ್ನು ಹೊಂದಿದ್ದ ಜನರಲ್ಲಿ ಎಲ್ಲ ಶ್ರೇಷ್ಠ ಸಹಾಬರು ಇದ್ದರು. ಹೀಗೆ ಈ ಆದೇಶದ ನಂತರವೂ ಹಝ್ರತ್ ಅಲಿ, ಹಝ್ರತ್ ತಲ್‌ಹ ಹಝ್ರತ್ ಝುಬೇರ್‌ರ ಮಕ್ಕಳು ತಮ್ಮ ತಮ್ಮ ತಂದೆಯಂದಿರ ಆಜ್ಞೆ ಪ್ರಕಾರ ಹಝ್ರತ್ ಉಸ್ಮಾನ್‌ರ ಮನೆ ಬಾಗಿಲಲ್ಲೇ ತಂಗಿದರು ಮತ್ತು ತಮ್ಮ ಖಡ್ಗಗಳನ್ನು ಕವಚಗಳ ಒಳಗೆ ಹಾಕಲಿಲ್ಲ.

ವಿದ್ರೋಹಿಗಳು ಬಹಳವಾಗಿ ಗಾಬರಿಗೊಂಡರು. ಹಜ್ಜಿನಿಂದ ಮರಳಿ ಬರುವ ಜನರಲ್ಲಿ ಕೆಲವರು ಮದೀನವನ್ನು ಪ್ರವೇಶಿಸಿದರು. ಈಗ ನಮ್ಮ ಭಾಗ್ಯದ ತೀರ್ಮಾನ ಸಮೀಪವಾಗಿದೆ ಎಂದು ವಿದ್ರೋಹಿಗಳಿಗೆ ಗೊತ್ತಾಯಿತು. ಹಜ್ಜ್ ಮಾಡಿದ ನಂತರ ಜಿಹಾದ್‌ಗಾಗಿ ಮದೀನಕ್ಕೆ ಪ್ರವೇಶಿಸಿದ ಮೊದಲ ವ್ಯಕ್ತಿ ಮುಗ್ಯೆರ ಬಿನ್ ಅಲ್‌ಅಖ್‌ನಸ್ ಆಗಿದ್ದರು. ಅದೇ ವೇಳೆಗೆ ಮುಸ್ಲಿಮರ ಸಹಾಯಕ್ಕಾಗಿ ಬರುತ್ತಿದ್ದ ಬಸ್ರದ ಸೈನ್ಯವು ಮದೀನದಿಂದ ಕೇವಲ ಒಂದು ದಿನದ ಯಾತ್ರೆಯ ದೂರದಲ್ಲಿದ್ದ ಸಿರಾರ್ ಎಂಬ ಪ್ರದೇಶಕ್ಕೆ ತಲುಪಿದೆ ಎಂಬ ಸುದ್ದಿ ವಿದ್ರೋಹಿಗಳಿಗೆ ಲಭಿಸಿತು. ಆದ್ದರಿಂದ ತಮ್ಮ ಉದ್ದೇಶವನ್ನು ಬೇಗನೇ ಈಡೇರಿಸಲು ಈ ಸುದ್ದಿಯ ಕಾರಣದಿಂದ ವಿದ್ರೋಹಿಗಳು ತೀರ್ಮಾನಿಸಿದರು.

ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡಿರಿ. ಅಲ್‌ಜೀರಿಯಕ್ಕಾಗಿಯೂ ದುಆ ಮಾಡಿರಿ. ಅಲ್ಲೂ ಪುನಃ ಕೇಸ್ ಆರಂಭವಾಗುತ್ತಿದೆ. ಅಲ್ಲಾಹನು ಅವರೆಲ್ಲರ ಕಷ್ಟತೆಗಳನ್ನು ಸುಗಮಗೊಳಿಸಲಿ. ಎದುರಾಳಿಗಳ ಕಾಠಿಣ್ಯವನ್ನು ಅಲ್ಲಾಹನು ಬೇಗನೇ ದೂರಮಾಡಲಿ. ಈಗ ನಮಾಝಿನ ನಂತರ ನಾನು ಕೆಲವು ಜನಾಝ ಗಾಇಬ್ ಸಹ ನಿರ್ವಹಿಸುವೆನು. ಅವರ ಬಗ್ಗೆಗಿನ ಪ್ರಸ್ತಾಪವನ್ನು ಸಹ ನಾನಿಲ್ಲಿ ಮಾಡುತ್ತೇನೆ.

ಮೊದಲ ಜನಾಝದ ಪ್ರಸ್ತಾಪ ಖಾದಿಯಾನಿನ ನಾಇಬ್ ನಾಝಿರ್ ದಅ್‌ವತೇ ಇಲಲ್ಲಾಹ್ ಜುನೂಬಿ ಹಿಂದ್ ಆದ ಸನ್ಮಾನ್ಯ ಮೌಲವಿ ಮುಹಮ್ಮದ್ ನಜೀಬ್ ಖಾನ್ ಸಾಹಿಬ್‌ರದ್ದಾಗಿದೆ. ಅವರು ಕೇರಳದ ಏರ್‌ನಾಕುಲಂ ಜಿಲ್ಲೆಯ ಕಾಕನಾಡ್ ಜಮಾಅತಿನ ಮಾಸ್ಟರ್ ಬಿ.ಎಂ. ಮುಹಮ್ಮದ್ ಸಾಹಿಬ್‌ರ ಮಗನಾಗಿದ್ದರು. ಫೆಬ್ರವರಿ 14ರಂದು ಹೃದಯಾಘಾತದ ಕಾರಣದಿಂದ ನಿಧನರಾಗಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು ಅವರು ಪತ್ನಿಯನ್ನಲ್ಲದೆ ಮೂವರು ಪುತ್ರರನ್ನು ಅಗಲಿರುವರು. ಮೂವರು ಪುತ್ರರು ವಖ್ಫೇ ನೌವಿನ ಅನುಗ್ರಹೀತ ಯೋಜನೆಯಲ್ಲಿ ಸೇರಿರುವವರಾಗಿದ್ದಾರೆ. ಒಬ್ಬ ಮಗನು ಜಾಮಿಅ ಅಹ್ಮದಿಯಾದಲ್ಲಿ ಕಲಿಯುತ್ತಿದ್ದಾನೆ. ದಿವಂಗತರು ಜನ್ಮತಃ ಅಹ್ಮದಿಯಾಗಿರಲಿಲ್ಲ. ಬದಲಾಗಿ, 17ನೇ ವಯಸ್ಸಿನಲ್ಲಿ ತಂದೆಯ ಮುಖಾಂತರ ಅವರಿಗೆ ಅಹ್ಮದಿಯಾ ಜಮಾಅತಿನ ಪರಿಚಯವಾಗಿತ್ತು. ಹೀಗೆ ಅವರು ಜಮಾಅತಿನ ಸಾಹಿತ್ಯಗಳನ್ನು ವಿಶೇಷವಾಗಿ ಇಸ್ಲಾಂ ಧರ್ಮ ತತ್ವಜ್ಞಾನವೆಂಬ ಗ್ರಂಥವನ್ನು ಓದಲು ಶುರುಮಾಡಿದರು. "ಒಬ್ಬನು ಎಷ್ಟು ವಯಸ್ಸಿನಲ್ಲಿ ಸ್ವತಃ ನಿರ್ಧಾರವನ್ನು ಮಾಡಬಹುದು" ಎಂದು ಅವರೊಮ್ಮೆ ತನ್ನ ತಂದೆಯೊಡನೆ ಕೇಳಿದರು. 17, 18 ವರ್ಷ ಪ್ರಾಯದಲ್ಲಿ ಸ್ವತಃ ತೀರ್ಮಾನವನ್ನು ಮಾಡಬಹುದೆಂದು ಅವರ ತಂದೆ ಉತ್ತರಿಸಿದರು. ಹೀಗೆ ಅವರು ಮೌಲಾನ ಮುಹಮ್ಮದ್ ಅಲವೀ ಸಾಹಿಬ್‌ರ ಮೂಲಕ ಬೈಅತ್ ಮಾಡಿಕೊಂಡು ಜಮಾಅತಿನಲ್ಲಿ ಪ್ರವೇಶಿಸಿದರು. ಬೈಅತ್ತಿನ ಸಂಬಂಧಿಸಿ ಮೌಲಾನ ಅಲವಿ ಸಾಹಿಬ್‌ರು ತನ್ನ ಒಂದು ಕನಸನ್ನು ಹೀಗೆ ವಿವರಿಸುತ್ತಾರೆ: ನನ್ನ ಕಡೆಗೆ ಹಲವಾರು ನಕ್ಷತ್ರಗಳು ಬರುತ್ತಿರುವುದಾಗಿ ನಾನು ಕನಸಿನಲ್ಲಿ ಕಂಡೆನು. ಅವುಗಳಲ್ಲಿ ಒಂದು ಸಣ್ಣ ನಕ್ಷತ್ರ ಬಹಳ ವೇಗವಾಗಿ ಬರುತ್ತಿರುವುದಾಗಿ ಕಂಡೆನು. ಈ ಸಣ್ಣ ನಕ್ಷತ್ರವನ್ನು ವ್ಯಾಖ್ಯಾನಿಸುತ್ತಾ ಅದು ಮೌಲವಿ ಮುಹಮ್ಮದ್ ನಜೀಬ್ ಖಾನ್ ಸಾಹಿಬ್ ಆಗಿದ್ದರು ಎಂದು ಮೌಲವಿ ಅಲವಿ ಸಾಹಿಬ್ ಹೇಳುತ್ತಿದ್ದರು. ಹೇಗಿದ್ದರೂ ಅವರು ತನ್ನ ಮನೆಯಲ್ಲಿ ಮೊತ್ತಮೊದಲು ಬೈಅತ್ ಮಾಡಿದ ವ್ಯಕ್ತಿಯಾಗಿದ್ದರು. ಅವರ ತಂದೆಗೆ ಜಮಾಅತಿನ ಬಗ್ಗೆ ಗೊತ್ತಿದ್ದರೂ ಅಹ್ಮದಿಯಾಗಿರಲಿಲ್ಲ. ಅನಂತರ ನಜೀಬ್ ಸಾಹಿಬ್‌ರ ಪರಿಶ್ರಮದಿಂದಲೇ ತಾಯಿ, ಸಹೋದರರು ಮತ್ತು ತಂದೆ ಬೈಅತ್ ಮಾಡಿದ್ದರು. ಬೈಅತ್ ಮಾಡಿದ ನಂತರ ಒಂದು ಕನಸಿನ ಆಧಾರದಲ್ಲಿ ಅವರು ಜಾಮಿಅ ಅಹ್ಮದಿಯಾದಲ್ಲಿ ಪ್ರವೇಶಿಸಿದ್ದರು ಮತ್ತು ವಖ್ಫೇ ಝಿಂದಗಿಯಾಗಿ ಜಮಾಅತಿನ ಸೇವೆ ಮಾಡುವ ನಿರ್ಧಾರವನ್ನು ತೆಗೆದುಕೊಂಡರು. ಅಲ್ಲಿಂದ ತೇರ್ಗಡೆಯಾದ ನಂತರ ಭಾರತದ ಹಲವು ಕಡೆ ಅವರ ಪೋಸ್ಟಿಂಗ್ ಆಗಿತ್ತು. ಮೊದಲು ಚಂಢಿಗಢ್‌ನಲ್ಲಿ ಅನಂತರ ಹಲವಾರು ಸ್ಥಳಗಳಲ್ಲಿ ಮುಬಲ್ಲಿಗ್‌ರಾಗಿ ಸೇವೆ ಸಲ್ಲಿಸಿದರು. ಅನಂತರ ನಾನು ಅವರನ್ನು ನಾಇಬ್ ನಾಝಿರ್ ದಅ್‌ವತೇ ಇಲಲ್ಲಾಹ್ ಆಗಿ ನಿಶ್ಚಯಿಸಿದೆ. ಅದೇ ರೀತಿಯಲ್ಲಿ ನಾಇಬ್ ಇಂಚಾರ್ಜ್ ನೂರುಲ್ ಇಸ್ಲಾಮಿನಲ್ಲಿ ತಬ್ಲೀಗಿನ ಕೆಲಸವನ್ನು ಬಹಳ ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದರು. ಪ್ರತಿಯೊಂದು ಕೆಲಸವನ್ನು ಬಹಳ ನಿಷ್ಠೆಯಿಂದ ಅತ್ಯಂತ ಜವಾಬ್ದಾರಿಯುತವಾಗಿ ಮತ್ತು ಚೊಕ್ಕವಾಗಿ ಸಮಯಕ್ಕೆ ಸರಿಯಾಗಿ ನಿರ್ವಹಿಸುತ್ತಿದ್ದರು. ಕೆಲಸವನ್ನು ಜವಾಬ್ದಾರಿಯುತವಾಗಿ ಮತ್ತು ಸಮಯಕ್ಕೆ ಸರಿಯಾಗಿ ಮಾಡುವುದು ಅವರ ಸಹಜ ಸ್ವಭಾವವಾಗಿತ್ತು. ಆರಾಧನೆಯ ಕಡೆಗೆ ವಿಶೇಷ ಗಮನವಿತ್ತು. ಮನೆಯವರ ಗಮನವನ್ನು ಸಹ ಅದರ ಕಡೆಗೆ ಸೆಳೆಯುತ್ತಿದ್ದರು. ಜನಸೇವೆಯಲ್ಲೂ ಸಹ ವಿಶೇಷವಾಗಿ ಭಾಗವಹಿಸುತ್ತಿದ್ದರು.

ನೂರುಲ್ ಇಸ್ಲಾಮಿನ ಇಂಚಾರ್ಜ್ ಆದ ಶೀರಾಝ್ ಸಾಹಿಬ್ ಬರೆಯುತ್ತಾರೆ: ನಿಯತವಾಗಿ ಬೈತುದ್ದುಆದಲ್ಲಿ ದುಆ ಮಾಡಲಿಕ್ಕೆ ಹೋಗುತ್ತಿದ್ದರು. ಬಹಳ ಸಭ್ಯರಾಗಿದ್ದರು, ಪ್ರಾಮಾಣಿಕವಾಗಿ ದೀನಿನ ಸೇವೆ ಮಾಡುವ ಆವೇಶವನ್ನು ಹೊಂದಿದ್ದರು. ಖಲೀಫತುಲ್ ಮಸೀಹ್‌ರ ತರಬೇತಿ ಮತ್ತು ತಬ್ಲೀಗಿನ ಟಾರ್ಗೆಟ್‌ಗಳನ್ನು ಈಡೇರಿಸಲು ಕಾರ್ಯನಿರತರಾಗುತ್ತಿದ್ದರು. ಜಮಾಅತಿನ ಪುಸ್ತಕಗಳನ್ನು ಮಲಯಾಳಂ ಭಾಷೆಯಲ್ಲಿ ತರ್ಜುಮೆ ಮಾಡುವ ಹಾಗೂ ತರ್ಜುಮೆ ಮಾಡಿದ ಪುಸ್ತಕಗಳನ್ನು ರಿವ್ಯೂ ಮತ್ತು ಚೆಕಿಂಗ್ ಮಾಡುವ ಸೌಭಾಗ್ಯವನ್ನು ಸಹ ಪಡೆದಿದ್ದರು. ನಾಝಿರ್ ನಶ್ರೊ ಇಶಾಅತ್ ಖಾದಿಯಾನ್ ದಿವಂಗತರ ಸೇವೆಗಳಿಗೆ ಸಂಬಂಧಿಸಿ ಹೀಗೆ ಬರೆದಿರುವರು: ದಿವಂಗತರಿಗೆ ಅಲ್‌ವಸಿಯ್ಯತ್, ತಜಲ್ಲಿಯಾತೇ ಇಲಾಹಿಯ್ಯ, ಇರ್ಫಾನೇ ಇಲಾಹಿ, ಖಾಇದ ಯಸ್ಸರ್‌ನಲ್ ಖುರ್‌ಆನ್ ಮತ್ತು ತಹ್ರೀಕ್ ವಖ್ಫೇ ನೌವಿನ ಕುರಿತು ನನ್ನ ಖುತ್ಬಗಳನ್ನು ಮಲಯಾಳಂ ಭಾಷೆಯಲ್ಲಿ ತರ್ಜುಮೆ ಮಾಡುವ ಸೌಭಾಗ್ಯ ಲಭಿಸಿತ್ತು. ಅದೇ ರೀತಿಯಲ್ಲಿ ತಫ್ಸೀರೇ ಸಗೀರ್‌ನ ಮಲಯಾಳಂ ತರ್ಜುಮೆಯ ರೀಪ್ರಿಂಟಿಂಗಿನ ಸಮಯದಲ್ಲಿ ಅದರ ಚೆಕಿಂಗ್ ಮಾಡುವ ಸೌಭಾಗ್ಯವನ್ನು ಸಹ ಪಡೆದಿದ್ದರು. ಅವರ ಒಂದು ಪುಸ್ತಕವಾದ 'ನಿಸಾಬೇ ತಅ್‌ಲೀಂ' ಮಲಯಾಳಂ ಭಾಷೆಯಲ್ಲಿದೆ. 2013ರಿಂದ 2016ರ ತನಕ ಅವರಿಗೆ ಸದರ್ ರಿವ್ಯೂ ಕಮಿಟಿ ಕೇರಳ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. ಕೇರಳದ ಎರನಾಕುಲಂ ಜಿಲ್ಲೆಯ ಅಮೀರ್ ಸಾಹಿಬ್‌ರಾದ ಅಬೂಬಕ್ಕರ್ ಸಾಹಿಬ್‌ರು ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್‌ರ(ಅ) ಲಿಖಿತಗಳನ್ನು ತರ್ಜುಮೆ ಮಾಡಿ ಜನರಿಗೆ ತಲುಪಿಸುವ ಆವೇಶ ಅವರಿಗೆ ಇತ್ತು. ಬಲಹೀನ ವಿಶ್ವಾಸಿಗಳನ್ನು ಸ್ಥಿರಚಿತ್ತತೆಯ ಮಟ್ಟಕ್ಕೆ ತಲುಪಿಸಲು ಮತ್ತು ಅವರ ಸ್ಥೈರ್ಯತೆಗಾಗಿ ಸದಾ ಪ್ರಯತ್ನಿಸುತ್ತಿದ್ದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ.

ಎರಡನೇ ಜನಾಝದ ಪ್ರಸ್ತಾಪ ಚೌಧರಿ ಅಹ್ಮದ್ ದೀನ್ ಚಟ್ಟ ಸಾಹಿಬ್‌ರ ಮಗನಾದ ನದೀರ್ ಅಹ್ಮದ್ ಖಾದಿಮ್ ಸಾಹಿಬ್‌ರದ್ದಾಗಿದೆ. ಅವರು ಎಡಿಶನಲ್ ನಾಝಿರ್ ಇಶಾಅತ್‌ರಾದ ಮುನೀರ್ ಬಿಸ್ಮಿಲ್ ಸಾಹಿಬ್‌ರ ಹಿರಿಯ ಸಹೋದರರಾಗಿದ್ದರು. ಫೆಬ್ರವರಿ 6ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಾತರಾದ ಚೌಧರಿ ಶಾಹ್ ದೀನ್ ಸಾಹಿಬ್‌ರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ನದೀರ್ ಖಾದಿಮ್ ಸಾಹಿಬ್‌ರು ಕಾಲೇಜಿನ ಕಾಲದಿಂದ ದೀನೀ ಸೇವೆಯನ್ನು ಆರಂಭಿಸಿದ್ದರು. ಅಲ್ಲಾಹನು ಅವರಿಗೆ ಬರಹ ಮತ್ತು ಭಾಷಣದ ವಿಶೇಷವಾದ ಸಾಮರ್ಥ್ಯವನ್ನು ನೀಡಿದ್ದನು.

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 08 April 2021, Issue No. 14

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

ಯೌವ್ವನದಿಂದ ಕೊನೆಯುಸಿರು ತನಕ ಭಾಷಣ, ಬರಹ ಮತ್ತು ಉಪದೇಶಗಳ ಮೂಲಕ ದೀನನ ಸೇವೆ ಮತ್ತು ತಬ್ಲೀಗ್‌ನಲ್ಲಿ ನಿರತರಾಗಿದ್ದರು. ಖುದ್ದಾಮುಲ್ ಅಹ್ಮದಿಯಾ ರಬ್ವದ ಸಹಾಯಕ ಸದರ್ ಆಗಿದ್ದರು. ಅನಂತರ ಮೂತಮಿದ್ ಎಂಬ ನೆಲೆಯಲ್ಲಿ ಸೇವೆ ಮಾಡುವ ಸೌಭಾಗ್ಯವನ್ನು ಪಡೆದರು. ಅನಂತರ ಬಹಾವ್ ಲಂಗರ್ ಜಿಲ್ಲೆಯ ನಾಇಬ್ ಅಮೀರ್ ಸಹ ಆಗಿದ್ದರು. ಮಜ್ಲಿಸ್ ಅನ್ಸಾರುಲ್ಲಾಹ್‌ದ ನಾಇಬ್ ಖಾಇದ್ ಉಮೂಮಿ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ದಾರುಲ್ ಖಝಾ ರಬ್ವದ ಖಾಝಿ ಸಹ ಆಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್‌ನೊಂದಿಗೆ ವರ್ತಿಸಲಿ ಮತ್ತು ಅವರ ಸಂಬಂಧಿಕರಿಗೂ ಅವರ ಮಕ್ಕಳಿಗ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ಸನ್ಮಾನ್ಯ ಅಲ್‌ಹಾಜ್ಜ್ ಡಾಕ್ಟರ್ ನಾನಾ ಮುಸ್ತಫಾ ಏಟೀ ಬಾಟಿಂಗ್ ಸಾಹಿಬ್‌ರದ್ದಾಗಿದೆ. ಅವರು ಘಾನದಲ್ಲಿ ಅಲ್‌ಹಾಜೀ ಚೋಚೋ ಎಂಬ ಪ್ರಸಿದ್ಧರಾಗಿದ್ದರು. ಜನವರಿ 17ರಂದು ಎಪ್ಪತ್ತು ವರ್ಷ ಪ್ರಾಯದಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರು ಕ್ರೈಸ್ತ ಮನೆತನದಲ್ಲಿ ಜನಸಿದ್ದರು. 1979ರಲ್ಲಿ ಅವರು ಅಹ್ಮದಿಯ್ಯತ್ ಸ್ವೀಕಾರದ ಸೌಭಾಗ್ಯವನ್ನು ಪಡೆದರು. ಅವರು ತಮ್ಮ ಜೀವಿತವನ್ನು ಡ್ರೈವರ್ ಆಗಿ ಶುರುಮಾಡಿದ್ದರು. ಅವರಿಗೆ ಅಮೀರ್ ಅಬ್ದುಲ್ ವಹ್ಹಾಬ್ ಆದಂ ಸಾಹಿಬ್‌ರ ಜೊತೆಗೆ ದೀರ್ಘ ಕಾಲದಿಂದ ಸೇವೆ ಸಲ್ಲಿಸುವ ಸಂದರ್ಭ ಸಿಕ್ಕಿತ್ತು. ಬ್ರಿಟನ್ ಮತ್ತು ಘಾನದಲ್ಲಿ ಜಮಾಅತಿನ ಪ್ರೆಸ್‌ನಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ಕೆಲವು ಕಾಲ ಜಪಾನನಲ್ಲೂ ಇದ್ದರು. ಅಲ್ಲಿ ಅವರನ್ನು ಜಮಾಅತಿನ ಲೋಕಲ್ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಹಸನ್ಮುಖರಾಗಿ ಮತ್ತು ಸದಾ ದೀನೀ ಕೆಲಸಗಳಲ್ಲಿ ನಿರತರಾಗಿರುವಂತಹ ವ್ಯಕ್ತಿಯಾಗಿದ್ದರು ಎಂದು ನಾನು ಅಲ್ಲಿಗೆ ಹೋಗಿದ್ದಾಗ ನೋಡಿದ್ದೇನೆ. ಯಾವುದೇ ಸ್ಥಾನವಿಲ್ಲದಿದ್ದರೂ ಯಾವಾಗಲೂ ಎಲ್ಲ ಕೆಲಸಗಳಲ್ಲಿ ಹಾಜರಾಗಿರಲು ಶ್ರಮಿಸುತ್ತಿದ್ದರು. ಅನಂತರ ಅವರು ತನ್ನ ವ್ಯಾಪಾರವನ್ನು ಶುರುಮಾಡಿದ್ದರು. ಅದರಲ್ಲಿ ಅಭಿವೃದ್ಧಿ ಪಡೆಯುತ್ತಾ ಘಾನದ ಪ್ರಸಿದ್ಧ ವ್ಯಾಪಾರಸ್ಥರಲ್ಲಿ ಗಣಿಸಲ್ಪಡುತ್ತಿದ್ದರು. ಚೂಚೂ ಇಂಡಸ್ಟ್ರೀ ಎಂಬ ಹೆಸರಲ್ಲಿ ಅವರ ಒಂದು ಫ್ಯಾಕ್ಟರಿ ಸಹ ಇತ್ತು. ಅಲ್ಲಾಹನ ಅನುಗ್ರಹದಿಂದ ಖಲೀಫರ ದುಆ ಮತ್ತು ತ್ಯಾಗದ ಕಾರಣದಿಂದ ಆ ವ್ಯಾಪಾರದಲ್ಲಿ ವಿಜಯ ಉಂಟಾಯಿತು ಎಂದು ಹೇಳುತ್ತಿದ್ದರು. ತುಂಬ ಧನತ್ಯಾಗ ಮಾಡುತ್ತಿದ್ದರು. ಜಾಇದಾದಿನ ನ್ಯಾಶನಲ್ ಸೆಕ್ರಟರಿ ಎಂಬ ನೆಲೆಯಲ್ಲಿ ಘಾನದ 11 ವರ್ಷಗಳ ಕಾಲ ಸೇವೆ ಸಲ್ಲಿಸುವ ಸಂದರ್ಭವನ್ನು ಪಡೆದರು. ರೀಜನಲ್ ಪ್ರೆಸಿಡೆಂಟ್ ಎಂಬ ನೆಲೆಯಲ್ಲಿ ಸಹ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ದಿವಂಗತರು ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ದಿವಂಗತರು ಮೂವರು ಪತ್ನಿಯಂದಿರನ್ನು ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಅವರಿಗೆ ಒಬ್ಬ ಮಗನು ಸಹ ಇತ್ತು. ಕೆಲವು ವರ್ಷಗಳ ಹಿಂದೆ ಅವನ ವಫಾತ್ ಆಯಿತು.

ಕೋಫಿ ರೀಡ್‌ವದ ಮಿಶನರಿ ಆಗಿರುವ ಮುಬಾರಕ್ ಆದಿಲ್ ಸಾಹಿಬ್‌ರು ಬರೆಯುತ್ತಾರೆ: ಧರ್ಮ ಮತ್ತು ಮನುಷ್ಯತ್ವದ ಸೇವೆಗಾಗಿ ಸಮಯ ಮತ್ತು ಸಂಪತ್ತನ್ನು ಬಹಳವಾಗಿ ತ್ಯಾಗ ಮಾಡುವುದು ಮತ್ತು ವಿಧೇಯತ್ವ ಅವರ ವಿಶಿಷ್ಟ ಗುಣಗಳಾಗಿದ್ದುವು. ತಹಜ್ಜುದ್ ನಮಾಝ್ ಮತ್ತು ಐದು ಹೊತ್ತಿನ ನಮಾಝ್‌ಗಳ ಅನುಷ್ಠಾನದ ಕಡೆಗೆ ವಿಶೇಷ ಗಮನವಹಿಸುತ್ತಿದ್ದರು. ಚಂದಾಗಳನ್ನು ನಿಯತವಾಗಿ ಮತ್ತು ಸಮಯಕ್ಕೆ ಸರಿಯಾಗಿ ಪಾವತಿಸುತ್ತಿದ್ದರು. ಅವರು ಒಂದು ಮಸೀದಿಯನ್ನು ಪೂರ್ಣವಾಗಿ ಸ್ವಂತ ಖರ್ಚಿನಿಂದ ನಿರ್ಮಿಸಿದ್ದರು. ಹಲವು ಮಸೀದಿಗಳ ನಿರ್ಮಾಣದಲ್ಲಿ ಅರ್ಧಕ್ಕಿಂತ ಹೆಚ್ಚು ಖರ್ಚನ್ನು ನೀಡಿದ್ದರು. ಅದೇ ರೀತಿಯಲ್ಲಿ ಕೆಲವು ಮಿಶನ್ ಹೌಸ್‌ಗಳ ನಿರ್ಮಾಣ ಮತ್ತು ದುರಸ್ತಿಯಲ್ಲಿ ಸಹ ಖರ್ಚಿನ ಹಿರಿಯ ಭಾಗವನ್ನು ನೀಡುತ್ತಿದ್ದರು. ಜಮಾಅತಿನ ಭೂಮಿಯನ್ನು ಯಾರಾದರೂ ವಶಪಡಿಸಿದ್ದರೆ ಅಥವಾ ಇತರ ಸಮಸ್ಯೆಗಳು ಉಂಟಾದರೆ, ಕಾನೂನು ಕ್ರಮಕ್ಕಾಗಿ ಸ್ವತಃ ವಕೀಲ್‌ರನ್ನು ನೇಮಿಸುತ್ತಿದ್ದರು ಮತ್ತು ಕಾನೂನು ಕ್ರಮದ ಎಲ್ಲ ಖರ್ಚುಗಳನ್ನು ಸ್ವಂತ ಜೇಬುಖರ್ಚಿನಿಂದ ಪಾವತಿ ಮಾಡುತ್ತಿದ್ದರು. ಜಮಾಅತಿನಿಂದ ಪಡೆಯುತ್ತಿರಲಿಲ್ಲ. ಅಹ್ಮದಿಯ್ಯತಿನ ಸಂದೇಶದ ಪ್ರಚಾರಕ್ಕಾಗಿ ಅವರ ಹೃದಯದಲ್ಲಿ ಒಂದು ವಿಶೇಷ ಆವೇಶ ಮತ್ತು ಆಸಕ್ತಿಯಿತ್ತು. ತಂದೆತಾಯಂದಿರನ್ನು ಸಹ ತಬ್ಲೀಗ್ ಮಾಡಿ ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸುವಂತೆ ಮಾಡಿದ್ದರು. ಘಾನದ ಅರ್ಧದಷ್ಟು ಜನರು ಕೇಳುವ ಒಂದು ರೇಡಿಯೋ ಸ್ಟೇಶನಿನಲ್ಲಿ ಅರ್ಧ ಗಂಟೆಯ ತಬ್ಲೀಗಿನ ಕಾರ್ಯಕ್ರಮವನ್ನು ಮಾಡುವ ಖರ್ಚನ್ನು ಹತ್ತು ವರ್ಷಗಳಿಗಿಂತ ಹೆಚ್ಚು ಕಾಲದ ವರೆಗೆ ನೀಡುತ್ತಿದ್ದರು. ಅದು ಈಗಲೂ ಜಾರಿಯಲ್ಲಿದೆ. ಅವರ ಒಂದು ಟಿ.ವಿ. ಚಾನಲ್ ಸಹ ಇತ್ತು. ಅದರಲ್ಲಿಯೂ ಸ್ವಂತ ಖರ್ಚಿನಲ್ಲಿ ಪ್ರತಿದಿನ ಒಂದು ಪ್ರೋಗ್ರಾಂ ನಡೆಸುತ್ತಿದ್ದರು. ತಬ್ಲೀಗಿಗೆ ಸಂಬಂಧಿಸಿ ವಾರದಲ್ಲಿ ಒಂದು ವೀಡಿಯೋ ಪ್ರೋಗ್ರಾಂ ಸಹ ಪ್ರಸಾರವಾಗುತ್ತಿತ್ತು. ಈ ಕಾರ್ಯಕ್ರಮಗಳ ಮೂಲಕ ಲಕ್ಷಾಂತರ ಜನರಿಗೆ ಜಮಾಅತಿನ ಸಂದೇಶ ತಲುಪಿತ್ತು ಮತ್ತು ನೂರಾರು ಜನರಿಗೆ ಅಹ್ಮದಿಯ್ಯತ್ ಸ್ವೀಕಾರದ ಸೌಭಾಗ್ಯ ಸಿಕ್ಕಿತ್ತು. ಒಂದು ವಾಹನವನ್ನು ತಬ್ಲೀಗಿನ ಕೆಲಸಕ್ಕಾಗಿ ಮುಡಿಪ್ಪಾಗಿ ಇಟ್ಟಿದ್ದರು. ತಬ್ಲೀಗ್ ಮತ್ತು ತರಬೇತಿ ಜವಾಬ್ದಾರಿಗಳ ನಿರ್ವಹಣೆಯನ್ನು ಸುಲಭಗೊಳಿಸಲು ಮತ್ತು ಅದರಲ್ಲಿ ವೇಗತೆ ಉಂಟುಮಾಡುವ ಉದ್ದೇಶದಿಂದ ಅವರು ಕೆಲವು ಮುಅಲ್ಲಿಮರಿಗೆ ಮತ್ತು ಮುರಬ್ಬಿಯರಿಗೆ ಮೋಟರ್ ಸೈಕಲ್ ಮತ್ತು ಕೆಲವರಿಗೆ ಕಾರುಗಳನ್ನು ಖರೀದಿ ಮಾಡಿ ನೀಡಿದ್ದರು. ರಹಸ್ಯವಾಗಿ ಅವರಿಗೆ ಆರ್ಥಿಕ ಸಹಾಯವನ್ನು ಸಹ ಮಾಡುತ್ತಿದ್ದರು. ಅಹ್ಮದಿಯ್ಯತ್ತನ್ನು ಸ್ವಂತ ಮತ್ತು ಅಮೂಲ್ಯವಾದ ಆಸ್ತಿಯ ಹಾಗೆ ಪ್ರಿಯವೆಂದು ಅರಿತುಕೊಂಡು ನಿಷ್ಠೆಯಿಂದ ಅದರ ಸೇವೆ ಮತ್ತು ಸಂರಕ್ಷಣೆ ಮಾಡಬೇಕೆಂದು ಜಮಾಅತಿನ ವ್ಯಕ್ತಿಗಳನ್ನು ಉಪದೇಶಿಸುತ್ತಿದ್ದರು. ತಬ್ಲೀಗಿಗಾಗಿ ಎಲ್ಲ ರೀತಿಯ ತ್ಯಾಗಗಳನ್ನು ಮಾಡುವುದರಿಂದ ಅಲ್ಲಾಹನು ಸಹ ಅಪರಿಮಿತವಾದ ಅನುಗ್ರಹಗಳನ್ನು ಮತ್ತು ಔದಾರ್ಯವನ್ನು ವರ್ಷಿಸುವನು ಎಂದು ಹೇಳುತ್ತಿದ್ದರು. ಸ್ವತಃ ಅದಕ್ಕೆ ಮಾದರಿಯಾಗಿದ್ದರು. ಇತರರಿಗೆ ಅವರು ಮಾಡುವ ಉಪದೇಶಗಳ ಪ್ರಕಾರ ಸ್ವತಃ ನಡೆಯಲು ಪ್ರಯತ್ನಿಸುತ್ತಿದ್ದರು. ಕೋಫೂರೀಡೋ ರೀಜನಿನ ಅತಿದೊಡ್ಡ ಆಸ್ಪತ್ರೆಗೆ ಹೋಗುವ ರಸ್ತೆಗಳಲ್ಲಿ ಕೆಲವು ಕೆಟ್ಟುಹೋಗಿದ್ದುವು. ಇದರಿಂದ ರೋಗಿಗಳಿಗೆ ತುಂಬ ತೊಂದರೆಯುಂಟಾಗಿತ್ತಿದ್ದುವು. ಅವರು ಸ್ವಂತ ಖರ್ಚಿನಿಂದ ಅದನ್ನು ಪುನಃ ಸ್ಥಾಪಿಸಿದರು. ಅದರ ಉದ್ಘಾಟನೆಗಾಗಿ ಅಲ್ಲಿಗೆ ರೀಜನಲ್ ಮಿನಿಸ್ಟರ್, ರಾಜಕೀಯ ವ್ಯಕ್ತಿಗಳು, ಡಾಕ್ಟರ್, ಮೀಡಿಯಾದವರು ಮುಂತಾದ ಎಲ್ಲರೂ ಬಂದಿದ್ದರು. ಬಂದವರಲ್ಲಿ ಹೆಚ್ಚಿನವರು ಅಹ್ಮದಿಯೇತರು ಅಥವಾ ಕ್ರೈಸ್ತರು ಆಗಿದ್ದರು. ಈ ಸಂದರ್ಭದಲ್ಲಿ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು: ನಾನು ಒಬ್ಬ ಅಹ್ಮದಿ ಮುಸ್ಲಿಮನಾಗಿರುವೆನು. ಎರಡನೇ ಮಸೀಹರಾದ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿಯನ್ನು ನಂಬುತ್ತೇನೆ. ಮಸೀಹ್ ಮೌಊದ್ ಮತ್ತು ಅವರ ಖಲೀಫರೇ ನನಗೆ ದೇವನ ಹಕ್ಕುಗಳನ್ನು ನೆರವೇರಿಸಲು ಮನುಷ್ಯತ್ವದ ಸೇವೆ ಸಹ ಮಾಡಬೇಕೆಂದು ಕಲಿಸಿದ್ದರು. ಆದ್ದರಿಂದ ಅಹ್ಮದೀ ಮುಸ್ಲಿಂ ಎಂಬ ನೆಲೆಯಲ್ಲಿ ಮನುಷ್ಯರ ಮೇಲೆ ಸಹಾನುಭೂತಿ ತೋರಿಸುವುದನ್ನು ಮತ್ತು ಅವರ ದುಃಖಗಳನ್ನು ದೂರಮಾಡುವುದನ್ನು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ಆದ್ದರಿಂದಲೇ ನಾನು ಆಸ್ಪತ್ರೆಗಾಗಿ ಈ ರಸ್ತೆಗಳ ನಿರ್ಮಾಣ ಮಾಡಿದ್ದೇನೆ." ಅವರು 48ನೇ ವಯಸ್ಸಿನಲ್ಲಿ ಪವಿತ್ರ ಖುರ್‌ಆನನ್ನು ಪುನಃ ಮುಅಲ್ಲಿಂ ಜಮಾಲುದ್ದೀನ್ ಸಾಹಿಬ್‌ರ ಮೂಲಕ ಕಲಿತರು ಮತ್ತು ಸರಿಯಾದ ಉಚ್ಚಾರಣೆ ಕಲಿಯಲಿಕ್ಕಾಗಿ ಯಸ್ಸರ್‌ನಲ್ ಖುರ್‌ಆನ್ ಸಹ ಪುನಃ ಕಲಿತರು. ಅನಂತರ ನಿಯತವಾಗಿ ತರ್ಜುಮೆಯೊಂದಿಗೆ ತಿಲಾವತ್ ಮಾಡುವ ಅಭ್ಯಾಸವನ್ನು ಅಳವಡಿಸಿಕೊಂಡರು ಮತ್ತು ಬಹಳ ಚಿಂತನ ಮಂಥನ ಮಾಡುತ್ತಾ ಓದುತ್ತಿದ್ದರು. ಹಲವಾರು ಮಕ್ಕಳನ್ನು ಅವರು ದತ್ತು ಪಡೆದುಕೊಂಡಿದ್ದರು. ಅವರ ವಾಸಕ್ಕಾಗಿ ತಮ್ಮ ಮನೆಯಲ್ಲಿ ಕೊಠಡಿಗಳನ್ನು ಒದಗಿಸಿಕೊಟ್ಟಿದ್ದರು. ಅವರ ಧಾರ್ಮಿಕ ಮತ್ತು ಭೌತಿಕ ಶಿಕ್ಷಣದ ಏರ್ಪಾಡು ಸಹ ಮಾಡಿದ್ದರು. ಒಟ್ಟಿನಲ್ಲಿ ಅನೇಕ ಒಳಿತುಗಳನ್ನು ಮಾಡುವ ವ್ಯಕ್ತಿಯಾಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದೊಂದಿಗೆ ವರ್ತಿಸಲಿ ಮತ್ತು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಸಂಬಂಧಿಕರಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ರಬ್ವದ ಫಝ್ಲ್ ದೀನ್ ಸಾಹಿಬ್‌ರ ಮಗನಾದ ಸನ್ಮಾನ್ಯ ಗುಲಾಂ ನಬಿ ಸಾಹಿಬ್‌ರದ್ದಾಗಿದೆ. ಅವರು ಗಾಬೂನಿನ ಮುರಬ್ಬಿಯಾದ ಝಿಯಾರ್‌ರಹ್ಮಾನ್ ತಯ್ಯಿಬ್ ಸಾಹಿಬ್‌ರ ತಂದೆಯಾಗಿದ್ದರು. ಫೆಬ್ರವರಿ 2ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಜನ್ಮತಃ ಅಹ್ಮದಿಯಾಗಿದ್ದರು. ಬ್ಯಾಂಕಿನಲ್ಲಿ ನೌಕರಿ ಮಾಡುತ್ತಿದ್ದರು. ಅಲ್ಲಿಂದ ನಿವೃತ್ತರಾದ ನಂತರ ಡಸ್ಕದಲ್ಲಿ ಬಂದು ನೆಲೆಸಿದ್ದರು. ಅಲ್ಲಿ ಸೆಕ್ರಟರಿ ಮಾಲ್ ಆಗಿಯೂ, ನಾಇಬ್ ಸದರ್ ಆಗಿಯೂ ಜನರಲ್ ಸೆಕ್ರಟರಿಯಾಗಿಯೂ ಝಈಂ ಅನ್ಸಾರುಲ್ಲಾಹ್ ಆಗಿಯೂ ಇಮಾಮುಸ್ಸಲಾತ್ ಆಗಿಯೂ ಸೇವೆ ಸಲ್ಲಿಸಿದರು. ತಹಜ್ಜುದ್ ನಮಾಝ್ ನಿಯತವಾಗಿ ನಿರ್ವಹಿಸುತ್ತಿದ್ದರು. ಐದು ಹೊತ್ತಿನ ನಮಾಝ್ ಮಸೀದಿಯಲ್ಲಿ ನಿರ್ವಹಿಸಲು ಪ್ರಯತ್ನಿಸುತ್ತಿದ್ದರು. ನಿಯತವಾಗಿ ಉಚ್ಚ ಸ್ವರದಲ್ಲಿ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು. ಅತ್ಯಂತ ಕರುಣಾಳು, ಸಹಾನುಭೂತಿ ಇರುವ ಸೌಮ್ಯ ಸ್ವಭಾವದ, ಸಹನೆಯುಳ್ಳ ವ್ಯಕ್ತಿಯಾಗಿದ್ದರು. ನಾನು ಹೇಳಿದಂತೆ ಗಾಬೂನಿನ ಮುರಬ್ಬಿ ಝಿಯಾರ್‌ರಹ್ಮಾನ್ ಸಾಹಿಬ್‌ರ ತಂದೆಯಾಗಿದ್ದರು. ಸ್ಥಿತಿಗತಿಗಳ ಕಾರಣದಿಂದ ತನ್ನ ತಂದೆಯ ಜನಾಝದಲ್ಲಿ ಮತ್ತು ದಫನ್ ಕಾರ್ಯದಲ್ಲಿ ಭಾಗವಹಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅಲ್ಲಾಹನು ಅವರಿಗೆ ಸಹನೆ ಮತ್ತು ಧೈರ್ಯವನ್ನು ನೀಡಲಿ ಮತ್ತು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ.

***************

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.